# ಶ್ರೀ ಪದ್ಮಾವತಿ ಪರಿಣಯ

(ಶ್ರೀ ಪದ್ಮಾವತಿ ಶ್ರೀನಿವಾಸರ ದಿವ್ಯ ಕಲ್ಯಾಣ ವೈಭವ)



**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**



ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು

# ಶ್ರೀ ಪದ್ಮಾವತಿ ಪರಿಣಯ

(ಶ್ರೀ ಪದ್ಮಾವತಿ ಶ್ರೀನಿವಾಸರ ದಿವ್ಯ ಕಲ್ಯಾಣ ವೈಭವ)




**ವಿಶ್ವಪತಿ**

**(ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ)**



**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಪದ್ಮಾವತಿ ಪರಿಣಯ

(ಶ್ರೀ ಪದ್ಮಾವತಿ ಶ್ರೀನಿವಾಸರ ದಿವ್ಯ ಕಲ್ಯಾಣ ವೈಭವ)

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© ಸರ್ವಹಕ್ಕುಗಳು ರಚಯಿತನದು

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road,**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ವೇಂಕಟಾದ್ರಿ ಸಮಂಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ |**
**ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ||**

ಈ ಬ್ರಹ್ಮಾಂಡದಲ್ಲಿ ವೆಂಕಟಾದ್ರಿಗೆ ಸಮಾನವಾದ ಪವಿತ್ರ ಪ್ರದೇಶ ಬೇರೊಂದಿಲ್ಲ. ಶ್ರೀ ಶ್ರೀನಿವಾಸನಿಗೆ ಸಮಾನರಾದ ದೇವರು ಹಿಂದೆಂದೂ ಇರಲಿಲ್ಲ, ಇನ್ನು ಮುಂದೆಯೂ ಇರುವುದಿಲ್ಲ. ಸಾಕ್ಷಾತ್ ಶ್ರೀಮನ್ನಾರಾಯಣನೇ ನಮ್ಮೆಲ್ಲರನ್ನೂ ಕಲಿಯುಗದ ಬಾಧೆಗಳಿಂದ ಕಾಪಾಡಿ, ಅನುಗ್ರಹಿಸಬೇಕೆಂದು ತಿರುಮಲದಲ್ಲಿ ಶ್ರೀ ವೇಂಕಟೇಶ್ವರನಾಗಿ ಸ್ವಯಂವ್ಯಕ್ತನಾಗಿ ಅರ್ಚಿಸುವ ರೂಪದಲ್ಲಿ ಪ್ರತ್ಯಕ್ಷನಾದನು. ಆ ಸ್ವಾಮಿಯು ಅತ್ಯಂತ ಕರುಣಾಮಯನು. ನಂಬಿದವರಿಗೆ ದಯಾ ಸಮುದ್ರನು. ಆಪತ್ತಿನಿಂದ ರಕ್ಷಿಸುವವನು. ಆ ಸ್ವಾಮಿಯನ್ನು ನಂಬಿದವರಿಗೆ ಯಾವುದೇ ರೀತಿಯ ಆಪತ್ತುಗಳು ಉಂಟಾಗುವುದಿಲ್ಲ. ಅತ್ಯಂತ ದಯಾಮಯಮೂರ್ತಿ ಆ ಶ್ರೀನಿವಾಸನು.

ನನ್ನ ತಂದೆ ತಾಯಿಯರಾದ, ಕೀರ್ತಿ ಶೇಷ : ಬ್ರಹ್ಮಶ್ರೀ ತಿಮ್ಮರಾಜು ಲಕ್ಷ್ಮೀನರಸಿಂಹರಾವ್ ಮತ್ತು ತಾಯಿ ಶ್ರೀಮತಿ ನಾಗರತ್ನಾಂಬ ಅವರುಗಳು ಅನೇಕ ವಿಧಗಳಿಂದ ಶ್ರೀನಿವಾಸನ ಸೇವೆಯನ್ನು ಮಾಡಿದ ಪುಣ್ಯವಂತರು. ನನ್ನ ತಂದೆ ತಾಯಿಯರಿಬ್ಬರಿಗೂ ಶ್ರೀನಿವಾಸನ ಮೇಲೆ ಅಪಾರ ಭಕ್ತಿ. ಬಾಲ್ಯದಿಂದಲೇ ನನ್ನ ತಂದೆಯವರು ದಿನಾಲು ಬೆಳಿಗ್ಗೆ ಪಠಿಸುತ್ತಿದ್ದ ಶ್ರೀ ವೇಂಕಟೇಶ್ವರ ಸ್ವಾಮಿಯ ಸುಪ್ರಭಾತವು ನನ್ನಲ್ಲಿ ಶ್ರೀನಿವಾಸನ ಬಗ್ಗೆ ಭಕ್ತಿಭಾವಗಳನ್ನು ಉಂಟುಮಾಡಿತು. ಅಂದಿನಿಂದ ಶ್ರೀನಿವಾಸನೇ ನನಗೆ ತಂದೆ, ತಾಯಿ, ಗುರು, ದೇವರು. ಅವನೇ ಯಜಮಾನನು ಕೂಡ.

1983ರಲ್ಲಿ ರೀಜನಲ್ ಇಂಜಿನಿಯರಿಂಗ್ ಕಾಲೇಜು, ವರಂಗಲ್.ನಿಂದ ಎಂ.ಟೆಕ್. ಓದಿದ ನಾನು 1984ರವರೆಗೆ ಆಲ್ವಿನ್ ಕಂಪನಿಯಲ್ಲಿ, 1989ವರೆಗೆ ಎಂ.ವಿ.ಎಸ್.ಆರ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗವನ್ನು ಮಾಡಿದೆನು. 1983ನಲ್ಲಿ ಚಿ|| ಸೌ|| ವೆಂಕಟ ರುಕ್ಮಿಣಿ ವೈದೇಹಿಯೊಂದಿಗೆ ವಿವಾಹ. ಮೂವರು ಮಕ್ಕಳು : ಆನಂದಿ, ಆಮುಕ್ತ ಮತ್ತು ಆದಿತ್ಯ.

ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ ಇದಕ್ಕೂಮೊದಲು ನಾನು 'ಶ್ರೀ ಶ್ರೀನಿವಾಸ ಮಹಾತ್ಮೆ, ಶ್ರೀ ವೇಂಕಟೇಶ್ವರ ವ್ರತಕಲ್ಪ, ಶ್ರೀ ವೇಂಕಟೇಶ್ವರ ದರ್ಶನ, ಅಮೃತಸೋಪಾನO, ಭಜೇ ಶ್ರೀನಿವಾಸಂ, Sri Srinivasa : Lord of Seven Hills ಮತ್ತು ಈಗ "ಶ್ರೀ ಪದ್ಮಾವತಿ ಪರಿಣಯ" ಎಂಬ ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಈ ರಚನೆಗಳೆಲ್ಲಾ ಆ ಅಮೃತಮೂರ್ತಿ ಶ್ರೀನಿವಾಸನ ಅನುಗ್ರಹದಿಂದ ಸಾಧ್ಯವಾಯಿತು. ಇದನ್ನೆಲ್ಲಾ ಶ್ರೀ ಸ್ವಾಮಿಯ ಮಹಾ ಪ್ರಸಾದವೆಂದೇ ಭಾವಿಸುತ್ತೇನೆ. ಲೇಖನಿಯನ್ನು ಹಿಡಿದುಕೊಂಡದ್ದು ಮಾತ್ರ ನಾನು, ಪ್ರತಿ ಅಕ್ಷರವು ಶ್ರೀ ಸ್ವಾಮಿಯ ಪ್ರೇರಣೆಯೇ! ಎಲ್ಲಾ ಆ ಸ್ವಾಮಿಯ ಅನುಗ್ರಹವೇ!

ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣವು ಜಗತ್ತಿನ ಕಲ್ಯಾಣವೇ! ಅವರ ಕಲ್ಯಾಣ ವಿಷಯಗಳನ್ನು ನೆನೆದರೆ ಮನಸ್ಸು ಪುಳಕಿತವಾಗುತ್ತದೆ. ಈ ಪುಸ್ತಕದ ರಚನೆ ಮಾಡುತ್ತಿರುವಾಗ ನನಗೆ ಅನೇಕ ಅದ್ಭುತ ಅನುಭವಗಳು ಆಗಿವೆ.

ಈ 'ಶ್ರೀ ಪದ್ಮಾವತಿ ಪರಿಣಯ' ಪುಸ್ತಕದ ರಚನೆಯನ್ನು ಪ್ರಾರಂಭಿಸಿದ ಕೆಲವು ದಿನಗಳಲ್ಲೆ ನನ್ನ ಜ್ಯೇಷ್ಠ ಪುತ್ರಿ ಚಿ|| ಸೌ|| ಆನಂದಿಯ ವಿವಾಹವು ನಿಶ್ಚಯವಾಗುವುದು ಆ ಸ್ವಾಮಿಯ ಲೀಲೆ, ಅನುಗ್ರಹವಲ್ಲದೇ ಮತ್ತೇನಲ್ಲ. ಈ ಪುಸ್ತಕವನ್ನು ಓದಿದ ಕನ್ಯೆಯರೆಲ್ಲರಿಗೂ ತಪ್ಪದೆ, ಕೂಡಲೇ ಶ್ರೀ ಸ್ವಾಮಿಯ ಅನುಗ್ರಹದಿಂದ ವಿವಾಹವು ನಿಶ್ಚಯವಾಗುವುತ್ತದೆಂದು ನನ್ನ ನಂಬಿಕೆ.

ಈ ಪುಸ್ತಕದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತೀಯೊಬ್ಬರಿಗೂ, ಈ ಪುಸ್ತಕವನ್ನು ಭಕ್ತಿಯಿಂದ ಪಠಿಸಿದವರಿಗೂ, ಹೇಳಿದವರಿಗೂ, ಕೇಳಿದವರಿಗೂ ಸಕಲ ಸೌಭಾಗ್ಯಗಳು, ಸಮಸ್ತ ಶ್ರೇಯಸ್ಸುಗಳು ಮತ್ತು ಆ ಶ್ರೀ ಶ್ರೀನಿವಾಸನ ಅನುಗ್ರಹವು ಯಾವಾಗಲೂ ಇರಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಇಂಥಹ ಮಹಾಭಾಗ್ಯವನ್ನು ಪ್ರಸಾದಿಸಿದ ಆ ಸ್ವಾಮಿಯ ಸೇವೆಯಲ್ಲೇ ಯಾವಾಗಲೂ ಇರುತ್ತೇನೆಂದು, 'ಶ್ರೀ ವೆಂಕಟ ತತ್ವ'ವನ್ನು ಪ್ರಜೆಗಳೆಲ್ಲರ ಹೃದಯದ ಹತ್ತಿರ ತೆಗೆದುಕೊಂಡು ಹೋಗುವುದೇ ನನ್ನ ಜೀವನದ ಗುರಿಯೆಂದು ಆ ಸ್ವಾಮಿಯನ್ನು ವಿನಂತಿಸಿಕೊಳ್ಳುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||

ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ |
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ||

|| ಶ್ರೀ ಲಕ್ಷ್ಮೀ ಶ್ರೀನಿವಾಸ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

***********

# ಈ ಪುಸ್ತಕವನ್ನು ಹೇಗೆ ಓದಬೇಕು?

ಭಗವಂತನಿಗೆ ಸಂಬಂದಪಟ್ಟ ಯಾವ ಪುಸ್ತಕವನ್ನಾದರೂ ಓದಲು ಯಾವುದೇ ನಿಯಮ ನಿಬಂಧನೆಗಳು ಇರುವುದಿಲ್ಲವೆಂದು ನನ್ನ ವಿಶ್ವಾಸ.

- ❖ ವಯಸ್ಸಿನಿಂದಾಗಲೀ, ಕುಲದಿಂದಾಗಲೀ ಭೇದಭಾವವಿಲ್ಲದೇ ಓದಬಹುದು. ಮನಸ್ಸು ನಿರ್ಮಲವಾಗಿಯೂ, ಶರೀರ ಶುಭ್ರವಾಗಿಯೂ ಇದ್ದರೆ ಸಾಕು. ಯಾರಾದರೂ, ಯಾವ ರೀತಿಯಿಂದಾದರೂ, ಯಾವ ಮಾಸದಲ್ಲಾದರೂ, ಯಾವ ದಿನವಾದರೂ, ಯಾವುದೇ ಶುದ್ದವಾದ ಪ್ರದೇಶದಲ್ಲಾದರೂ ಓದಬಹುದು. ಆ ಶ್ರೀಮನ್ನಾರಾಯಣನ ಬಗ್ಗೆ ಪುಸ್ತಕವನ್ನು ಓದಲು ಬೇಕಾದದ್ದು ನಿರ್ಮಲ ಭಕ್ತಿ ಮಾತ್ರವೇ, ಬೇರೇನಲ್ಲ. ಯಾವುದೇ ಕಠಿಣ ನೇಮನಿಷ್ಠೆಗಳು, ಉಪವಾಸಗಳ ಅವಸರವಿಲ್ಲ.

- ❖ ಇನ್ನು ಭಗವಂತನಿಗೆ ಸಂಬಂಧಿಸಿದ ಸ್ತೋತ್ರಗಳು, ಗ್ರಂಥ ಪಾರಾಯಣಗಳಿಗೆ ಕೆಲಕೆಲವು ಪ್ರತ್ಯೇಕ ಪರ್ವ ದಿನಗಳಲ್ಲಿ ಮತ್ತು ವೈಕುಂಠ ಏಕಾದಶಿಯಂತಹ ಅತಿಪವಿತ್ರ ದಿನಗಳಲ್ಲಿ ಪಠಿಸಿದರೆ, ತಪ್ಪದೇ ಫಲಿತವು ದ್ವಿಗುಣವಾಗಿರುತ್ತದೆ. ಖಂಡಿತಾ ಈ ವಿಷಯದಲ್ಲಿ ಸಂದೇಹವಿಲ್ಲ.

- ❖ ವಿವಾಹವು ಆಲಸ್ಯವಾಗುತ್ತಿರುವ ಕನ್ಯೆಯರು ಅಥವಾ ಅವರ ಕುಟುಂಬದ ಸದಸ್ಯರು ಯಾರಾದರಾಗಲೀ, ಯಾವದೇ ಶುಕ್ರವಾರದ ದಿನವಾದರೂ ಪ್ರಾರಂಭಿಸಿ, ಒಂದು ವಾರ (೭ ದಿನಗಳು) ಈ ಪುಸ್ತವನ್ನು ಪಾರಾಯಣ ಮಾಡಿದರೆ, ಕೂಡಲೇ ಒಳ್ಳೆಯ ವರನೊಂದಿಗೆ ವಿವಾಹವು ನಿಶ್ಚಯವಾಗುತ್ತದೆ. ಅನುಕೂಲವಿದ್ದವರು ಯಾವುದೇ ಶುಕ್ರವಾರದ ದಿನ ಈ ಪುಸ್ತಕವನ್ನು ಪೂರ್ತಿಯಾಗಿ ಕೂಡ ಓದಬಹುದು.

- ❖ ಶ್ರಾವಣ ಶುಕ್ರವಾರದ ದಿನ ಈ ಪುಸ್ತಕವನ್ನು ಪೂರ್ತಿಯಾಗಿ ಪಠಿಸಿದ ಸುಮಂಗಲಿಯರಿಗೆ ಸಕಲ ಸೌಭಾಗ್ಯಗಳು ಲಭಿಸುತ್ತದೆ. ಶ್ರೀ ಲಕ್ಷ್ಮೀ ಶ್ರೀನಿವಾಸರ ಅನುಗ್ರಹದಿಂದ ಆ ಕುಟುಂಬದ ಸದಸ್ಯರೆಲ್ಲರೂ ಸುಖಸಂತೋಷಗಳಿಂದಿರುತ್ತಾರೆ. ಹಾಗೇ, ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯದ ದಿನವಾದ ವೈಶಾಖ ಶುದ್ದ ದಶಮಿಯ ದಿನ, ಈ ಪುಸ್ತಕವನ್ನು ಪಠಿಸಿದವರಿಗೆ ಸಕಲ ಸೌಭಾಗ್ಯಗಳು, ಅಷ್ಟೈಶ್ವರ್ಯ ಲಭಿಸಿ, ಧೀರ್ಘಾಯುಷ್ಯದಿಂದ, ಶಾಶ್ವತವಾದ ಸಮಸ್ತ ಶ್ರೇಯಸ್ಸುಗಳೊಂದಿಗೆ ಜೀವಿಸುತ್ತಾರೆ.

- ❖ ದುರದೃಷ್ಟದಿಂದ ಪತಿಯನ್ನು ಕಳೆದುಕೊಂಡ ಮಹಿಳೆಯರು ಈ ಪುಸ್ತಕವನ್ನು ಪಠಿಸಿದರೆ, ಮುಂದಿನ ಎಲ್ಲಾ ಜನ್ಮಗಳಲ್ಲೂ ನೂರು ಸಂವತ್ಸಗಳು ಸಕಲ ಸೌಭಾಗ್ಯಗಳೊಂದಿಗೆ ಸುಮಂಗಳೀಯರಾಗಿ ಬಾಳುತ್ತಾರೆ.

- ❖ ಕುಟುಂಬದಲ್ಲಿ ಯಾವುದಾದರೂ ಶುಭಕಾರ್ಯಕ್ರಮಗಳ ಸಮಯ ಬಂದಾಗ, ಕುಟುಂಬದ ಸದಸ್ಯರು ಯಾರಾದರೂ ಈ ಪುಸ್ತಕವನ್ನು ಪಠಿಸಿದರೆ, ಆ ಶುಭಕಾರ್ಯಕ್ರಮವು ನಿರ್ವಿಘ್ನವಾಗಿ, ಶುಭಪ್ರದವಾಗಿ ಜರುಗುತ್ತದೆ.

- ❖ ಶನಿವಾರದ ದಿನ ಪಠಿಸಿದರೆ ಯಾವುದೇ ರೀತಿಯ ಅನಾರೋಗ್ಯವಾದರೂ ತಕ್ಷಣ ನಿವಾರಣೆಯಾಗುತ್ತದೆ. ಏಕಾದಶಿ ದಿವಸ ಪಠಿಸಿದವರಿಗೆ ಯಾವುದೇ ಆರ್ಥಿಕ, ಅನಾರೋಗ್ಯ ಸಮಸ್ಯೆಗಳಿದ್ದರೂ ಪರಿಹಾರವಾಗಿ, ಸಂಪೂರ್ಣ ಆರೋಗ್ಯವು, ಸಕಲ ಸೌಭಾಗ್ಯಗಳು ಸೇರಿ ಸಮಸ್ತ ಶ್ರೇಯಸ್ಸುಗಳು ಉಂಟಾಗುತ್ತದೆ.

- ಈ ಪುಸ್ತಕವನ್ನು ಓದುವಾಗ ಯಾವರೀತಿಯ ಕಠೋರ ನಿಯಮ ನಿಷ್ಠೆಗಳ ಅವಸರವಿಲ್ಲ. ನೀವಿರುವ ಸ್ಥಳದಲ್ಲೇ, ನಿಮಗೆ ಅನುಕೂಲವಾದ ರೀತಿಯಲ್ಲಿ ಕುಳಿತುಕೊಂಡು ಭಕ್ತಿಯಿಂದ, ನಿರ್ಮಲ ಮನಸ್ಸಿನಿಂದ ಓದಿದರೆ ಸಾಕು. ಪ್ರಯಾಣ ಮಾಡುತ್ತಿರುವಾಗ ಕೂಡಾ ಓದಬಹುದು. ಈ ಪುಸ್ತಕವನ್ನು ನಿಮ್ಮ ಹತ್ತಿರವೇ ಇಟ್ಟುಕೊಂಡು, ಯಾವ ಸಮಯದಲ್ಲಾದರೂ, ಯಾವಾಗ ಬೇಕಾದರೂ ಆಗ ಓದಬಹುದು.

ಈ ವಿಧವಾಗಿ ನಿಮಗೆ ಅನುಕೂಲವಾದ ಯಾವ ದಿನವಾದರೂ, ಯಾವ ರೀತಿಯಲ್ಲಾದರೂ, ಈ ಪುಸ್ತಕವನ್ನು ಪಠಿಸಿ, ಶ್ರೀ ಶ್ರೀನಿವಾಸನ ಅನುಗ್ರಹದಿಂದ ಸಂಪೂರ್ಣ ಆರೋಗ್ಯದಿಂದ, ಸಮಸ್ತ ಶ್ರೇಯಸ್ಸುಗಳೊಂದಿಗೆ, ಬಹಳ ಭಾಗ್ಯವಂತರಾಗಿ, ಶಾಶ್ವತವಾದ ಸುಖದಿಂದ ಜೀವಿಸಬಹುದು.

*******

# ಶ್ರೀ ಪದ್ಮಾವತಿ ಪರಿಣಯ

ವೈಕುಂಠದಲ್ಲಿ ಶ್ರೀ ಲಕ್ಷ್ಮೀನಾರಾಯಣನು ಆದಿಶೇಷನ ಮೇಲೆ ವಿಶ್ರಮಿಸಿಕೊಂಡಿರಲು ಜಗನ್ಮಾತೆ ಶ್ರೀ ಮಹಾಲಕ್ಷ್ಮೀದೇವಿಯು ಸ್ವಾಮಿಯ ಪಾದವನ್ನು ಒತ್ತುತ್ತಿದ್ದಳು. ಶ್ರೀ ಲಕ್ಷ್ಮೀ ನಾರಾಯಣರನ್ನು ಮನಸ್ಸಿನಲ್ಲಿ ಸ್ಮರಿಸಿದರೆ ಆ ದಿವ್ಯ ಮನೋಹರ ಮಂಗಳ ಸ್ವರೂಪಮೂರ್ತಿಯರು ಮನಸ್ಸಿನಲ್ಲಿ ದರ್ಶನ ಕೊಡುತ್ತಾರೆ. ಆ ದರ್ಶನದಿಂದ ನಮ್ಮ ಶರೀರವೆಲ್ಲಾ ಪುಲಕರಿಸುತ್ತದೆ. ಆ ದಂಪತಿಗಳ ಅನ್ಯೋನ್ಯತೆ ಲೋಕಕ್ಕೇ ಆದರ್ಶಪ್ರಾಯವು. ಈ ಸೃಷ್ಟಿಯಲ್ಲಿರುವ ಸೌಂದರ್ಯವೆಲ್ಲಾ ಆ ಶ್ರೀ ಮಹಾಲಕ್ಷ್ಮೀ ತಾಯಿಯದೇ ಎಂದರೆ ಆಶ್ಚರ್ಯವೇನಲ್ಲ. ಶೇಷನ ಮೇಲೆ ಕುಳಿತುಕೊಂಡು ಗಂಡನಿಗೆ ಸೇವೆಯನ್ನು ಮಾಡುತ್ತಿರುವ ಆ ಮುಗ್ಧ ಮನೋಹರ ರೂಪಿಣಿ ಹೇಗೆ ದಿವ್ಯವಾಗಿ ಇದ್ದಾಳೆ ನೋಡಿರಿ! ಸೃಷ್ಟಿಯನ್ನೆಲ್ಲಾ ತನ್ನೊಳಗಿರಿಸಿಕೊಂಡು, ಆ ಸೃಷ್ಟಿಯನ್ನೆಲ್ಲಾ ಪೋಷಿಸುತ್ತಾ ಅವರೆಲ್ಲರ ಹೃದಯದಲ್ಲಿ ಸದಾ ಹಸನ್ಮುಖಿಯಾಗಿರುವ ಆ ಪರಬ್ರಹ್ಮಮೂರ್ತಿ ಶ್ರೀಮನ್ನಾರಾಯಣನು ತನ್ನ ಮುದ್ದಿನ ಪಟ್ಟಮಹಿಷಿಯನ್ನು ಹಸನ್ಮುಖನಾಗಿ ನೋಡುತ್ತಾ ಏನೋ ಹರಟೆ ಹೊಡೆಯುತ್ತಿದ್ದಾನೆ. ಏನೋ ವಿಶೇಷ ಹೇಳುತ್ತಿದ್ದಾನೆ, ಆದರೆ ಆ ತಾಯಿಯು ಅವನನ್ನುಆಶ್ಚರ್ಯದಿಂದ ನೋಡುತ್ತಿದ್ದಳು. ಇಷ್ಟರಲ್ಲಿ ಮತ್ತೆ ಏನೋ ನಕಲು ಮಾಡಿದ ಹಾಗಿದ್ದಾನೆ.! ಆ ಜಗನ್ಮಾತೆ ನಾಚಿಕೆಯಿಂದ ಮುದುಡಿಕೊಂಡಳು .... ಆಹಾ ಎಷ್ಟು ದಿವ್ಯವಾಗಿದ್ದಾಳೆ ಆ ಮಹಾಲಕ್ಷ್ಮೀ! ಆ ತಾಯಿ ನಾಚಿಕೆಪಡುವಾಗ ಈ ಪ್ರಕೃತಿಯಲ್ಲಿರುವ ಪುಷ್ಪಗಳೆಲ್ಲಾ ಮುದುಡಿಕೊಂಡು ಪ್ರಕೃತಿ ಸಮುದಾಯಕ್ಕೇ ಒಂದು ವಿಧದ ಶೋಭೆ ತಂದುಕೊಡುತ್ತದೆ. ಇಷ್ಟರಲ್ಲಿ ಅಲ್ಲಿಗೆ ನಾರದರ ಆಗಮನವಾಯಿತು. ಸರ್ವಕಾಲದಲ್ಲಿ ಸರ್ವಾವಸ್ಥೆಯಲ್ಲಿ ತನ್ನ ನಾಮಸ್ಮರಣೆ ಮಾಡುವ ನಾರದರೆಂದರೆ ಸ್ವಾಮಿಗೆ ಬಹಳ ಅಭಿಮಾನ, ತುಂಬಾ ಪ್ರೇಮ.

"ಏನು ನಾರದಾ! ಏನು ವಿಶೇಷ" ಎಂದು ನಗುತ್ತಾ ನಾರದರನ್ನು ಪ್ರಶ್ನಿಸಿದರು ಆ ಸ್ವಾಮಿ. 'ಓ ಪರಂಧಾಮ! ನಿನಗಿವೇ ನನ್ನ ನಮಸ್ಕಾರಗಳು. ನಿನಗೆ ತಿಳಿಯದ ವಿಶೇಷಗಲೇನಿರುತ್ತವೆ ಸ್ವಾಮಿ. ಈ ಸಕಲ ಚರಾಚರ ಸೃಷ್ಟಿ ನಿನ್ನ ಕಣ್ಣುಸನ್ನೆಯಿಂದಲೇ ನಡೆಯುತ್ತದೆ ಅಲ್ವಾ! ಸಕಲ ಜೀವಕೋಟಿಯು ನಿನ್ನ ಸ್ವರೂಪವಲ್ಲವೇ? ನಿನಗೆ ತಿಳಿಯದ, ನನಗೆ ತಿಳಿದಿರುವದು ಏನಿದೆ ಸ್ವಾಮಿ. ನಿನ್ನ ದಯೆಯಿಂದ ಎಲ್ಲಾ ಲೋಕದ ಜನರು ಬಹಳ ಸುಖಪ್ರದವಾಗಿ ಇದ್ದಾರೆ. ಒಂದು ಭೂಲೋಕದಲ್ಲಿ ಮಾತ್ರವೇ, ಪಾಪ ತುಂಬಾ ಜನರು ಪುಣ್ಯಕರ್ಮಗಳನ್ನು ಮಾಡಲು ಮರೆತುಬಿಡುತ್ತಿದ್ದಾರೆ. ಧರ್ಮಾಧರ್ಮ ವಿವೇಚನೆ ಇಲ್ಲದವರಾಗಿದ್ದಾರೆ' ಎಂದು ನಾರದನು ಹೇಳಿದನು. ಇದನ್ನು ಕೇಳಿದ ಶ್ರೀಮನ್ನಾರಾಯಣನು ಕಣ್ಣನ್ನು ಮುಚ್ಚಿಕೊಂಡು ಕಿರುನಗೆ ಬೀರಿದನು. ಆ ಕಿರುನಗೆಗೆ ಅರ್ಥವೇನೆಂದು ನಾರದರಿಗೆ ತಿಳಿಯದಾಯಿತು. ಇಷ್ಟರಲ್ಲಿ ಶ್ರೀ ಮಹಾಲಕ್ಷ್ಮೀಯು 'ನಾರದಾ! ಭೂಲೋಕವಾಸಿಗಳು ಯಾಕೆ ಈ ರೀತಿ ಪ್ರವರ್ತಿಸುತ್ತಿದ್ದಾರೆ? ಅವರಿಗೆ ಭಕ್ತಿ, ಜ್ಞಾನ, ವಿವೇಚನೆ ಏಕೆ ಪೂರ್ತಿಯಾಗಿ ಕಡಿಮೆಯಾಯಿತು? ಯಾಕೆ ಅವರು ಸನ್ಮಾರ್ಗದಲ್ಲಿ ನಡೆಯುತ್ತಿಲ್ಲ?' ಎಂದು ಪ್ರಶ್ನಿಸಿದಳು. 'ಏನೋ ತಾಯಿ, ಎಲ್ಲಾ ಆ ಶ್ರೀಮನ್ನಾರಾಯಣನಿಗೆ ಗೊತ್ತು. ಆದರೆ ಒಂದು ಮಾತ್ರ ನಿಜ. ಭೂಲೋಕದಲ್ಲಿ ಜನರೆಲ್ಲರೂ ಸಂಸಾರ ಸಾಗರದಲ್ಲಿ ಜರ್ಜರಿತರಾಗಿ ತುಂಬಾ ದುಃಖಗಳನ್ನು ಅನುಭವಿಸುತ್ತಿದ್ದಾರೆ. ಅವರ

ದುಃಖಗಳನ್ನು ಪರಿಹರಿಸಿ, ಅವರನ್ನು ರಕ್ಷಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳಲು ಬಂದೆನು' ಎಂದು ನಾರದರು ಶ್ರೀ ಮಹಾಲಕ್ಷ್ಮೀಗೆ ಹೇಳಿದರು.

ಹೀಗೆ ಸ್ವಲ್ಪ ಸಮಯ ಹರಟೆ ಹೊಡೆದು, ಆನಂತರ ನಾರದರು ಶ್ರೀ ಲಕ್ಷ್ಮೀನಾರಾಯಣರಿಂದ ಬೀಳ್ಕೊಂಡು ಲೋಕ ಸಂಚಾರಕ್ಕಾಗಿ ಹೊರಟು ಹೋದರು. ನಾರದರು ಹಾಗೆ ಹೊರಟರೋ ಇಲ್ಲೋ, ಒಮ್ಮೆಲೇ ಅಲ್ಲಿಯ ವಾತಾವರಣ ಗಂಭೀರವಾಗಿ ಬದಲಾಯಿತು. ಯಾವುದೋ ಅಪಾಯ ಬರುತ್ತಿರುವ ಹಾಗೆ ಅನಿಸುತ್ತಿದೆ. ವೈಕುಂಠದಲ್ಲಿ, ಆದಿ ಲಕ್ಷ್ಮೀನಾರಾಯಣರಿರುವಲ್ಲಿ ಅವಾಂತರವೇ?

ಇಷ್ಟರಲ್ಲಿ ಬಹಳ ಕೋಪದಿಂದ ಉರಿಯುತ್ತಾ ಬೃಗು ಮಹರ್ಷಿಗಳು ಅಲ್ಲಿಗೆ ಪ್ರವೇಶಿಸಿದರು. ಬಂದವರೇ ವಿಳಂಬ ಮಾಡದೇ ಜನಗನ್ನಾಥನ ಹೃದಯದ ಮೇಲೆ ತಟ್ಟನೆ ಕಾಲಿನಿಂದ ಒದೆದರು. ಒಂದೇ ಸಾರಿ ಜರುಗಿದ ಈ ಪರಿಣಾಮಕ್ಕೆ ಜಗನ್ಮಾತೆ ತಬ್ಬಿಬ್ಬಾದಳು. ತನ್ನ ಮುಂದೆ ನಡೆದ ಘಟನೆಗಳು ಆಕೆಗೆ ಅರ್ಥವಾಗಲಿಲ್ಲ. ಶ್ರೀಮಾನ್ ನಾರಾಯಣನು ಮಾತ್ರ ನಡೆದ ಘಟನೆಗಳಿಗೆ ಚೂರೂ ವಿಚಲಿತನಾಗದೆ ಬೃಗುಮಹರ್ಷಿಗಳ ಪಾದಗಳನ್ನು ಕೈಯಲ್ಲಿ ಹಿಡಿದುಕೊಂಡು ನಗುತ್ತಾ "ಸ್ವಾಮಿ! ನನ್ನ ಎದೆಯನ್ನು ಒದ್ದ ನಿಮ್ಮ ಪಾದಕ್ಕೆ ಎಷ್ಟು ನೋವಾಯಿತೋ ನೋಡಿ....ಎಷ್ಟು ಕೆಂಪಾಗಿದೆ ಗಮನಿಸಿರಿ" ಎನ್ನುತ್ತಾ ಕರುಣೆಯಿಂದ ಆ ಮಹರ್ಷಿಗಳ ಅಹಂಕಾರವನ್ನು ನಾಶಮಾಡಿದನು. ಅಷ್ಟೆ! ಮಹರ್ಷಿಯಲ್ಲಿದ್ದ ತಾಮಸಗುಣ ಪೂರ್ಣವಾಗಿ ಕಳೆದುಹೋಯಿತು. "ಸ್ವಾಮಿ ಜಗನ್ನಾಯಕಾ! ತ್ರಿಮೂರ್ತಿಯರಲ್ಲಿ ನೀನೇ ದೊಡ್ಡವನು!! ಮಹರ್ಷಿಗಳಾದ ನಾವೆಲ್ಲರೂ ಭೂಲೋಕದಲ್ಲಿ ಯಜ್ಞ ಮಾಡುತ್ತಾ ಯಜ್ಞಫಲ ಯಾರಿಗೆ ಸಮರ್ಪಿಸಬೇಕೆಂದು ನಿಶ್ಚಯಿಸಲು ನಾನು ಬ್ರಹ್ಮ, ರುದ್ರರ ಲೋಕಕ್ಕೆ ತೆರಳಿ ಅಲ್ಲಿ ಅವರಿಬ್ಬರ ಅಹಂಕಾರವನ್ನು ನೋಡಿ ಅವರು ಯಜ್ಞಫಲ ಸ್ವೀಕರಿಸಲು ಅರ್ಹರಲ್ಲ ಎಂದು ತಿಳಿದೆನು. ತ್ರಿಮೂರ್ತಿಯರಲ್ಲಿ ನೀನೇ ಯಜ್ಞಫಲ ಸ್ವೀಕರಿಸಲು ಅರ್ಹನು. ನೀನೇ ಸರ್ವೋತ್ತಮನು. ಓ ಶ್ರೀಮಾನ್ನಾರಾಯಣಾ! ನಾವು ಮಾಡುವ ಈ ಯಜ್ಞಫಲ ಸ್ವೀಕರಿಸಲು ಈ ವಿಶ್ವದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರೂ ಅರ್ಹರಲ್ಲ" ಎಂದು ಹೇಳಿದನು.

ಇದನ್ನೆಲ್ಲಾ ಗಮನಸುತ್ತಿದ್ದ ಶ್ರೀ ಮಹಾಲಕ್ಷ್ಮಿಗೆ ತುಂಬಾ ಕೋಪ ಬಂತು. ನನ್ನ ನಿವಾಸಸ್ಥಾನವಾದ ವಕ್ಷಸ್ಥಳವನ್ನು ಕಾಲಿನಿಂದ ಒದೆಯುವುದೇ? ಎಂತಹ ಅವಮಾನ? ಇಂತಹ ಘೋರಕೃತ್ಯವೆಸಗಿದ ಆ ಮಹರ್ಷಿಯನ್ನು ಸ್ವಾಮಿ ಏನೂ ನಿಂದಿಸದಿರುವುದೇ? ಮೇಲಾಗಿ ಅವನ ಕಾಲನ್ನು ಕೈಯಲ್ಲಿ ಹಿಡಿದುಕೊಂಡು ಸವರುವುದೇ? ಇಂಥಹ ಅವಮಾನವನ್ನು ನಾನು ಸಹಿಸಲಾರೆ ಎನ್ನುತ್ತಾ ತಕ್ಷಣವೇ ವೈಕುಂಠವನ್ನು ಬಿಟ್ಟು ಹೊರಟುಹೋದಳು. ಮಹಾಲಕ್ಷ್ಮಿ ಇಲ್ಲದ ವೈಕುಂಠ ಶೂನ್ಯಮಯವಾಯಿತು. ತನ್ನನ್ನಗಲಿ ಲಕ್ಷ್ಮಿ ಭೂಲೋಕಕ್ಕೆ ಹೋದಂದಿನಿಂದ ಶ್ರೀಮಾನ್ನಾರಾಯಣನು ತುಂಬಾ ವ್ಯಥೆಪಟ್ಟನು. ಲಕ್ಷ್ಮಿಯನ್ನು ಹುಡುಕುತ್ತಾ ಭೂಲೋಕಕ್ಕೆ ಹೋಗಿ ಗುಡ್ಡಬೆಟ್ಟ ಹತ್ತುತ್ತಾ ವೇಂಕಟಾದ್ರಿಯನ್ನು ಸೇರಿದನು. ತಿರುಗಿ ತಿರುಗಿ ಸುಸ್ತಾಗಿ ಕಡೆಗೆ ಒಂದು ಸ್ಥಳದಲ್ಲಿ ಕೂತುಕೊಂಡು ಲಕ್ಷ್ಮಿಗಾಗಿ ತಪಸ್ಸು ಮಾಡತೊಡಗಿದನು. ಹಾಗೆ ಕೆಲವು ಸಂವತ್ಸರಗಳು ಘೋರ ತಪಸ್ಸನ್ನಾಚರಿಸಿದನು. ಸ್ವಾಮಿಯ ಸುತ್ತಲೂ ಹುತ್ತ ಬೆಳೆದುಕೊಂಡಿತು. ಆದರೂ ಸ್ವಾಮಿ ತನ್ನ ತಪಸ್ಸನ್ನು ಕೈಬಿಡಲಿಲ್ಲ.

ಶ್ರೀ ಲಕ್ಷ್ಮೀನಾರಾಯಣರು ವೈಕುಂಠ ಬಿಟ್ಟು ಹೋದಂದಿನಿಂದ ವೈಕುಂಠವಾಸಿಗಳು ತುಂಬಾ ವ್ಯಥೆ ಪಟ್ಟರು. ನಡೆದ ಸಂಗತಿಗಳನ್ನೆಲ್ಲಾ ತಿಳಿದು ದೇವತೆಗಳೆಲ್ಲರೂ ತುಂಬಾ ಚಿಂತಿತರಾದರು. ಬ್ರಹ್ಮದೇವರು ಮಹೇಶ್ವರನಲ್ಲಿಗೆ ಬಂದು ಹೀಗೆ ಹೇಳಿದನು. ‘ಓ ಪರಮೇಶ್ವರಾ! ನಮ್ಮ ಪ್ರಿಯ ಸಖ ಶ್ರೀಮಾನ್ನಾರಾಯಣನನ್ನು ಗಮನಿಸಿದೆಯಾ! ಇದೋ ಆ ಭೂಲೋಕದಲ್ಲಿ ನೋಡು. ತಿಂಡಿ ತೀರ್ಥಗಳಿಲ್ಲದೆ ಶ್ರೀ ಮಹಾಲಕ್ಷ್ಮಿಗೋಸ್ಕರ ಹೇಗೆ ತಪಸ್ಸು ಮಾಡುತ್ತಿದ್ದಾನೆ ನೋಡು! ನಾವಿಬ್ಬರೂ ತಕ್ಷಣವೇ ಭೂಲೋಕಕ್ಕೆ ಹೋಗಿ ಆ ಸ್ವಾಮಿಯ ಲಾಲನೆ ಪಾಲನೆಗಳನ್ನು ನೋಡಿಕೊಳ್ಳಬೇಕು’ ಎಂದು ಹೇಳಿದಾಗ ರುದ್ರನು ಕೂಡಾ ಇದಕ್ಕೆ ಒಪ್ಪಿಕೊಂಡು ಬ್ರಹ್ಮ ರುದ್ರರಿಬ್ಬರೂ ಕೂಡಿಕೊಂಡು ಭೂಲೋಕಕ್ಕೆ ಮಾರುವೇಷದಲ್ಲಿ ಹೋಗಿ ಸೇರಿದರು.

ಆ ಕಾಲದಲ್ಲಿ ವೇಂಕಟಾದ್ರಿ ಪ್ರದೇಶವನ್ನು ಚೋಳರಾಜನು ಪರಿಪಾಲನೆ ಮಾಡುತ್ತಿದ್ದನು. ಒಂದು ದಿನ ಲಕ್ಷ್ಮೀದೇವಿ ಗೊಪಾಲಿಕಾ ರೂಪವನ್ನು, ಬ್ರಹ್ಮ ಆಕಳು, ರುದ್ರ ಕರುವಿನ ವೇಷದಲ್ಲಿ ಆ ರಾಜನ ಆಸ್ಥಾನಕ್ಕೆ ಹೋದರು. ಗೊಪಾಲಿಕಾ ರೂಪದಲ್ಲಿರುವ ಶ್ರೀ ಮಹಾಲಕ್ಷ್ಮಿ ಚೋಳರಾಜನಲ್ಲಿ ‘ಈ ಆಕಳು ತುಂಬಾ ಹಾಲು ಕೊಡಬಲ್ಲದು, ಇದಿರುವ ಸ್ಥಳದಲ್ಲಿ ಎಲ್ಲಾ ಸುಖ ಸಂಪತ್ತುಗಳು ಸಂವೃದ್ಧಿಯಾಗುತ್ತದೆ’ ಎಂದು ಹೇಳಿದಳು. ಆಗ ಚೋಳರಾಜ ಆ ಆಕಳು ಮತ್ತು ಕರು ತನಗೆ ಬೇಕೆಂದು ಹೇಳಲು ಲಕ್ಷ್ಮೀದೇವಿಯು ಹಾಗೆಯೇ ಆಗಲೆಂದು ಒಪ್ಪಿಕೊಂಡಳು. ಆ ಆಕಳು ಮತ್ತು ಕರುವನ್ನು ರಾಜರ ಗೋಶಾಲೆಗೆ ಕಳುಹಿಸಲಾಯಿತು.

ದಿನಾಲೂ ಗೋಶಾಲೆಯಲ್ಲಿರುವ ಎಲ್ಲಾ ಆಕಳುಗಳೊಂದಿಗೆ ಬ್ರಹ್ಮ ರೂಪದಲ್ಲಿರುವ ಆಕಳು ಕೂಡಾ ಮೇಯಲು ಊರಿನ ಹೊರಗೆ ಹೋಯಿತು. ಆಕಳು ಮಂದೆಯಿಂದ ದೂರ ಹೋಗಿ ಶ್ರೀನಿವಾಸ ಇರುವ ಸ್ಥಳದ ಹತ್ತಿರ ಬಂದು, ಹುತ್ತದ ಮೇಲೆ ನಿಂತು ರಂದ್ರದ ಮೂಲಕ ಹಾಲನ್ನು ಸುರಿಸಿತು. ಆ ಹಾಲನ್ನು ಕುಡಿದು ಶ್ರೀನಿವಾಸ ತನ್ನ ಹಸಿವೆಯನ್ನು ನೀಗಿಸಿಕೊಳ್ಳುತ್ತಿದ್ದನು. ಆಮೇಲೆ ತಿರುಗಿ ತನ್ನ ಮಂದೆಯನ್ನು ಸೇರಿ ಸಾಯಂಕಾಲದ ಹೊತ್ತಿಗೆ ಗೋಶಾಲೆ ಸೇರುತ್ತಿತ್ತು.

ಹೀಗೆ ದಿನ ಕಳೆಯಲು ಗೋಪಾಲಕನು ಈ ಆಕಳು ಮಂದೆ ಬಿಟ್ಟು ಹೋಗುವುದನ್ನು ಗಮನಿಸಿದನು. ಅಷ್ಟೆ ಅಲ್ಲದೆ ಸಾಯಂಕಾಲ ಗೋಶಾಲೆಯಲ್ಲಿ ಹಾಲು ಹಿಂಡುವಾಗ ಈ ಆಕಳಲ್ಲಿ ಮಾತ್ರ ಹಾಲು ಇರುತ್ತಿರಲಿಲ್ಲ. ಪ್ರತಿ ದಿನ ಏಕೆ ಹೀಗಾಗುತ್ತಿದೆ ಎಂದು ತಿಳಿಯದೆ ಗೋಪಾಲಕನು ಮರುದಿನದಿಂದ ಹೇಗಾದರೂ ಮಾಡಿ ಈ ಆಕಳು ದಿನವೆಲ್ಲಾ ಎಲ್ಲಿ ತಿರುಗುತ್ತದೆಂದು ಗಮನಿಸಬೇಕೆಂದು ನಿಶ್ಚಯಿಸಿದನು.

ಮರುದಿನ ಗೋಪಾಲಕನು ದೂರದಿಂದ ಗಮನಿಸುತ್ತಿರಲು, ಬ್ರಹ್ಮ ರೂಪದಲ್ಲಿರುವ ಈ ಆಕಳು ಮಂದೆಯಿಂದ ದೂರ ಹೋಗಿ, ಹುತ್ತದ ಮೇಲೆ ಹಾಲು ಸುರಿಸುವುದನ್ನು ಗಮನಿಸಿದನು. ‘ಒಹೋ! ಇದೇನಾ ದಿನಾಲೂ ನಡೆಯುವುದು’, ಎಂದು ತಿಳಿದು ಗೋಪಾಲಕನು ತುಂಬಾ ಕೋಪಾವೇಶದಿಂದ ಒಮ್ಮೆಲೇ ಅಲ್ಲಿಗೆ ಓಡಿಕೊಂಡು ಹೋಗಿ ಕೈಯಲ್ಲಿದ್ದ ಕೊಡಲಿಯಿಂದ ಆಕಳನ್ನು ಸಾಯಿಸಲು ಹೋದನು. ಆಕಳಿನ ರೂಪದಲ್ಲಿರುವ ಬ್ರಹ್ಮದೇವರಿಗೆ ಅಪಕಾರ ಆಗುವುದೆಂದು ಗಮನಿಸಿದ ಶ್ರೀಮಾನ್ನಾರಾಯಣನು ತಕ್ಷಣ ಹುತ್ತದಿಂದ ಎದ್ದನು. ಅಷ್ಟೆ! ಆ ಗೋಪಾಲಕನ ಕೈಯಲ್ಲಿದ್ದ ಕೊಡಲಿ ಏಟು ಶ್ರೀನಿವಾಸನಿಗೆ ತಗಲಿ ತಲೆಯಲ್ಲಿ ಗಾಯವಾಗಿ

ವಿಪರೀತವಾಗಿ ರಕ್ತ ಹೊರ ಚಿಮ್ಮಿತು. ಒಮ್ಮೆಲೇ ಜರುಗಿದ ಈ ಘಟನೆಯಿಂದ ಗೋಪಾಲಕನು ಪ್ರಾಣವನ್ನು ಬಿಟ್ಟನು.

ಈ ವಿಷಯ ತಿಳಿದ ಚೋಳರಾಜನು ಹುತ್ತ ಇದ್ದಲ್ಲಿಗೆ ಬಂದನು. ಇದಕ್ಕೆಲ್ಲಾ ಕಾರಣ ರಾಜನೆಂದು ಬಗೆದು, ಶ್ರೀನಿವಾಸನು ಚೋಳರಾಜನಿಗೆ ಪಿಶಾಚಿಯಾಗು ಎಂದು ಶಾಪವಿತ್ತನು. ಕೂಡಲೇ ಚೋಳರಾಜ ಶ್ರೀನಿವಾಸನು ಸಾಕ್ಷಾತ್ ಶ್ರೀಮನ್ನಾರಾಯಣನು ಎಂದು ಗ್ರಹಿಸಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ತುಂಬಾ ಬೇಡಿಕೊಂಡನು. ಅದಕ್ಕೆ ಕರುಣೆಯಿಂದ ಶ್ರೀನಿವಾಸನು ಶಾಪವಿಮೋಚನೆಯ ಮಾರ್ಗವನ್ನು ಅನುಗ್ರಹಿಸಿದನು.

ಅದಾದ ಮೇಲೆ ಶ್ರೀನಿವಾಸನು ದೇವಗುರುವಾದ ಬೃಹಸ್ಪತಿಯನ್ನು ಕರೆದು, ತನ್ನ ಗಾಯಕ್ಕೆ ಮೂಲಿಕೆಯಿಂದ ಚಿಕಿತ್ಸೆಯನ್ನು ಮಾಡಿಸಿಕೊಂಡನು. ದ್ವಾಪರ ಯುಗದ ಯಶೋದ, ವಕುಳ ಮಾತೆಯಾಗಿ ಜನ್ಮತಾಳಿ ಅಲ್ಲಿಯೇ ಸಮೀಪದಲ್ಲಿ ಆಶ್ರಮ ಕಟ್ಟಿಕೊಂಡು ವಾಸಿಸುತ್ತಿದ್ದಳು. ನಾರದರಿಂದ ಶ್ರೀಮನ್ನಾರಾಯಣನು ಭೂಲೋಕಕ್ಕೆ ಬಂದು, ತನ್ನ ಆಶ್ರಮದ ಸಮೀಪದಲ್ಲೇ ಇರುವನೆಂದು ತಿಳಿದು ಸ್ವಾಮಿಯನ್ನು ಭೇಟಿಯಾದಳು. ತಂದೆ! ನೀನು ಬಂದು ನನ್ನ ಆಶ್ರಮದಲ್ಲಿರಬೇಕಾದವನು. ಇನ್ನು ಮುಂದೆ ನಿನ್ನ ಹೆಸರು ಶ್ರೀನಿವಾಸ ಎಂದಳು. ಇದರಿಂದ ಶ್ರೀನಿವಾಸನು ಸಂತೋಷಗೊಂಡು ಅವಳೊಡನೆ ಹೋಗಿ ಆಶ್ರಮದಲ್ಲಿ ನೆಲೆಸಿದನು.

ಆ ರಾಜ್ಯವನ್ನು ಆಳುತ್ತಿದ್ದ ಆಕಾಶರಾಜ, ಧರಣೀ ದೇವಿ ದಂಪತಿಯರಿಗೆ ವಿವಾಹವಾಗಿ ಹಲವು ವರ್ಷಗಳಾದರೂ ಸಂತಾನವಿರಲಿಲ್ಲ. ಅನೇಕ ವ್ರತಗಳನ್ನು ಆಚರಿಸಿದರು, ಅನೇಕ ಪುಣ್ಯತೀರ್ಥಗಳನ್ನು ದರ್ಶನ ಮಾಡಿದರು. ಆದರೂ ಫಲ ಸಿಗಲಿಲ್ಲ. ಅವರ ಆಸ್ಥಾನ ಜ್ಯೋತಿಷ್ಯರ ಸಲಹೆಯಂತೆ ಆಕಾಶರಾಜ 'ಪುತ್ರ ಕಾಮೇಷ್ಠಿ ಯಜ್ಞ' ಮಾಡಲು ನಿಶ್ಚಯಿಸಿದನು. ಒಂದು ಸುಮುಹೂರ್ತವನ್ನು ನಿಶ್ಚಯಿಸಿ ಬ್ರಾಹ್ಮಣರು ಯಜ್ಞಮಾಡುವುದ್ದಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಸಂಗ್ರಹಿಸಿದನು.

ಯಜ್ಞಶಾಲೆಯನ್ನು ಪರಿಶುದ್ಧಗೊಳಿಸುವ ಅಂಗವಾಗಿ ಮೊದಲಿಗೆ ತಾನೆ ಸ್ವಯಂ ಹಲದಿಂದ ಭೂಮಿಯನ್ನು ಅಗೆಯಲು ಪ್ರಾರಂಭಿಸಿದನು. ಸ್ವಲ್ಪ ಹೊತ್ತಿನಲ್ಲೇ ಹಲಕ್ಕೆ ಯಾವುದೋ ವಸ್ತು ತಗಲಿದ ಶಬ್ದ ಕೇಳಿಸಿತು. ಏನೋ ಇದೆಯೆಂದು ಆಶ್ಚರ್ಯದಿಂದ ಬಗ್ಗಿ ನೋಡಲು ಒಂದು ಬಂಗಾರದ ಪೆಟ್ಟಿಗೆ ಕಾಣಿಸಿತು. ಕೂಡಲೇ ಆಕಾಶರಾಜ ಭಾರ್ಯೆ ಧರಣೀ ದೇವಿಯನ್ನು ಕರೆದು ಆ ಪೆಟ್ಟಿಗೆಯನ್ನು ಬಿಚ್ಚಿ ನೋಡಿದನು. ಅಷ್ಟೆ, ಆ ದಂಪತಿಗಳಿಗೆ ಬಹಳ ಆಶ್ಚರ್ಯ ಕಾದಿತ್ತು. ಆ ಪೆಟ್ಟಿಗೆಯಲ್ಲಿ ಸಹಸ್ರದಳ ಕಮಲದ ಮಧ್ಯೆ ದಿವ್ಯ ತೇಜಸ್ಸು ಹೊಂದಿದ ಒಂದು ಅಂಬೆಗಾಲಿಡುವ ಹೆಣ್ಣುಶಿಶು ಕಾಣಿಸಿಕೊಂಡಿತು.

ಇಷ್ಟರಲ್ಲಿ ಒಂದು ಆಕಾಶವಾಣಿ ಕೇಳಿಸಿತು. 'ಓ ರಾಜಾ! ಈ ಶಿಶು ಸಾಮಾನ್ಯ ಬಾಲಿಕೆ ಎಂದು ಭಾವಿಸಬೇಡ. ಇವಳು ಸಾಕ್ಷಾತ್ ಲಕ್ಷ್ಮೀದೇವಿ ಅಂಶದಿಂದ ಜನಿಸಿದವಳು. ಇವಳಿಂದ ದಂಪತಿಗಳಾದ ನಿಮ್ಮ ಜನ್ಮ ಸಾರ್ಥಕವಾಗಿದೆ. ಈ ಬಾಲಿಕೆ ಮುಂದೆ ನಿಮಗೆ ಅಖಂಡ ಕೀರ್ತಿ ತರುವವಳಾಗಿದ್ದಾಳೆ. ಈ ಶಿಶುವಿನ ಮೂಲಕ ನಿನ್ನ ವಂಶದ ಮುಂದಿನ ಪರಂಪರೆ ಉದ್ಧಾರ ಹೊಂದುವುದು' ಎಂದು. ಆಗ ಆಕಾಶರಾಜ ದಂಪತಿಯರು ಆನಂದದಿಂದ ಯಜ್ಞ ಪೂರ್ತಿ ಮಾಡಿ ಆ ಶಿಶುವನ್ನು ಅಂತಃಪುರಕ್ಕೆ ಕರೆದುಕೊಂಡು ಹೋಗಿ 'ಪದ್ಮಾವತಿ' ಎಂದು

ನಾಮಕರಣ ಮಾಡಿದರು. ಪದ್ಮಾವತಿ ಸಿಕ್ಕಿದ ಶುಭ ವಿಶೇಷದೊಂದಿಗೆ ಆ ದಂಪತಿಗಳಿಗೆ ಸ್ವಲ್ಪ ಕಾಲದಲ್ಲೇ ಒಂದು ಗಂಡು ಮಗು ಜನಿಸಿತು. ಆ ಬಾಲಕನಿಗೆ ವಸುನಾಯಕನೆಂದು ನಾಮಕರಣ ಮಾಡಿದರು.

ಪದ್ಮಾವತಿ, ವಸುನಾಯಕರಿಬ್ಬರೂ ಮುದ್ದಾಗಿ ಆಡುತ್ತಾ ಹಾಡುತ್ತಾ ಬೆಳೆದು ದೊಡ್ಡವರಾದರು. ಪದ್ಮಾವತಿ ಅತಿಲೋಕ ಸೌಂದರ್ಯವತಿಯಾಗಿ ರೂಪುಗೊಂಡಳು. ರತಿದೇವಿಯಂತೆ ಅಂದ, ಸರಸ್ವತಿ ದೇವಿಯಂತೆ ವಿದ್ಯೆ ವಿನಯಗಳು, ಗೌರಿದೇವಿಯಂತೆ ವರ್ಚಸ್ಸು, ಲಕ್ಷ್ಮೀದೇವಿಯಂತೆ ತೇಜಸ್ಸು, ಅಲಂಕಾರಗಳೊಂದಿಗೆ ಜಗತ್ತಿನಲ್ಲೇ ಅದ್ಭುತ ಸೌಂದರ್ಯರಾಶಿಯಾಗಿ ಮೆರೆದಳು. ಒಂದು ದಿನ ನಾರದ ಮಹರ್ಷಿ ಲೋಕವಿಹಾರ ಮಾಡುತ್ತಾ ಆ ರಾಜ್ಯಕ್ಕೆ ಬಂದು ಆಕಾಶರಾಜ, ಧರಣೀದೇವಿ ದಂಪತಿಗಳಿದ್ದಲ್ಲಿಗೆ ಬಂದನು. ಅಲ್ಲಿ ಇದ್ದ ಪದ್ಮಾವತಿಯನ್ನು ನೋಡಿ ಆ ದಂಪತಿಗಲ್ಲಿ ಹೀಗೆ ಹೇಳಿದನು. 'ಓ ರಾಜ ದಂಪತಿಗಳಿರಾ! ನೀವು ಧನ್ಯರು. ಈ ಪದ್ಮಾವತಿ ಸಾಮಾನ್ಯ ಯುವತಿಯಲ್ಲ. ಈಕೆ ಸಾಕ್ಷಾತ್ ಲಕ್ಷ್ಮೀದೇವಿ ಅಂಶದಿಂದ ಜನಿಸಿದವಳು. ನಿಮಗೆ ಶೀಘ್ರದಲ್ಲೇ ಶ್ರೀಮನ್ನಾರಾಯಣನು ಅಳಿಯನಾಗಿ ಬರಲಿದ್ದಾನೆ' ಎಂದು ಹೇಳಿ ಪದ್ಮಾವತಿಗೆ 'ಶೀಘ್ರಮೇ ಕಲ್ಯಾಣ ಪ್ರಾಪ್ತಿರಸ್ತು!' ಎಂದು ಆಶೀರ್ವದಿಸಿ ಲೋಕ ಸಂಚಾರಕ್ಕೆ ತೆರಳಿದನು.

ಈ ರೀತಿ ಕಾಲ ಕಳೆಯುತ್ತಿರಲು ಅಲ್ಲಿ ವಕುಳಾದೇವಿ ಆಶ್ರಮದಲ್ಲಿ ಶ್ರೀನಿವಾಸನು ವಕುಳಮಾತೆಯ ಉಪಚಾರಗಳಿಂದ ಸಂತೋಷದಿಂದ ಕಾಲ ಕಳೆಯುತ್ತಿದ್ದನು. ಒಂದು ದಿನ ಶ್ರೀನಿವಾಸನು ಬೇಟೆಗೆ ಹೋಗಬೇಕೆಂದು ಆಲೋಚಿಸಿದನು. ಇದನ್ನು ತಾಯಿಯೊಡನೆ ಹೇಳಲು ವಕುಳಾದೇವಿ ಶ್ರೀನಿವಾಸನೊಡನೆ 'ಮಗನೇ! ನೀನು ತಂಬಾ ಸುಕುಮಾರನು. ಕ್ರೂರ ಮೃಗಗಳ ಬೇಟೆ ತುಂಬಾ ಪ್ರಮಾದದಿಂದ ಕೂಡಿದ್ದು. ಹೋಗಬೇಡ ಮಗನೇ! ಎಂದು ಬುದ್ಧಿ ಹೇಳಿದಳು. ಅದಕ್ಕೆ ಶ್ರೀನಿವಾಸನು 'ತಾಯಿ ನೀನೇನೂ ಚಿಂತೆಮಾಡಬೇಡ. ಆ ಮೃಗಗಳು ನನ್ನನ್ನು ಏನೂ ಮಾಡಲಾರವು. ನಾನು ಬೇಗನೇ ಬೇಟೆಯಾಡಿ ಹಿಂತಿರುಗಿ ಬರುತ್ತೇನೆ' ಎಂದು ಹೇಳಿ ವಕುಳಮಾತೆಯಿಂದ ಬೀಳ್ಕೊಂಡು ಬೇಟೆಗೆ ಹೋದನು.

ಸ್ವಲ್ಪಹೊತ್ತು ಬೇಟೆಯಾಡಿದ ನಂತರ ಆಲಸ್ಯಗೊಂಡ ಶ್ರೀನಿವಾಸನು ಸಮೀಪದಲ್ಲೇ ಇರುವ ಒಂದು ಜಲಾಶಯವನ್ನು ನೋಡಿ ಅಲ್ಲಿ ಸ್ವಲ್ಪ ನೀರು ಕುಡಿದು, ಮುಖವನ್ನು ತೊಳೆದು ಸ್ವಲ್ಪ ಹೊತ್ತು ಪಕ್ಕದಲ್ಲೇ ಇದ್ದ ವನದಲ್ಲಿ ವಿಶ್ರಮಿಸಿದನು. ಇಷ್ಟರಲ್ಲಿ ಶ್ರೀನಿವಾಸನಿಗೆ ಒಮ್ಮೆಲೇ ಕಿಲಕಿಲ ಎಂದು ನಗುವ ಶಬ್ದ ಕೇಳಿಸಿತು. ಈ ನಗು ಎಲ್ಲಿಂದ ಬರುತ್ತಿದೆ ಎಂದು ಆಲೋಚಿಸುತ್ತಿರುವಾಗ ಎದುರಿಗೆ ಗಿಡಮರಗಳ ಮಧ್ಯೆ ಬರುತ್ತಿರುವ ಒಂದು ಅದ್ಭುತ ಸೌಂದರ್ಯರಾಶಿ ಶ್ರೀನಿವಾಸನ ಕಣ್ಣಿಗೆ ಬಿತ್ತು. ಅವಳು ಬೇರೆ ಯಾರೂ ಅಲ್ಲ! ಇಷ್ಟ ಸಖಿಯರೊಂದಿಗೆ ವನ ವಿಹಾರಕ್ಕಾಗಿ ಬಂದ ರಾಜಕುಮಾರಿ ಪದ್ಮಾವತಿ!

ಪದ್ಮಾವತಿಯ ಸೌಂದರ್ಯ ನೋಡಿ ಶ್ರೀನಿವಾಸನ ಬಾಯಿಯಿಂದ ಮಾತು ಹೊರಡಲಿಲ್ಲ. ಪದ್ಮಾವತಿಯು ಕೂಡಾ ಶ್ರೀನಿವಾಸನ ಅದ್ಭುತ ತೇಜಸ್ಸಿಗೆ ಆಶ್ಚರ್ಯದಿಂದ ಕಣ್ಣು ಮಿಟುಕಿಸದೆ ನೋಡಿದಳು. ಇಷ್ಟರಲ್ಲಿ ಪರ ಪುರುಷನನ್ನು ಈ ರೀತಿ ನೋಡುವುದೇ! ಎಂದು ಮನಸ್ಸಿನಲ್ಲೇ ನೆನೆದು ಕೂಡಲೇ ಮುಖವನ್ನು ಪಕ್ಕಕ್ಕೆ ತಿರುಗಿಸಿದಳು. ಶ್ರೀನಿವಾಸನು ಅವಳನ್ನು ಸಮೀಪಿಸಿ 'ಓ ಸುಂದರಿ! ನೀನ್ಯಾರು? ಜಗತ್ತಿನ ಸೌಂದರ್ಯವೆಲ್ಲಾ ನಿನ್ನಲ್ಲೇ ಇದೆ. ನಿನ್ನಿಂದ ನಾನು

ಆಕರ್ಷಿತನಾಗಿದ್ದೇನೆ. ನಿನ್ನನ್ನು ಭಾರ್ಯೆಯಾಗಿ ಪಡೆಯದಿದ್ದರೆ ನನ್ನ ಜೀವನವೇ ವ್ಯರ್ಥವೆಂದು ತೋರುತ್ತದೆ. ನಿನ್ನ ತಂದೆತಾಯಿಯರು ಯಾರು? ಅವರನ್ನು ತಕ್ಷಣವೇ ಭೇಟಿಮಾಡಿ ಈ ವಿಷಯವನ್ನು ಮಾತಾಡಿ ನಿನ್ನನ್ನು ವಿವಾಹಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ್ದೇನೆ. ಈ ನಿರ್ಣಯವು ಬದಲಿಸಲಾಗದಂಥದ್ದು. ನಿನ್ನನ್ನು ಬಿಟ್ಟು ಬೇರೆ ಕನ್ಯೆಯನ್ನು ವಿವಾಹವಾಗಲಾರೆ' ಎಂದು ಹೇಳಿದನು.

ಆಗ ಪದ್ಮಾವತಿಯ ಸಖಿಯರು ಶ್ರೀನಿವಾಸನಲ್ಲಿ 'ನೀನ್ಯಾರು? ಎಲ್ಲಿಂದ ಬಂದಿರುವಿ? ನಿನ್ನ ಮಾತಿಗೆ ಏನಾದರು ಅರ್ಥವಿದೆಯಾ? ಇವಳು ಯಾರೆಂದು ತಿಳಿದಿದ್ದಿ? ಈಕೆ ಈ ದೇಶವನ್ನಾಳುವ ಆಕಾಶರಾಜನ ಪ್ರಿಯಪುತ್ರಿ ಪದ್ಮಾವತಿ. ಸಾಮಾನ್ಯನಾದ ನೀನೆಲ್ಲಿ? ರಾಜಕುಮಾರಿಯಾದ ಇವಳೆಲ್ಲಿ? ಇವಳನ್ನು ವಿವಾಹವಾಗುವ ಆಲೋಚನೆಯನ್ನು ಬಿಟ್ಟು ತಕ್ಷಣವೇ ನಿನ್ನ ಮನೆಗೆ ಹಿಂತಿರುಗು' ಎಂದು ಹೇಳಿ ಅಲ್ಲಿಂದ ಎಲ್ಲರೂ ಹಿಂತಿರುಗಿ ಹೋದರು. ಸಖಿಯರಿಂದ ಕೂಡಿಕೊಂಡು ಹೋಗುತ್ತಿರುವ ಪದ್ಮಾವತಿ ಒಂದುಬಾರಿ ಹಿಂತಿರುಗಿ ಶ್ರೀನಿವಾಸನನ್ನು ಮೇಲಿಂದ ಕೆಳಗೆ ನೋಡಿದಳು. ಆ ನೋಟದಿಂದ ಶ್ರೀನಿವಾಸ ಮತ್ತಷ್ಟು ಉಬ್ಬಿತಬ್ಬಿಬ್ಬಾದನು.

ಆಶ್ರಮಕ್ಕೆ ಸೇರಿದ ಶ್ರೀನಿವಾಸನು ವಕುಳಮಾತೆಗೆ ಜರುಗಿದ ವಿಷಯವನ್ನೆಲ್ಲಾ ವಿವರಿಸಿದನು. ಪದ್ಮಾವತಿಯನ್ನು ಬಿಟ್ಟು ಬೇರೆಯಾರನ್ನೂ ವಿವಾಹವಾಗಲಾರೆ ಎಂದನು. ಅದಕ್ಕೆ ವಕುಳಮಾತೆ ಶ್ರೀನಿವಾಸನಲ್ಲಿ 'ಮಗನೇ! ಅತಿ ಸಾಮಾನ್ಯರಾದ ನಾವೆಲ್ಲಿ, ಎಲ್ಲೋ ಅಂತಃಪುರದಲ್ಲಿ ವಾಸಮಾಡುತ್ತಿರುವ ಆ ಪದ್ಮಾವತಿ ಎಲ್ಲಿ. ದಯವಿಟ್ಟು ಆ ಆಲೋಚನೆಯನ್ನು ಬಿಟ್ಟುಬಿಡು ಮಗನೇ' ಎಂದಳು. ಆದರೆ ಶ್ರೀನಿವಾಸನು ಕೇಳಲಿಲ್ಲ. ಪದ್ಮಾವತಿಯನ್ನು ಬಿಟ್ಟು ಬೇರೆಯಾರನ್ನೂ ವಿವಾಹವಾಗುವ ಪ್ರಸಕ್ತಿ ಇಲ್ಲವೆಂದನು.

ಅಲ್ಲಿ ಅಂತಃಪುರದಲ್ಲಿ ಪದ್ಮಾವತಿಯ ಪರಿಸ್ಥಿತಿ ಕೂಡಾ ಹೀಗೆಯೇ ಇದೆ. ಉದ್ಯಾನವನದಲ್ಲಿ ಶ್ರೀನಿವಾಸನನ್ನು ನೋಡಿದ ರಾತ್ರಿ ಅವಳ ಕಣ್ಣಿಗೆ ನಿದ್ರೆ ಹತ್ತಲಿಲ್ಲ. ರಾತ್ರಿಯೆಲ್ಲಾ ಶ್ರೀನಿವಾಸನ ರೂಪವೇ ಕಣ್ಣಿನ ಮುಂದೆ ಕಾಣಿಸುತ್ತಿತ್ತು. ನಿದ್ರೆಯಿಲ್ಲದೆ ಕೃಶಳಾದ ಕುಮಾರಿಯನ್ನು ಬೆಳಿಗ್ಗೆ ನೋಡಿದ ತಾಯಿ ಧರಣೀದೇವಿಗೆ ಪದ್ಮಾವತಿ ಏಕೆ ಹೀಗೆ ಇದ್ದಾಳೆ ಎಂದು ಅರ್ಥ ಆಗಲಿಲ್ಲ. ಪದ್ಮಾವತಿ ಮಾತ್ರ ತಾಯಿ ಎಷ್ಟು ಕೇಳಿದರೂ ಕೂಡಾ ಕಾರಣ ಹೇಳಲಿಲ್ಲ.

ದಿನ ಕಳೆದಂತೆ ಪದ್ಮಾವತಿಯ ವಿರಹ ವೇದನೆ ಹೆಚ್ಚಾಗುತ್ತಾ ಹೋಯಿತು. ಯಾವ ಆಹಾರವನ್ನು ತಿನ್ನಬೇಕೆಂದು ತೋರಲಿಲ್ಲ. ಆಟ ಪಾಟಗಳನ್ನು ಬಿಟ್ಟುಬಿಟ್ಟಳು. ಯಾವ ವಿಷಯದಲ್ಲೂ ಮನಸ್ಸು ಹೋಗಲಿಲ್ಲ. ಎಲ್ಲಾ ಕಾಲದಲ್ಲೂ ಶ್ರೀನಿವಾಸನೇ ತಲೆಯಲ್ಲಿ ತಿರುಗುತ್ತಿದ್ದಾನೆ. ಮನಸ್ಸಿನಲ್ಲಿ ಒಂದೇ ಆಲೋಚನೆ. ತಾಯಿತಂದೆಯರಿಗೆ ಈ ವಿಷಯ ಹೇಳಿದರೆ ಸಾಮಾನ್ಯನಾದ ಒಬ್ಬನಿಗೆ ತನ್ನನ್ನು ಕೊಟ್ಟು ವಿವಾಹ ಮಾಡಲು ಎಷ್ಟು ಮಾತ್ರವೂ ಒಪ್ಪಿಕೊಳ್ಳಲಾರರು ಎಂದು ಪರಿತಪಿಸಿದಳು. ಆದ್ದರಿಂದ ಒಂದು ಕಡೆ ಶ್ರೀನಿವಾಸನನ್ನು ಮರೆಯಲಾರದೆ ಇನ್ನೊಂದು ಕಡೆ ತಾಯಿತಂದೆಯರಿಗೆ ಈ ವಿಷಯ ಹೇಳಲಾರದೆ ಬಹಳ ವ್ಯಥೆಪಡುತ್ತಾ ನಿದ್ರೆ, ಆಹಾರ ಬಿಟ್ಟು, ದಿನದಿನಕ್ಕೂ ಕುಗ್ಗಿ ಕೃಶಳಾದಳು.

ಆಕಾಶರಾಜ ದಂಪತಿಗಳಿಗೆ ಏನೂ ತೋಚಲಿಲ್ಲ. ಅನೇಕ ಮಂದಿ ದೊಡ್ಡ ವೈದ್ಯರನ್ನು ಕರೆಸಿ ಅನೇಕ ವಿಧದ ಪ್ರಯತ್ನವನ್ನು ಮಾಡಿದರು. ಆದರೂ ಪದ್ಮಾವತಿಯಲ್ಲಿ ಯಾವ

ಬದಲಾವಣೆಯೂ ಬರಲಿಲ್ಲ. ಒಂದು ದಿನ ಅಂತಃಪುರಕ್ಕೆ ಒಬ್ಬಳು ಕೊರವಂಜಿ ಬಂದಳು. ಆಕೆ ಬೇರೆ ಯಾರೂ ಅಲ್ಲ! ಮಾರು ವೇಷದಲ್ಲಿ ಬಂದ ಶ್ರೀನಿವಾಸನೇ! ಕೊರವಂಜಿ ಭವಿಷ್ಯ ಹೇಳುತ್ತಿರಲು ಆಕೆಯಲ್ಲಿ ಯಾವುದೋ ಶಕ್ತಿ ಇದ್ದಂತೆ ಅಂತಃಪುರದಲ್ಲಿದ್ದವರಿಗೆ ಅನಿಸಿತು. ಅವರು ಕೂಡಲೇ ಅವಳನ್ನು ಧರಣೀದೇವಿಯ ಹತ್ತಿರ ಕರೆದುಕೊಂಡು ಹೋದರು. ಕೊರವಂಜಿ ಧರಣೀದೇವಿಯಲ್ಲಿ ‘ಅಮ್ಮ! ನಾನು ಇದ್ದದ್ದನ್ನು ಇದ್ದ ಹಾಗೆ ಹೇಳುತ್ತೇನೆ. ಹೇಳಿದ್ದು ಹೇಳಿದಂತೆ ಆಗುತ್ತದೆ. ನಿನ್ನ ಮನೆಯಲ್ಲಿ ಶಾಂತಿ ಇಲ್ಲ. ಯಾವುದೋ ಬಾಧೆ ನಿನ್ನ ಮನಸ್ಸನ್ನು ಕಾಡುತ್ತಿದೆ’ ಎಂದಳು. ಕೂಡಲೇ ಧರಣೀದೇವಿಯು ‘ನೋಡು ತಾಯಿ! ನಿನ್ನಲ್ಲಿ ಯಾವ ಶಕ್ತಿ ಇದೆಯೋ ಗೊತ್ತಿಲ್ಲ ನಿನ್ನ ಮಾತು ಎಷ್ಟು ಸತ್ಯವಾಗಿದೆ. ನೀನು ಹೇಳಿದ್ದು ನಿಜ. ನಮಗ್ಯಾರಿಗೂ ಮನಃಶಾಂತಿ ಇಲ್ಲ. ನಮ್ಮ ಕುಮಾರಿ ಪದ್ಮಾವತಿಗೆ ಯಾವುದೋ ತಿಳಿಯದ ವ್ಯಾಧಿ ಅಂಟಿಕೊಂಡಿದೆ. ಇದು ಯಾರಿಗೂ ಅರ್ಥ ಆಗುತ್ತಿಲ್ಲ. ನೀನೇ ಹೇಳಬೇಕು!’ ಎಂದಳು.

ಇಷ್ಟರಲ್ಲಿ ಪದ್ಮಾವತಿಯನ್ನು ಕರೆದುಕೊಂಡು ಬರಲು, ಕೊರವಂಜಿ ರೂಪದಲ್ಲಿರುವ ಶ್ರೀನಿವಾಸನು ಹೀಗೆ ಹೇಳಲಾರಂಭಿಸಿದನು ‘ಓ ತಾಯಿ! ನೀನು ಒಬ್ಬ ಹುಡುಗನಲ್ಲಿ ಮನಸ್ಸು ಇಟ್ಟಿದ್ದೀಯ. ಕಾಡಿನಲ್ಲಿ ಕಾಣಿಸಿಕೊಂಡವನು! ಆತನು ಸಾಮಾನ್ಯನಲ್ಲ ತಾಯಿ! ಆ ಶ್ರೀ ಮಹಾವಿಷ್ಣುವೆ! ಅವನನ್ನು ನೀನು ಇಷ್ಟಪಟ್ಟೆ. ನಿನ್ನ ಮದುವೆ ಖಂಡಿತವಾಗಿಯೂ ಅವನೊಡನೆ ನಡೆಯುತ್ತದೆ. ನೀನು ಬಹಳಕಾಲ ಸುಖವಾಗಿರುವೆ. ನಿನ್ನ ಆಸೆ ನೆರವೇರುತ್ತದೆ ತಾಯಿ!’ ಎಂದು ಹೇಳಿದಳು.

ಈ ಮಾತನ್ನು ಕೇಳಿದ ಧರಣೀದೇವಿಗೆ ಆಶ್ಚರ್ಯವಾಯಿತು. ಇದಾ ವಿಷಯ! ಎಂದು ಪದ್ಮಾವತಿಯನ್ನು ಕೇಳಲು ಕೊರವಂಜಿ ಹೇಳಿದ್ದೆಲ್ಲವೂ ನಿಜವೆಂದಳು. ಧರಣೀದೇವಿ ಕೊರವಂಜಿಗೆ ತುಂಬಾ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದಳು. ಅವಳು ಹೋದ ಸ್ವಲ್ಪ ಹೊತ್ತಿಗೆ ವಕುಳಾದೇವಿ ಅಂತಃಪುರಕ್ಕೆ ಬಂದಳು. ಆಕೆ ’ನಾನು ಶ್ರೀನಿವಾಸನ ತಾಯಿ, ತನ್ನ ಕುಮಾರ ಪದ್ಮಾವತಿಯನ್ನು ವಿವಾಹವಾಗಲು ನಿಶ್ಚಯಿಸಿದ್ದಾನೆ’ ಎಂದಳು. ಧರಣಿದೇವಿ ತುಂಬಾ ಸಂತೋಷಪಟ್ಟು ಗಂಡ ಆಕಾಶರಾಜನನ್ನು ಕರೆಸಿ ನಡೆದ ವಿಷಯವನ್ನೆಲ್ಲಾ ಹೇಳಿದಳು. ಆಕಾಶರಾಜನು ಸಾಕ್ಷಾತ್ ಶ್ರೀಮಾನ್ನಾರಾಯಣನು ತನ್ನ ಅಳಿಯನಾಗುವನೆಂದು ತಿಳಿದು ತುಂಬಾ ಸಂತೋಷ ಪಟ್ಟನು. ವಕುಳಾದೇವಿ ಕೂಡಾ ತುಂಬಾ ಸಂತೋಷದಿಂದ ಆ ದಂಪತಿಗಳಿಂದ ಬೀಳ್ಕೊಂಡು ತನ್ನ ಆಶ್ರಮಕ್ಕೆ ಹೋದಳು.

ಆಕಾಶರಾಜ, ಧರಣೀದೇವಿ ದಂಪತಿಯರ ಆನಂದಕ್ಕೆ ಪಾರವೇ ಇಲ್ಲ. ಈ ಪ್ರಪಂಚದಲ್ಲಿ ಯಾರಿಗೆ ಈ ಭಾಗ್ಯ ಲಭಿಸೀತು? ಎಷ್ಟು ಕೋಟಿ ಜನ್ಮದ ಪುಣ್ಯಫಲವೋ! ಸಾಕ್ಷಾತ್ ಶ್ರೀಮಾನ್ನಾರಾಯಣನನ್ನು ಅಳಿಯನಾಗಿ ಹೊಂದುವ ಭಾಗ್ಯ ಎಷ್ಟು ಮಂದಿಗೆ ಸಿಗುತ್ತದೆ? ನಮ್ಮ ಜನ್ಮ ಸಾರ್ಥಕವಾಯಿತು. ಓ ಶ್ರೀಮಾನ್ನಾರಾಯಣಾ! ಇಂತಹ ಭಾಗ್ಯವನ್ನು ಅನುಗ್ರಹಿಸಿದ ನಿನಗೆ ನಮ್ಮ ನಮಸ್ಕಾರಗಳು. ಓ ಮಹಾಲಕ್ಷ್ಮಿ! ಈ ಪ್ರಪಂಚದಲ್ಲಿ ಸರ್ವ ಐಶ್ವರ್ಯಗಳಿಗೆ ನಿಯಾಮಕಳಾದ ನಿನ್ನನ್ನು ಮಗಳಾಗಿ ಹೊಂದಿದ ನಾವು ಎಷ್ಟು ಅದೃಷ್ಟವಂತರು ತಾಯಿ! ಎಂದು ತುಂಬಾ ಸಂತೋಷಪಟ್ಟರು.

ಆಕಾಶರಾಜ ದಂಪತಿಯರು ಅವರ ಗುರುವಾದ ಶುಕ ಮಹರ್ಷಿಗೆ ವಿಷಯ ತಿಳಿಸಲು ಆ ಮಹರ್ಷಿ ಕೂಡಲೇ ರಾಜನ ಅರಮನೆಗೆ ಬಂದನು. ಮಹರ್ಷಿಯನ್ನು ಸಕಲ

ಮರ್ಯಾದೆಗಳೊಡನೆ ಬರಮಾಡಿಕೊಂಡು ನಡೆದ ವಿಷಯವನ್ನೆಲ್ಲಾ ವಿವರವಾಗಿ ಹೇಳಿದರು. ಆಗ ಶುಕ ಮಹರ್ಷಿ ಆ ದಂಪತಿಯರಿಗೆ ಹೀಗೆ ಹೇಳಿದನು. 'ಓ ರಾಜ ದಂಪತಿಗಳೇ! ದಿವ್ಯ ದೃಷ್ಟಿಯಿಂದ ನನಗೆ ಎಲ್ಲಾ ವಿಷಯಗಳೂ ತಿಳಿದಿವೆ. ಸಾಕ್ಷಾತ್ ಶ್ರೀಮಾನ್ನಾರಾಯಣನನ್ನೇ ಅಳಿಯನಾಗಿ ಹೊಂದಿದ ನಿಮ್ಮ ಭಾಗ್ಯವನ್ನು ಹೇಗೆ ವರ್ಣಿಸಿಯೇನು? ಎಷ್ಟೋ ಕೋಟಿ ವರ್ಷಗಳ ಕಾಲ ತಪಸ್ಸು ಮಾಡಿದರೆ ಆ ಸ್ವಾಮಿ ದರ್ಶನ ಸಾಧ್ಯ, ಹಾಗಿರುವಾಗ ನೀವು ಆ ಜಗತ್ತಿನ ಕಲ್ಯಾಣ ಚಕ್ರವರ್ತಿಯನ್ನು ಅಳಿಯನಾಗಿ ಹೊಂದುತ್ತಿದ್ದೀರಿ. ಆಹಾ! ಎಷ್ಟು ಅದೃಷ್ಟವಂತರು! ನಿಮ್ಮ ಪುಣ್ಯದಿಂದ ಈ ದೇಶದ ಪ್ರಜೆಗಳೆಲ್ಲರೂ ಆ ಜಗನ್ನಾಥ, ಜಗನ್ಮಾತೆಯ ಕಲ್ಯಾಣವನ್ನು ನೋಡುವ ಭಾಗ್ಯ ಹೊಂದಲಿದ್ದಾರೆ. ನಿಮ್ಮ ದೇಶದಲ್ಲಿರುವ ಪ್ರಜೆಗಳೆಲ್ಲರೂ ಬಹಳ ಅದೃಷ್ಟವಂತರು' ಎಂದು ಹೇಳಿದನು.

ಆಗ ಆಕಾಶರಾಜ ದೇವಗುರುವಾದ ಬೃಹಸ್ಪತಿಯನ್ನು ಮನಸ್ಸಿನಲ್ಲಿ ಪ್ರಾರ್ಥನೆಮಾಡಲು ಆ ಮಹರ್ಷಿ ಕೂಡಲೇ ಪ್ರತ್ಯಕ್ಷನಾದನು. ಆಗ ಬೃಹಸ್ಪತಿ, ಶುಕ ಮಹರ್ಷಿಯರಿಬ್ಬರೂ ಕುಶಲ ಪ್ರಶ್ನೆ ಮಾಡಿ ಶ್ರೀ ಲಕ್ಷ್ಮೀನಾರಾಯಣರ ವಿವಾಹದ ಬಗ್ಗೆ ತಿಳಿದು ತುಂಬಾ ಸಂತೋಷಪಟ್ಟರು. ಆಗ ಆಕಾಶರಾಜ ಬೃಹಸ್ಪತಿಯನ್ನು ಕುರಿತು 'ಓ ಮಹರ್ಷಿ! ನೀವು ಆಗಮಿಸಿದ್ದು ನಮಗೆ ತಂಬಾ ಸಂತೋಷ. ನನ್ನನ್ನು ಅನುಗ್ರಹಿಸಿ ಶ್ರೀ ಪದ್ಮಾವತಿ, ಶ್ರೀನಿವಾಸರ ವಿವಾಹ ಪತ್ರಿಕೆಯನ್ನು ಬರೆಯಬೇಕು' ಎಂದು ಕೇಳಿಕೊಂಡನು.

ಆಗ ಬೃಹಸ್ಪತಿ ಆಕಾಶರಾಜನೊಡನೆ 'ರಾಜಾ! ನೀನು ಸಾಕ್ಷಾತ್ ಶ್ರೀಮಾನ್ನಾರಾಯಣನನ್ನೇ ಅಳಿಯನಾಗಿ ಪಡೆಯುವುದು ನಿನ್ನ ಪೂರ್ವಜನ್ಮಫಲವು. ನಿನ್ನ ಪುಣ್ಯಫಲದಿಂದ ಸಮಸ್ತ ಮಾನವಕೋಟಿ, ಗರುಡ, ಗಂಧರ್ವ, ಕಿನ್ನರ, ಕಿಂಪುರುಷರಿಗೆ ಶ್ರೀ ಲಕ್ಷ್ಮಿ ಶ್ರೀನಿವಾಸರ ವಿವಾಹವನ್ನು ನೋಡುವ ಭಾಗ್ಯ ಸಿಕ್ಕಿದೆ. ಸಮಸ್ತ ಲೋಕದ ಜನರು ಈ ಕಲ್ಯಾಣ ವಿಷಯವನ್ನೇ ನೆನೆಯುತ್ತಿದ್ದಾರೆ. ಅವರೆಲ್ಲರ ಆನಂದ ವರ್ಣನಾತೀತ. ಯಾವಾಗ ವಿವಾಹ ಎಂದು ತುಂಬಾ ಆತುರತೆಯಿಂದ ಎದುರು ನೋಡುತ್ತಿದ್ದಾರೆ. ಆ ಜಗನ್ನಾಥನ ಕಲ್ಯಾಣದಲ್ಲಿ ಹೇಗೆ ವಿಧವಧವಾಗಿ ಅಲಂಕರಿಸಿಕೊಳ್ಳಬೇಕೆಂದು ಈಗಲೇ ಆಲೋಚಿಸಲು ಶುರುಮಾಡಿದ್ದಾರೆ. ಆ ಜಗನ್ಮಾತೃಗಳ ವಿವಾಹಪತ್ರಿಕೆ ಬರೆಯುವ ಅದೃಷ್ಟ ನನಗೆ ಸಿಕ್ಕಿರುವುದು ನನ್ನ ಭಾಗ್ಯವಲ್ಲದೆ ಬೇರೇನು ಹೇಳಲಿ. ಇದೆಲ್ಲಾ ಆ ದಿವ್ಯ ದಂಪತಿಗಳಾದ ಶ್ರೀ ಲಕ್ಷ್ಮೀನಾರಾಯಣರ ಅನುಗ್ರಹವಲ್ಲದೆ ಬೇರೇನೂ ಅಲ್ಲ' ಎಂದು ತಿಳಿಸಿ ಲಗ್ನಪತ್ರಿಕೆ ಬರೆಯಲು ಶುರುಮಾಡಿದರು. ಶ್ರೀ ನಾರಾಯಣನನ್ನು ಒಂದು ಸಾರಿ ಮನಸ್ಸಿನಲ್ಲಿ ಪ್ರಾರ್ಥನೆ ಮಾಡಿ ಈ ರೀತಿ ಮುಂದುವರಿಸಿದರು. 'ಓ ಶೇಷಾಚಲವಾಸಿಯಾದ ಶ್ರೀನಿವಾಸಾ! ಆಕಾಶರಾಜನೆಂಬ ನಾನು ನನ್ನ ಕುಮಾರಿ ಪದ್ಮಾವತಿಯನ್ನು ನಿಮಗೆ ಕೊಟ್ಟು ವಿವಾಹಮಾಡಲು ಬಹಳ ಸಂತೋಷದಿಂದ ನಿಶ್ಚಯಿಸಿದ್ದೇನೆ. ಆದುದರಿಂದ ಈ ವೈಶಾಖ ಶುದ್ಧ ದಶಮಿ ಶುಕ್ರವಾರ ದಿವ್ಯಮುಹೂರ್ತವೆಂದು ಹಿರಿಯರು ನಿಶ್ಚಯಿಸಿದ್ದಾರೆ. ಆದುದರಿಂದ ತಾವು ಬಂಧುಮಿತ್ರ ಸಪರಿವಾರ ಸಮೇತವಾಗಿ ಬಂದು ನಾವು ಮಾಡುವ ಕನ್ಯಾದಾನವನ್ನು ಸ್ವೀಕರಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕಂದು ಕೇಳಿಕೊಳ್ಳುತ್ತೇನೆ' ಎಂದು ಬರೆದನು.

ಲಗ್ನಪತ್ರಿಕೆಯನ್ನು ಬೃಹಸ್ಪತಿಯವರು ಅಲ್ಲಿ ಇರುವ ಎಲ್ಲರಿಗೆ ಓದಿ ಕೇಳಿಸಿದರು. ಲಗ್ನಪತ್ರಿಕೆ ಬರೆಯುವ ಕೆಲಸ ಪೂರ್ತಿಗೊಂಡಾಗ ಪ್ರಕೃತಿ ಸಂತೋಷಪಟ್ಟಳು ಎನ್ನುವ ಸಂಕೇತವಾಗಿ ತಂಪಾದ ತುಂತುರು ಮಳೆ ಸುರಿಯಿತು. ಆಗ ಆಕಾಶರಾಜ ತನ್ನ ಗುರುವಾದ ಶುಕ

ಮಹರ್ಷಿಯಲ್ಲಿ ಈ ಲಗ್ನಪತ್ರಿಕೆಯನ್ನು ಕೊಟ್ಟು ಶೇಷಾಚಲಕ್ಕೆ ಹೋಗಿ ಶ್ರೀನಿವಾಸನಿಗೆ ತಲುಪಿಸಬೇಕಾಗಿ ಪ್ರಾರ್ಥಿಸಿದನು. ಆಗ ಶುಕ ಮಹರ್ಷಿ 'ಓ ರಾಜಾ! ಇದಕ್ಕೆ ಮಿಗಿಲಾದ ಅದೃಷ್ಟವೇನಿದೆ! ತಪ್ಪದೆ ಆ ಶ್ರೀನಿವಾಸನನ್ನು ದರ್ಶನ ಮಾಡಿ ಈ ಲಗ್ನಪತ್ರಿಕೆಯನ್ನು ಅವರಿಗೆ ತಲುಪಿಸುತ್ತೇನೆ' ಎಂದು ಹೇಳಿ ಭಕ್ತಿಯಿಂದ ಲಗ್ನಪತ್ರಿಕೆಯನ್ನು ತೆಗೆದುಕೊಂಡು ತಕ್ಷಣವೇ ಶೇಷಾಚಲಕ್ಕೆ ಹೊರಟುಹೋದನು.

ವಕುಳಾದೇವಿ ಆಶ್ರಮಕ್ಕೆ ಬಂದ ಶುಕಮಹರ್ಷಿಗೆ ತುಂಬಾ ಆದರ ಉಪಚಾರಗಳನ್ನು ಮಾಡಿದಳು. ಸ್ವಲ್ಪ ಹೊತ್ತು ವಿಶ್ರಮಿಸಿದ ನಂತರ ಶುಕಮಹರ್ಷಿ ತಾನು ತೆಗೆದುಕೊಂಡು ಬಂದ ಲಗ್ನಪತ್ರಿಕೆಯನ್ನು ಭಕ್ತಿಯಿಂದ ಶ್ರೀನಿವಾಸನಿಗೆ ತಲುಪಿಸಿದನು. ಶ್ರೀನಿವಾಸನು ಲಗ್ನಪತ್ರಿಕೆಯಲ್ಲಿರುವ ವಿಷಯವನ್ನೆಲ್ಲಾ ಓದಿ ತುಂಬಾ ಆನಂದ ಪಟ್ಟು ತನ್ನ ಪ್ರತ್ಯುತ್ತರವನ್ನು ಈ ವಿಧವಾಗಿ ಬರೆದು ಶುಕನಿಗೆ ತಲುಪಿಸಿದನು. 'ಓ ಮಹಾರಾಜಾ! ನೀನು ಬರೆದ ಲೇಖನ ತಲುಪಿದೆ. ನಿನ್ನ ಕುಮಾರಿ ಪದ್ಮಾವತಿಯನ್ನು ನನ್ನ ಭಾರ್ಯೆಯಾಗಿ ಸ್ವೀಕರಿಸಲು ನನಗೆ ತುಂಬಾ ಸಂತೋಷದಾಯಕವು. ನಾವೆಲ್ಲರೂ ತುಂಬಾ ಆನಂದ ಪಟ್ಟೆವು. ನಾನು ಬಂಧುಮಿತ್ರರೊಡಗೂಡಿ ಬಂದು ನಿನ್ನ ಕುಮಾರಿ ಪದ್ಮಾವತಿಯನ್ನು ತಪ್ಪದೆ ಆನಂದದಿಂದ ಸ್ವೀಕರಿಸಲಿದ್ದೇನೆ ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ' ಎಂದು ಈ ವಿಧವಾಗಿ ಬರೆದನು. ಆ ಲೇಖನವನ್ನು ತೆಗೆದುಕೊಂಡು ಶ್ರೀನಿವಾಸನನ್ನು ಬೀಲ್ಕೊಟ್ಟು ಶುಕಮಹರ್ಷಿ ಆಕಾಶರಾಜನಿದ್ದಲ್ಲಿಗೆ ಹಿಂತಿರುಗಿದನು.

ಶುಕಮಹರ್ಷಿ ಹೋದ ಕೂಡಲೇ ಶ್ರೀನಿವಾಸನು ಕುಬೇರನಿಗೆ ಕರೆ ಕಳಿಸಿದನು. ತಕ್ಷಣ ಬಂದ ಕುಬೇರನಲ್ಲಿ 'ಕುಬೇರ! ನನಗೆ ಪದ್ಮಾವತಿಯೊಂದಿಗೆ ಈ ವೈಶಾಖಮಾಸದಲ್ಲಿ ವಿವಾಹ ನಡೆಯಲಿದೆ. ಸಮಯ ತುಂಬಾ ಕಡಿಮೆ ಇದೆ. ವಿವಾಹಕ್ಕೆ ಬೇಕಾದ ಸಕಲ ಅನುಕೂಲತೆಗಳನ್ನೂ ನೀನು ನನಗೆ ಮಾಡಬೇಕು. ಕಲಿಯುಗದಲ್ಲಿ ನನ್ನ ಭಕ್ತರು ಸಮರ್ಪಿಸುವ ಕಾಣಿಕೆಯಿಂದ ನಿನ್ನ ಸಾಲವನ್ನು ತೀರಿಸುತ್ತೇನೆ' ಎಂದು ಹೇಳಿದನು. ಆಗ ಕುಬೇರ 'ಓ ಶ್ರೀನಿವಾಸ! ಶ್ರೀಮನ್ನಾರಾಯಣಾ! ಜಗನ್ನಾಥ! ನೀನು ನನ್ನಲ್ಲಿ ಧನ ಕೇಳುವುದು ಅಂದರೆ ಅದಕ್ಕೆ ಮಿಗಿಲಾದ ಭಾಗ್ಯವೇನಿದೆ. ಸಾಕ್ಷಾತ್ ಆ ಲಕ್ಷ್ಮೀಪತಿಗೆ ಸಾಲ ಕೊಡುವ ಭಾಗ್ಯ ಯಾರಿಗೆ ಸಿಗುತ್ತದೆ? ತಪ್ಪದೆ ಕೊಡುತ್ತೇನೆ. ನಿನಗೆ ಬೇಕಾದಂತಹ ಐಶ್ವರ್ಯ ಕೊಡುತ್ತೇನೆ. ವಿವಾಹ ಬಹಳ ವೈಭವದಿಂದ ನಡೆಯುವಂತೆ ಹತ್ತಿರದಿಂದ ಇದ್ದು ನೋಡಿಕೊಳ್ಳುತ್ತೇನೆ. ವಿವಾಹಕ್ಕೆ ಬೇಕಾದ ಧನ ಸಹಾಯವನ್ನು ತಪ್ಪದೆ ನಿನಗೆ ನೀಡುತ್ತೆನೆ' ಎಂದು ಹೇಳಿದನು.

ಕುಬೇರ ಹೋದೊಡನೆ ಶ್ರೀನಿವಾಸನು ಗರುಡನನ್ನು ಮನಸ್ಸಿನಲ್ಲಿ ನೆನೆದನು. ಗರುಡನು ಶ್ರೀನಿವಾಸನ ಮೊದಲ ಭಕ್ತ. ಎಲ್ಲಾ ಸಮಯದಲ್ಲೂ ಶ್ರೀ ಸ್ವಾಮಿಯ ಆಜ್ಞೆಗಾಗಿ ರೆಕ್ಕೆಯನ್ನು ಬಿಚ್ಚಿ ತಯಾರಾಗಿರುವ ಪ್ರಿಯ ಭಕ್ತನು. ಗರುಡನ ಸ್ವಾಮಿ ಭಕ್ತಿ ಅನನ್ಯವಾದುದು. ಶ್ರೀನಿವಾಸನು ನೆನೆದದ್ದೇ ತಡ ಗರುಡನು ಸ್ವಾಮಿ ಮುಂದೆ ಪ್ರತ್ಯಕ್ಷನಾದನು. 'ಸ್ವಾಮೀ! ಏನು ನಿನ್ನ ಆಜ್ಞೆ' ಎಂದು ವಿನಯದಿಂದ ಕೇಳಿದನು. 'ಓ ಗರುತ್ಮಂತಾ! ನಿನಗೊಂದು ಶುಭವಾರ್ತೆ. ನಾನು ಆಕಾಶರಾಜನ ಪುತ್ರಿ ಪದ್ಮಾವತಿಯನ್ನು ಈ ವೈಶಾಖಮಾಸದಲ್ಲಿ ವಿವಾಹ ಮಾಡಿಕೊಳ್ಳಲಿದ್ದೇನೆ. ನೀನು ಕೂಡಲೇ ಎಲ್ಲಾ ಲೋಕಗಳಿಗೆ ಹೋಗಿ ಎಲ್ಲರಿಗೂ ಈ ವಿಷಯ ಹೇಳಿ, ನನ್ನ ವಿವಾಹಕ್ಕೆ ಅವರೆಲ್ಲರನ್ನೂ ಆಹ್ವಾನಿಸಬೇಕು. ಪ್ರತಿಯೊಬ್ಬರನ್ನೂ ಹೆಸರು ಹೇಳಿ ಕರೆಯಬೇಕು. ಅವರೆಲ್ಲರೂ ಬಂದರೆ ನನಗೆ ತಂಬಾ ಸಂತೋಷವಾಗುತ್ತದೆ ಎಂದು ಹೇಳಬೇಕು.

ಎಲ್ಲಾ ಲೋಕದವರನ್ನೂ ಆಹ್ವಾನಮಾಡತಕ್ಕದ್ದು. ಈ ವಿವಾಹಕ್ಕೆ ಒಂದು ತಿಂಗಳು ಮುಂದೆಯೇ ಬರಬೇಕೆಂದು ಮತ್ತೆ ಮತ್ತೆ ಹೇಳಬೇಕು. ಪ್ರತಿಯೊಬ್ಬರೂ ಅವರವರ ಬಂಧುಮಿತ್ರರೊಡಗೂಡಿ ಬರಬೇಕೆಂದು ನಾನು ತಿಳಿಸಿರುವುದಾಗಿ ಹೇಳಬೇಕು' ಎಂದು ಹೇಳಿದನು.

ಆಗ ಗರುಡನು 'ಸ್ವಾಮೀ! ಪರಂಧಾಮ! ಪರಮಪುರುಷ! ನಿನ್ನ ವಿವಾಹ ಈ ಜಗತ್ತಿಗೆಲ್ಲಾ ಮಹದಾನಂದದಾಯಕವು. ಶ್ರೀ ಲಕ್ಷ್ಮೀನಾರಾಯಣರ ವಿವಾಹ ಕಣ್ಣಾರೆ ನೋಡುವವರ ಅದೃಷ್ಟ ಏನೆಂದು ಹೇಳಲಿ? ದಿವ್ಯದಂಪತಿಗಳಾದ ನಿಮ್ಮ ವಿವಾಹ ನೋಡಿದವರ, ಈ ವಿವಾಹ ವಿಶೆಷವನ್ನು ಕೇಳಿದವರ ಅದೃಷ್ಟ ಇಷ್ಟೇ ಎಂದು ಹೇಳಲು ಅಸಾಧ್ಯ. ದಂಪತಿಗಳಾದ ನಿಮ್ಮ ವಿವಾಹ ವಿಶೇಷವನ್ನು ತಿಳಿದುಕೊಳ್ಳುವವರ ಹಿಂದಿನ ಜನ್ಮಗಳ ಪಾಪಗಳೆಲ್ಲಾ ಸುಟ್ಟುಬೂದಿಯಾಗುತ್ತದೆ. ಈ ವಿವಾಹ ವಿಶೇಷವನ್ನು ಕೇಳಿದವರ ಕೋರಿಕೆಗಳೆಲ್ಲಾ ಕೂಡಲೇ ಸಫಲವಾಗುತ್ತದೆ. ಅವರಿಗೆ ಸಕಲ ಸೌಭಾಗ್ಯಗಳು ದೊರಕುತ್ತವೆ. ನಿಮ್ಮ ಆಣೆಯ ಪ್ರಕಾರ ನಾನು ತಕ್ಷಣ ಎಲ್ಲಾ ಲೋಕಗಳಿಗೂ ಹೋಗಿ ಎಲ್ಲರನ್ನೂ ಆಹ್ವಾನಿಸಿ ಬರುತ್ತೇನೆ' ಎಂದು ಸ್ವಾಮಿಯನ್ನು ಬೀಳ್ಕೊಂಡು ಹೊರಟುಹೋದನು.

ಗರುಡನು ಮೊದಲು ಕೈಲಾಸಕ್ಕೆ ಹೋಗಿ ಮಹಾಶಿವನ ದರ್ಶನ ಮಾಡಿದನು. ಗರುಡನು ಬಂದೊಡನೆ ಆದಿ ದಂಪತಿಗಳಿಬ್ಬರೂ ಏನೋ ವಿಷಯವಿರಬೇಕೆಂದು ತಿಳಿದು ಒಬ್ಬರನ್ನೊಬ್ಬರು ನೋಡಿಕೊಂಡರು. ಗರುಡನು ಅವರಿಗೆ ನಮಸ್ಕಾರ ಮಾಡಿ ವಿನಯದಿಂದ ನಿಂತುಕೊಂಡನು. 'ಓ ಗರುತ್ಮಂತಾ! ಏನು ವಿಶೇಷ! ಭೂಲೋಕದಲ್ಲಿ ಸ್ವಾಮಿಯ ವಿಶೇಷವೇನಾದರು ತಿಳಿದಿದೆಯಾ? ವೇಂಕಟಾಚಲದಲ್ಲಿರುವ ಶ್ರೀನಿವಾಸನ ವಿಶೇಷಗಳೇನು?' ಎಂದು ಹೇಳಿದನು. ಆಗ ಗರುಡನು ಅವರಲ್ಲಿ 'ದಿವ್ಯ ದಂಪತಿಗಳೇ! ನಿಮಗೆ ನನ್ನ ನಮಸ್ಕಾರಗಳು. ಈ ವಿಶ್ವದಲ್ಲಿ ನಿಮಗೆ ತಿಳಿಯದ ವಿಷಯಗಳೇನಿವೆ ಹೇಳಿ! ಆದಿ ದಂಪತಿಗಳಾದ ನಿಮಗೆ ಎಲ್ಲವೂ ತಿಲಿದಿದೆಯಲ್ಲವೇ! ಶೇಷಾಚಲದಿಂದ ಬರುತ್ತಿದ್ದೇನೆ. ನನ್ನ ಸ್ವಾಮಿ ಶ್ರೀನಿವಾಸನಿಗೆ ಆಕಾಶರಾಜಪುತ್ರಿ ಪದ್ಮಾವತಿಯೊಂದಿಗೆ ವಿವಾಹ ನಿಶ್ಚಯವಾಗಿದೆ. ಶ್ರೀನಿವಾಸನು ನಿಮ್ಮೆಲ್ಲರನ್ನು ಸಪರಿವಾರಸಮೇತ ತನ್ನ ವಿವಾಹಕ್ಕೆ ಬರಬೇಕೆಂದು ಆಹ್ವಾನಿಸಿದ್ದಾನೆ. ವೈಶಾಖ ಶುದ್ದ ದಶಮಿಯಂದು ನಡೆಯುವ ವಿವಾಹಕ್ಕೆ ನೀವು ತಪ್ಪದೆ ಬರಬೇಕು' ಎಂದು ಹೇಳಿದನು.

ಆಗ ಪಾರ್ವತಿ ಗರುಡನೊಡನೆ 'ವೈನತೇಯಾ! ಎಂತ ಒಳ್ಳೆಯ ಮಾತು ಹೇಳಿದ್ದೀಯ. ಇಕೋ ನಿನಗೆ ಬಹುಮಾನ! ಎಂದು ತನ್ನ ಪಕ್ಕದಲ್ಲೇ ಇರುವ ಫಲಗಳನ್ನು ಕೊಟ್ಟು ಹೀಗೆ ಹೇಳಿದಳು 'ಓ ಗರತ್ಮಂತಾ! ಎಂತಹ ಸಿಹಿಯಾದ ಮಾತು ಹೇಳಿರುವೆ! ಶ್ರೀ ಲಕ್ಷ್ಮೀನಾರಾಯಣರ ವಿವಾಹ ಭೂಲೋಕದ ಶೇಷಾಚಲದಲ್ಲಿ ಅದ್ಭುತವಾಗಿ ನಡೆಯಲಿರುವುದು ತಂಬಾ ಸಂತೋಷ. ನನ್ನ ಸಹೋದರಿ ಪದ್ಮಾವತಿಯನ್ನು ನಾನೇ ಹತ್ತಿರದಲ್ಲಿದ್ದು ಸ್ವಯಂ ಮದುಮಗಳಾಗಿ ಅಲಂಕರಿಸುತ್ತೇನೆ. ಓ ನಾಥಾ! ನೀವು ನಿಮ್ಮ ಪ್ರಿಯಸಖನಾದ ಶ್ರೀಮಾನ್ನಾರಾಯಣನನ್ನು ಮದುಮಗನಾಗಿ ಅಲಂಕರಿಸಿರಿ. ಸೃಷ್ಟಿಯಲ್ಲಿರುವ ಐಶ್ವರ್ಯವೆಲ್ಲಾ ನಮ್ಮ ಪದ್ಮಾವತಿಯದಲ್ಲವೇ! ಅದ್ಭುತ ಸೌಂದರ್ಯರಾಶಿಯಾದ ಅವಳು ತಮ್ಮನ್ನು ಯಾವಾಗ ಧರಿಸುತ್ತಾಳೆ ಎಂದು ಶತಕೋಟಿ ದಿವ್ಯ ಆಭರಣಗಳು ಎಷ್ಟೋ ಆತುರತೆಯಿಂದ ಎದುರು ನೋಡುತ್ತಿವೆ. ನಾಳೆಯೇ ನಾವೆಲ್ಲರೂ ಹೊರಟು ಶೇಷಾಚಲಕ್ಕೆ ಬರುತ್ತೇವೆ. ನಾಳೆಯಿಂದಲೇ

ಪ್ರತಿದಿನ ನಾರಾಯಣಪುರಕ್ಕೆ ಹೋಗಿ ಪದ್ಮಾವತಿಯನ್ನು ದಿನಕ್ಕೊಂದು ರೀತಿಯಂತೆ ಅಲಂಕರಿಸುತ್ತೇವೆ. ಈ ಸಮಸ್ತ ಜೀವಕೋಟಿ ಈ ಮಧುರ ಕ್ಷಣಗಳಿಗಾಗಿ ಅಲ್ಲವೇ ಎದುರುನೋಡುತ್ತಿರುವುದು' ಎಂದು ಹೇಳಿದಳು.

ಗರುಡನು ಅವರನ್ನು ಬೀಳ್ಕೊಂಡು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರನ್ನು ಭೇಟಿಯಾಗಿ ಶ್ರೀನಿವಾಸನ ವಿವಾಹ ವಿಷಯವನ್ನು ಹೇಳಿದನು. ಈ ವಿಷಯ ಕೇಳಿ ಆ ದಂಪತಿಗಳಿಬ್ಬರೂ ತುಂಬಾ ಸಂತೋಷಪಟ್ಟರು. 'ಓ ವೈನತೇಯಾ! ಎಂತಹ ಒಳ್ಳೆಯ ಮಾತು ಹೇಳಿರುವೆ! ಶ್ರೀ ಲಕ್ಷ್ಮೀನಾರಾಯಣರ ವಿವಾಹಕ್ಕೆ ಬರುವ ಆನಂದಕ್ಕಿಂತ ಹೆಚ್ಚಿನ ಆನಂದ ಬೇರೇನಿದೆ? ನಾವಿಬ್ಬರೂ ಬಂಧುಮಿತ್ರ ಸಪರಿವಾರಸಮೇತವಾಗಿ ವಿವಾಹಕ್ಕೆ ಬರುವುದಾಗಿ ಹೇಳು' ಎಂದು ಬ್ರಹ್ಮದೇವನು ಹೇಳಿದನು. ಆಗ ಸರಸ್ವತಿದೇವಿ 'ಓ ಗರುತ್ಮಂತಾ! ನಮ್ಮ ಪ್ರಿಯ ಸಹೋದರಿ ಮಹಾಲಕ್ಷ್ಮೀಯನ್ನು ನಾನು, ಗೌರಿ ಹತ್ತಿರದಲ್ಲಿದ್ದು ಅಲಂಕರಿಸುತ್ತೇವೆ' ಎಂದು ಹೇಳಿದಳು. ಗರುಡನು ಅವರಿಂದ ಬೀಳ್ಕೊಂಡು ಇಂದ್ರಲೋಕಕ್ಕೆ ಹೋಗಿ ಇಂದ್ರನನ್ನು ಭೇಟಿಯಾದನು.

ಇಂದ್ರನ ಹತ್ತಿರ ಬಂದ ಗರುಡನು ಮಹೇಂದ್ರನೊಡನೆ 'ಓ ಮಹೇಂದ್ರ! ಶ್ರೀ ಪದ್ಮಾವತಿ ಶ್ರೀನಿವಾಸರ ವಿವಾಹ ಈ ವೈಶಾಖ ಶುದ್ದ ದಶಮಿಯಂದು ಭೂಲೋಕದ ನಾರಾಯಣಪುರದಲ್ಲಿ ಬಹಳ ವೈಭವದಲ್ಲಿ ನಡೆಯಲಿದೆ. ನೀವು, ನಿಮ್ಮ ಸಪರಿವಾರ ಸಮೇತರಾಗಿ ವಿವಾಹಕ್ಕೆ ಬರಬೇಕು' ಎಂದು ಹೇಳಿದನು. ಆಗ ಇಂದ್ರನು ತುಂಬಾ ಸಂತೋಷದಿಂದ 'ಓ ಗರುತ್ಮಂತಾ! ತಪ್ಪದೆ ಬರುತ್ತೇನೆಂದು ಶ್ರೀಮಾನ್ನಾರಾಯಣನಿಗೆ ತಿಳಿಸು. ಶ್ರೀ ಲಕ್ಷ್ಮೀನಾರಾಯಣರ ವಿವಾಹವನ್ನು ಕಣ್ಣಾರೆ ನೋಡುವ ಭಾಗ್ಯಕ್ಕಿಂತ ಮಿಗಿಲಾದುದೇನಿದೆ? ಊರ್ವಶಿ, ಮೇನಕೆ, ತ್ರಿಲೋತ್ತಮೆ ಮೊದಲಾದ ದೇವಕನ್ಯೆಯರೆಲ್ಲರೂ ತಮ್ಮ ತಮ್ಮ ನಾಟ್ಯದಿಂದ ವಿವಾಹಕ್ಕೆ ಬಂದ ಅತಿಥಿಯರೆಲ್ಲರನ್ನೂ ಸಂತೋಷಪಡಿಸುತ್ತಾರೆ. ಈ ವಿವಾಹ ಸೃಷ್ಟಿ ಇರುವ ವರೆಗೆ ಎಲ್ಲರೂ ನೆನೆಪಿಟ್ಟುಕೊಳ್ಳುವಂತೆ ಅದ್ಭುತವಾಗಿ ನಡೆಯುತ್ತದೆ' ಎಂದು ಹೇಳಿದನು.

ಇಂದ್ರನನ್ನು ಬೀಳ್ಕೊಂಡು ಗರುಡನು ದೇವತೆಗಳ ಶಿಲ್ಪಿ ವಿಶ್ವಕರ್ಮನ ಹತ್ತಿರ ಹೋದನು. 'ವಿಶ್ವಕರ್ಮ! ನಿನಗಾಗಿ ಶುಭವಾರ್ತೆ ತೆಗೆದುಕೊಂಡು ಬಂದಿದ್ದೇನೆ. ವೈಕುಂಠವಾಸಿಯಾದ ಶ್ರೀಮಾನ್ನಾರಾಯನು ಭೂಲೋಕದಲ್ಲಿ ಶ್ರೀನಿವಾಸನಾಗಿ ಇರುವ ವಿಷಯ ನಿನಗೆ ತಿಳಿದಿದೆ ತಾನೆ! ಶ್ರೀನಿವಾಸನಿಗೆ ಈ ವೈಶಾಖಮಾಸದಲ್ಲಿ ಸಾಕ್ಷಾತ್ ಲಕ್ಷ್ಮೀಸ್ವರೂಪಳಾದ ಪದ್ಮಾವತಿಯೊಂದಿಗೆ ವಿವಾಹ ನಡೆಯಲಿದೆ. ಈ ವಿವಾಹಕ್ಕೆ ಸಕಲ ದೇವತೆಗಳು, ಸಕಲ ಮುನಿಗಣಗಳೂ, ಸಿದ್ದರು, ಕಿನ್ನರ ಕಿಂಪುರುಷ ಗಣಗಳೂ ಬರುತ್ತಿದ್ದಾರೆ. ಇವರೆಲ್ಲರ ವಸತಿಗಾಗಿ ನೀನು ವಿಶಾಲವಾದ ಅದ್ಭುತವಾದ ನಗರವನ್ನು ನಿರ್ಮಿಸಲು ಶ್ರೀಮಾನ್ನಾರಾಯಣನು ನಿನಗೆ ಹೇಳಿ ಕಳುಹಿಸಿದ್ದಾನೆ. ಆದುದರಿಂದ ವಿವಾಹಕ್ಕೂ ನಿನ್ನ ಸಪರಿವಾರ ಸಮೇತವಾಗಿ ಬರಬೇಕೆಂದು ಸ್ವಾಮಿ ಹೇಳಿ ಕಳುಹಿಸಿದ್ದಾನೆ' ಎಂದು ಹೇಳಿದನು.

ಆಗ ವಿಶ್ವಕರ್ಮ ಗರುಡನೊಡನೆ 'ಇದಕ್ಕೆ ಮಿಗಿಲಾದ ಭಾಗ್ಯವೇನಿದೆ. ನಾನು ತಪ್ಪದೆ ನಾಳೆಯೇ ಪ್ರಯಾಣಿಸಿ ಶೇಷಾಚಲ ಸೇರಿ ಅದ್ಭುತವಾದ ನಗರವನ್ನು ನಿರ್ಮಿಸುತ್ತೇನೆ. ಹಾಗೆಯೇ ಆಕಾಶರಾಜನನ್ನು ಭೇಟಿ ಮಾಡಿ ಅಲ್ಲಿ ಕೂಡಾ ಬ್ರಹ್ಮಾಂಡವಾದ ವಸತಿಗೃಹವನ್ನು ನಿರ್ಮಿಸುತ್ತೇನೆ. ಕಲ್ಯಾಣವೇದಿಕೆಯನ್ನು ಅದ್ಭುತವಾಗಿ ರೂಪಿಸುತ್ತೇನೆ. ಸ್ವಾಮಿಯವರ

ಅನುಗ್ರಹ ನನ್ನ ಮೇಲೆ ಇರುವುದಕ್ಕೆ ಶ್ರೀನಿವಾಸನಿಗೆ ನನ್ನ ಕೃತಜ್ಞತೆಯನ್ನು ತಿಳಿಸಿರಿ' ಎಂದು ಹೇಳಿದನು. ಗರುಡನು ಅವನನ್ನು ಬೀಳ್ಕೊಂಡು ಹೊರಟುಹೋದನು.

ಅಲ್ಲಿಂದ ಮುಂದೆ ಗರುಡನು ಉಳಿದ ಅಷ್ಟದಿಕ್ಪಾಲಕರು, ನವಗ್ರಹ ದೇವತೆಯರನ್ನು ಭೇಟಿ ಮಾಡಿ ಶ್ರೀನಿವಾಸನ ವಿವಾಹಕ್ಕೆ ಬರಬೇಕೆಂದು ಹೇಳಿದನು. ಅವರೆಲ್ಲರೂ ಬಹಳ ಆನಂದದಿಂದ ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣಕ್ಕೆ ತಾವೆಲ್ಲರೂ ತಪ್ಪದೆ ಬರುವುದಾಗಿ ಹೇಳಿದರು.

ಕೈಲಾಸದಲ್ಲಿ ಪಾರ್ವತಿ, ಪರಮೇಶ್ವರರು ಶ್ರೀನಿವಾಸನ ವಿವಾಹಕ್ಕೆ ಹೊರಡಲನುವಾಗುತ್ತಿರುವಾಗ ಅಲ್ಲಿಗೆ ಚತುರ್ಮುಖ ಬ್ರಹ್ಮ, ಸರಸ್ವತಿಯೊಂದಿಗೆ ಬಂದನು. ಬಂದವನೇ 'ಓ ಪರಮೇಶ್ವರ! ನೀನು ಶುಭವಾರ್ತೆ ಕೇಳಿದೆಯಲ್ಲವೇ! ನಮ್ಮ ನಾರಾಯಣನಿಗೂ, ಲಕ್ಷ್ಮೀಸ್ವರೂಪಳಾದ ಪದ್ಮಾವತಿಗೂ ವಿವಾಹ! ನಾವು ಮೊದಲೇ ಹೋಗಿ ಶ್ರೀ ಲಕ್ಷ್ಮೀನಾರಾಯಣರ ವಿವಾಹವನ್ನು ಬಹಳ ವೈಭವದಿಂದ ನಡೆಸಬೇಕು. ನೀವು ಯಾವಾಗ ಹೊರಡುತ್ತೀರಿ ಎಂದು ತಿಳಿಸಿದರೆ ನಾವೂ ನಿಮ್ಮೊಡನೆ ಕೂಡಿಕೊಂಡು ಬರುತ್ತೇವೆ' ಎಂದು ಹೇಳಿದನು.

ಆಗ ಗೌರಿದೇವಿ ಸರಸ್ವತಿಯೊಡನೆ 'ಅಕ್ಕಾ! ನೀವು ಬಂದದ್ದು ನಮಗೆ ತುಂಬಾ ಸಂತೋಷ. ಶ್ರೀನಿವಾಸನ ಕಲ್ಯಾಣದ ಹೊಣೆ ನಮ್ಮದೇ! ಇದೆಲ್ಲಾ ನಮ್ಮ ಮನೆಯ ಶುಭಕಾರ್ಯವಲ್ಲವೇ! ಈ ಸೃಷ್ಟಿಯೆಲ್ಲವೂ ಆಶ್ಚರ್ಯಪಡುವಂತೆ ಅತ್ಯಂತ ಮಹದಾನಂದವಾಗಿ ಬಹಳ ಅದ್ಭುತವಾಗಿ ನಾವು ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣವನ್ನು ನಡೆಸಿಕೊಡೋಣ. ಅಲ್ಲಿ ಯಾವುದಕ್ಕೂ ಕೊರೆ ಬಾರದಂತೆ, ಯಾವಾಗಲೂ ಎಲ್ಲರೂ ನೆನೆಯುವಂತೆ ಈ ಕಲ್ಯಾಣವನ್ನು ನಡೆಸಿಕೊಡೋಣ' ಎಂದಳು. ಇಷ್ಟರಲ್ಲಿ ಅಲ್ಲಿಗೆ ಅಷ್ಟದಿಕ್ಪಾಲಕರು, ನವಗ್ರಹದೇವತೆಯರು ಬಂದರು. ಆಗ ಅವರಲ್ಲಿ ಪರಮೇಶ್ವರನು 'ಓ ಅಷ್ಟದಿಕ್ಪಾಲಕರೇ! ನವಗ್ರಹದೇವತೆಯರೇ! ನಮ್ಮ ಶ್ರೀಮನ್ನಾರಾಯಣನು ಮದುಮಗನಾಗಲಿದ್ದಾನೆ! ನಮ್ಮ ಮಹಾಲಕ್ಷ್ಮೀಯು ಮದುಮಗಳಾಗಲಿದ್ದಾಳೆ. ಇವರ ಕಲ್ಯಾಣ ಈ ಜಗತ್ತಿಗೇ ಕಲ್ಯಾಣ. ಆದುದರಿಂದ ನೀವೆಲ್ಲರೂ ವಿವಾಹಕ್ಕೆ ಮೊದಲೇ ಶೇಷಾಚಲಕ್ಕೆ ಹೋಗಿ ಎಲ್ಲಾ ಏರ್ಪಾಡುಗಳನ್ನೂ ಹತ್ತಿರದಲ್ಲಿದ್ದು ನೋಡಿಕೊಳ್ಳಬೇಕು' ಎಂದು ಹೇಳಿದನು.

ಆಗ ಇಂದ್ರನು 'ಓ ಪರಮೇಶ್ವರ, ಹಾಗೆಯೇ ಆಗಲಿ. ಇದಕ್ಕೂ ಮಿಗಿಲಾದ ಆನಂದ ನಮಗೆ ಬೇರೇನಿದೆ? ಜಗನ್ನಾಥನ ಕಲ್ಯಾಣಕ್ಕೆ ನಾವೆಲ್ಲರೂ ತಪ್ಪದೆ ಸಹಾಯ, ಸಹಕಾರಗಳನ್ನು ಮಾಡುತ್ತೇವೆ. ಇದು ನಮ್ಮ ಭಾಗ್ಯ. ಅತಿಥಿಯರೆಲ್ಲರಿಗೂ ಅದ್ಭುತವಾದ ವ್ಯವಸ್ಥೆಯನ್ನು ಮಾಡುತ್ತೇವೆ' ಎಂದು ಹೇಳಿದನು. ಆಗ ವಾಯುದೇವನು 'ಓ ಬ್ರಹ್ಮಾ, ಈಶ್ವರರೇ! ನಿಮಗೆ ನನ್ನ ನಮಸ್ಕಾರಗಳು. ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣ ನಡೆಯುವ ಎರಡು ತಿಂಗಳ ಮುಂಚೆಯೇ ಭೂಲೋಕದಲ್ಲೆಲ್ಲಾ ತಂಪಾದ ಶುಭ್ರ ಗಾಳಿ ಬೀಸುವಂತೆ ನೋಡಿಕೊಳ್ಳುತ್ತೇನೆ. ಅತಿಥಿಯರೆಲ್ಲರಿಗೂ ಒಳ್ಳೆಯ ವಾತಾವರಣವನ್ನು ಕಲ್ಪಿಸುತ್ತೇನೆ' ಎಂದು ಹೇಳಿದನು. ಆಗ ಸರಸ್ವತಿ ವಾಯುದೇವನಲ್ಲಿ 'ಸಂತೋಷ ವಾಯುದೇವ! ಆದರೆ ಸ್ವಾಮಿಯ ಕಲ್ಯಾಣ ಸಮಯದಲ್ಲಿ ಆ ಆನಂದದ ಉತ್ತುಂಗದಲ್ಲಿ ವಿಜೃಂಭಿಸಬೇಡ. ಒಂದೇ ಸಾರಿ ಪ್ರಳಯಾಂತಕವಾಗಬಹುದು. ಈ ವಿಷಯವನ್ನು ನೆನಪಿನ್ನಲ್ಲಿಟ್ಟುಕೊ' ಎಂದು ಹೇಳಿದಳು.

‘ಆಗಲಿ ತಾಯಿ! ನನ್ನನ್ನು ಆಟವಾಡಿಸುತ್ತಿದ್ದೀಯಾ ಜನನಿ! ಆನಂದದಿಂದ ಎಷ್ಟೇ ಮೈಮರೆತರೂ ತಂಪಾದ, ಮಂದವಾದ ಗಾಳಿ ಮಾತ್ರವೇ ಬೀಸುವಂತೆ ನೋಡಿಕೊಳ್ಳುತ್ತೇನೆ!’ ಎಂದನು. ಶ್ರೀ ಪದ್ಮಾವತಿ ಶ್ರೀನಿವಾಸರ ವಿವಾಹವನ್ನು ನೆನೆ ನೆನೆದು ಅವರೆಲ್ಲರೂ ತುಂಬಾ ಆನಂದಪಟ್ಟರು.

ಇಷ್ಟರಲ್ಲಿ ಅಲ್ಲಿಗೆ ನಾರದರು ನಾರಾಯಣ ನಾಮವನ್ನು ಉಚ್ಚರಿಸುತ್ತಾ ಅಲ್ಲಿಗೆ ಬಂದರು. ಅಲ್ಲಿ ನೆರೆದವರನ್ನೆಲ್ಲಾ ನೋಡಿ ನಾರದರು ಆಶ್ಚರ್ಯಹೊಂದಿದರು. ‘ಏನಿದು ವಿಚಿತ್ರ! ದೇವತೆಯರೆಲ್ಲರೂ ಯಾಕೆ ಒಂದುಗೂಡಿದ್ದೀರಿ! ನಿಮ್ಮ ಆನಂದಕ್ಕೆ ಏನು ಕಾರಣವಿರಬಹುದು!’ ಎಂದು ಹೇಳಿದನು. ಆಗ ಗೌರಿದೇವಿ ನಾರದರಿಗೆ ‘ಆಹಾ! ಏನು ನಾರದಾ! ನಿಮ್ಮ ನಾರಾಯಣನಿಗೆ ವಿವಾಹವಂತೆ! ನಮಗೆ ಹೇಳಲೇ ಇಲ್ಲ! ಗರುಡನು ಬಂದು ಹೇಳುವವರೆಗೆ ನಮಗೆ ತಿಳಿಯದು!’ ಎಂದಳು. ಆಗ ನಾರದರು ‘ತಾಯಿ! ಏನೋ ನನ್ನನ್ನು ಆಟವಾಡಿಸುತ್ತಿದ್ದೀರಿ! ಆದರೂ ನಾರಾಯಣನು ನನ್ನವನೇನಾ! ನಮ್ಮೆಲ್ಲರಿಗೆ ಸೇರಿದವನು ತಾನೆ! ಮುಖ್ಯವಾಗಿ ತ್ರಿಮೂರ್ತಿಗಳಾದ ನಿಮ್ಮಲ್ಲಿ ಒಬ್ಬನು! ಆಮೇಲೆ ಅಲ್ಲವೆ ನಮಗೆ ಸೇರಿದವನು’ ಎಂದನು. ಆಗ ಚತುರ್ಮುಖನು ನಾರದರಲ್ಲಿ ‘ಓ ನಾರದಾ! ಶ್ರೀ ಲಕ್ಷ್ಮೀ ಶ್ರೀನಿವಾಸರ ವಿವಾಹ ನಮಗೆಲ್ಲರಿಗೆ ತುಂಬಾ ಸಂತೋಷದಾಯಕ. ಗರುಡನು ಎಲ್ಲಾ ಲೋಕಗಳಿಗೆ ಹೋಗಿ, ಎಲ್ಲರಿಗೆ ಈ ಶುಭವಾರ್ತೆಯನ್ನು ತಲುಪಿಸುತ್ತಿದ್ದಾನೆ. ಈ ಆನಂದಕರ ವಾರ್ತೆಯನ್ನು ಹೇಳುವ ಸಂತೋಷದಲ್ಲಿ ಯಾರನ್ನಾದರೂ ಮರೆತುಬಿಡಬಹುದು. ಆದುದರಿಂದ ನೀನು ಕೂಡಾ ನಿನ್ನ ಲೋಕಸಂಚಾರದಲ್ಲಿ ನೀನು ಭೇಟಿಮಾಡಿದವರೆಲ್ಲರಿಗೂ ಈ ಶುಭವಾರ್ತೆಯನ್ನು ಹೇಳಬೇಕು. ಎಲ್ಲರಿಗೂ ಈ ವಿವಾಹಕ್ಕೆ ತಪ್ಪದೆ ಬರಬೇಕೆಂದು ನಾನು ಹೇಳಿದೆನೆಂದು ಕೂಡಾ ಹೇಳಬೇಕು. ಇಷ್ಟಕ್ಕೂ ಮುಹೂರ್ತ ನೆನಪಿದೆ ತಾನೆ! ಬರುವ ವೈಶಾಖ ಶುದ್ಧ ದಶಮಿ ಶುಕ್ರವಾರ! ನಿನ್ನ ಲೋಕಸಂಚಾರದಲ್ಲಿ ನೀನು ಭೇಟಿಮಾಡಿದವರೆಲ್ಲರಿಗೂ ಈ ಶುಭವಾರ್ತೆಯನ್ನು ಹೇಳಬೇಕು’ ಎಂದನು. ಆಗ ನಾರದರು ‘ತಂದೆ! ಇದಕ್ಕೆ ಮಿಗಿಲಾದ ಆನಂದವೇನಿದೆ. ನಿಮ್ಮ ಆಜ್ಞೆಯನ್ನು ಶಿರಸಾ ವಹಿಸುತ್ತೇನೆ’ ಎಂದು ಹೇಳಿ ಅವರನ್ನೆಲ್ಲಾ ಬೀಳ್ಕೊಂಡು ಹೊರಟುಹೋದನು. ಆಮೇಲೆ ಅಲ್ಲಿದ್ದವರೆಲ್ಲರೂ ಅವರವರ ಲೋಕಕ್ಕೆ ತೆರಳಿದರು.

ಶ್ರೀ ಪದ್ಮಾವತಿ, ಶ್ರೀನಿವಾಸರ ಕಲ್ಯಾಣ ವಾರ್ತೆಯನ್ನು ತಿಳಿಸುತ್ತಾ ಎಲ್ಲಾ ಲೋಕಗಳನ್ನೂ ತಿರುಗಿದ ಗರುಡನು ತಿರುಗಿ ಶೇಷಾಚಲ ಸೇರಿ ಶ್ರೀನಿವಾಸನ ಬಳಿಗೆ ಬಂದನು. ಸ್ವಾಮಿಯೊಡನೆ ‘ಸ್ವಾಮೀ! ನೀವು ಹೇಳಿದಂತೆ ಎಲ್ಲಾ ಲೋಕದಲ್ಲಿರುವವರಿಗೆ ನಿಮ್ಮ ಕಲ್ಯಾಣ ವಾರ್ತೆಯನ್ನು ತಲುಪಿಸಿದೆನು. ಎಲ್ಲರೂ ಬಹಳ ಸಂತೋಷಪಟ್ಟರು. ಆ ಶುಭ ಮುಹೂರ್ತಕ್ಕೋಸ್ಕರ ಎಲ್ಲರೂ ಎದುರು ನೋಡುತ್ತಿದ್ದಾರೆ’ ಎಂದು ಹೇಳಿದನು.

ಆ ಮರುದಿನವೇ ವಿಶ್ವಕರ್ಮ ತನ್ನ ಸಹಾಯಕರೊಂದಿಗೆ ಕೂಡಿಕೊಂಡು ಶೇಷಾಚಲ ಸೇರಿದನು. ಎರಡು ದಿನದಲ್ಲೇ ಶೇಷಾಚಲವನ್ನು ಅದ್ಭುತವಾಗಿ ಬದಲಿಸಿದನು. ಬ್ರಹ್ಮಾಂಡವೇ ಇವರ ಗೃಹಗಳು, ಮಧ್ಯೆ ಮಧ್ಯೆ ಶಿಲಾಕೃತಿಗಳು, ವಸತಿ ಗೃಹಗಳಲ್ಲಿ ಅದ್ಭುತವಾದ ಶಿಲ್ಪಕಲೆಗಳು, ಸುಂದರವಾದ ಉದ್ಯಾನವನಗಳು.... ಶೇಷಾಚಲದ ಶೋಭೆ ಮಾತಿನಿಂದ ಹೇಳಲಸಾಧ್ಯವಾದುದು. ಪರಮೇಶ್ವರ, ಪಾರ್ವತಿಯರು ವಿಶ್ರಮಿಸುವ ವಸತಿಗೃಹ ದಿವ್ಯವಾಗಿ ನಿರ್ಮಾಣವಾಯಿತು. ಹಾಗೆಯೇ ಚತುರ್ಮುಖ ಬ್ರಹ್ಮ, ಸರಸ್ವತಿಯರ ವಸತಿಗೃಹ ಕೂಡಾ

ಬಹಳ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟಿತು. ಸೃಷ್ಟಿಕರ್ತ ಬ್ರಹ್ಮನ ವಸತಿಗೃಹದಲ್ಲಿರುವ ಕಂಬಗಳನ್ನು ಅಪರೂಪವಾಗಿ ನಿರ್ಮಿಸಲಾಯಿತು. ಯಾವ ಸ್ತಂಭವನ್ನು ಮುಟ್ಟಿದರೂ ವೇದಪಠನ ಕೇಳಿಬರುತ್ತಿತ್ತು. ಪಾರ್ವತಿ, ಪರಮೇಶ್ವರ ವಸತಿಗೃಹದಲ್ಲಿರುವ ಕಂಬಗಳನ್ನು ಮುಟ್ಟಿದರೆ ಓಂಕಾರ ನಾದ ಕೇಳಿಸುತ್ತಿತ್ತು. ಮತ್ತೆ ಕೆಲವು ಕಂಬಗಳನ್ನು ಮುಟ್ಟಿದರೆ ಢಮರಿನ ಧ್ವನಿ ಬರುತ್ತಿತ್ತು. ಇನ್ನು ಬೇರೆ ಕಂಬಗಳನ್ನು ಮುಟ್ಟಿದರೆ ಶಂಖದ ಧ್ವನಿ ಬರುತ್ತಿತ್ತು. ಆಹಾ! ಎಂತಹ ಅದ್ಭುತ ಶಿಲ್ಪಕಲೆ! ಈ ವಿಧವಾಗಿ ದೇವತೆಗಳೆಲ್ಲರ ವಸತಿಗೃಹಗಳು ಬಹಳ ಅದ್ಭುತವಾಗಿ ನಿರ್ಮಾಣಗೊಂಡವು.

ಇಲ್ಲಿ ಮದುಮಗನಾದ ಶ್ರೀನಿವಾಸನಿಗೋಸ್ಕರ ಒಂದು ಪ್ರತ್ಯೇಕ ಭವನ ನಿರ್ಮಾಣವಾಯಿತು. ಈ ಭವನದಲ್ಲಿ ತುಂಬಾ ಕೊಟಡಿಗಳನ್ನು ನಿರ್ಮಿಸಲಾಯಿತು. ಪ್ರತಿಯೊಂದು ಕೊಠಡಿಯನ್ನೂ ಬಹಳ ಅಂದವಾಗಿ ಅಲಂಕರಿಸಲಾಯಿತು. ಭವನದ ಮುಂದೆ ಚೆಂದದ ಹೂದೋಟಗಳು ನಿರ್ಮಿಸಲ್ಪಟ್ಟವು. ಭವನದ ಮೇಲೆ ಬಣ್ಣ ಬಣ್ಣದ ಹೂಗಳಿಂದ ತುಂಬಾ ಅದ್ಭುತವಾದ ಶಂಖ, ಚಕ್ರ, ನಾಮಗಳನ್ನು ರೂಪಿಸಲಾಯಿತು. ಶೇಷಾಚಲದಲ್ಲಿ ಎಲ್ಲಿಂದ ನೋಡಿದರೂ ಕಾಣುವಂತೆ ಎತ್ತರದಲ್ಲಿ ಪೋಣಿಸಲಾಯಿತು. ಶಂಖ, ಚಕ್ರ, ನಾಮಗಳನ್ನು ರೂಪಿಸಲು ತುಂಬಾ ಅದ್ಭುತವಾದ ಹೂಗಳನ್ನು ತರುವ ಕೆಲಸ ನಡೆಯಿತು. ಭವನದ ಗೋಡೆಗಳ ಅನೇಕ ಸ್ಥಳಗಳಲ್ಲಿ ಶಂಖ, ಚಕ್ರಗಳನ್ನು ಹೂವಿನಿಂದ ಅಲಂಕರಿಸಲಾಯಿತು. ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕಲಾಯಿತು. ಎಷ್ಟೋ ವಿಧದ ಅಲಂಕಾರದಿಂದ ಶ್ರೀನಿವಾಸನ ವಸತಿಗೃಹ ಬಹಳ ಅಂದವಾಗಿ ನಿರ್ಮಾಣವಾಯಿತು.

ಆ ದಿನ ವೈಶಾಖ ಶುದ್ಧ ಪಾಡ್ಯ. ಶೇಷಾಚಲವೆಲ್ಲಾ ಬಹಳ ಸಂಭ್ರಮದಿಂದ ಕೂಡಿದೆ. ಆ ದಿನ ಮುಂಜಾನೆಯಿಂದ ಅತಿಥಿಗಳೆಲ್ಲರೂ ಬರಲಾರಂಭಿಸಿದರು. ಉದಯಕಾಲದಲ್ಲೇ ಪಾರ್ವತಿ, ಪರಮೇಶ್ವರರು ಪ್ರಥಮ ಗಣಗಳು ಅನೇಕ ವಿಧಗಳಿಂದ ಅದ್ಭುತವಾಗಿ ನೃತ್ಯವಾಡುತ್ತಾ ಶೇಷಾಚಲವನ್ನು ಸೇರಿದರು. ಅವರನ್ನು ಶ್ರೀನಿವಾಸನು ಎದುರುಗೊಂಡು 'ಓ ಮಹಾಶಿವ! ನಿನ್ನ ಆಗಮನದಿಂದ ನನಗೆ ಬಹಳ ಆನಂದ ವಾಗಿದೆ. ಕೈಲಾಸದಿಂದ ನೀವೆಲ್ಲರು ಬಂದದ್ದು ನನಗೆ ಅತ್ಯಂತ ಸಂತೋಷತಂದಿದೆ' ಎಂದು ಹೇಳಿದನು. ಹೀಗೆ ಪರಮೇಶ್ವರ, ಶ್ರೀಮಾನ್ನಾರಾಯಣರು ಕುಶಲ ಪ್ರಶ್ನೆಮಾಡುತ್ತಿರಲು ಹಿಂದಿನಿಂದ ಬರುತ್ತಿರುವ ಬ್ರಹ್ಮ, ಸರಸ್ವತಿಯರು ಕಾಣಿಸಿದರು. ಹತ್ತಿರ ಬಂದೊಡನೆ ಬ್ರಹ್ಮ ವಿಷ್ಣುವಿನಲ್ಲಿ 'ಓ ಶ್ರೀನಿವಾಸ! ನಿನ್ನ ವಿವಾಹವನ್ನು ಬಹಳ ಆತುರತೆಯಿಂದ ಎದುರು ನೋಡುತ್ತಿದ್ದೇವೆ. ನಾವೇನು, ಈ ವಿಶ್ವವೇ ಪದ್ಮಾವತಿ - ಶ್ರೀನಿವಾಸರ ಕಲ್ಯಾಣವನ್ನು ಎದುರು ನೋಡುತ್ತಿದೆ. ಸರಸ್ವತಿ, ಪಾರ್ವತಿ ತಮ್ಮ ಪ್ರಿಯ ಸಹೋದರಿ ಯಾವಾಗ ಮದುಮಗಳಾಗಿ ಅಲಂಕರಿಸಲ್ಪಡುತ್ತಾಳೆ ಎಂದು ಕಾದುಕೊಂಡಿದ್ದಾರೆ. ಇನ್ನೇನು? ಹತ್ತು ದಿನಗಳಲ್ಲವೇ? ಸಮಸ್ತ ದೇವತಾಗಣ ಈ ಶುಭಮುಹೂರ್ತಕ್ಕಾಗಿ ಎದುರು ನೋಡುತ್ತಿದೆ' ಎಂದನು.

ಇವರಿಬ್ಬರೂ ಬಂದ ಸ್ವಲ್ಪ ಸಮಯದಲ್ಲಿ ವಿಘ್ನೇಶ್ವರ, ಕುಮಾರಸ್ವಾಮಿ ಬಂದರು. ವಿಘ್ನೇಶ್ವರನು ಮೂಷಿಕವಾಹನನಾಗಿ ಬರಲು, ಸುಬ್ರಹ್ಮಣ್ಯೇಶ್ವರನು ಶ್ರೀವಲ್ಲಿ, ದೇವಸೇನಯರೊಂದಿಗೆ ನವಿಲು ವಾಹನದ ಮೇಲೆ ಬಂದನು. ಕಾರ್ತಿಕೇಯನು ಬರುವ ಮೊದಲು ಆ ಪ್ರದೇಶದಲ್ಲಿ ತುಂಬಾ ನವಿಲುಗಳು ಗರಿಬಿಚ್ಚಿ ಅಂದವಾಗಿ ನಾಟ್ಯವಾಡಿದವು. ಅಲ್ಲಿರುವವರೆಲ್ಲರೂ ಈ ನವಿಲುಗಳ ನೃತ್ಯ ನೋಡಿ ತುಂಬಾ ಆನಂದಿಸಿದರು. ಆ ಅದ್ಭುತ

ದೃಶ್ಯ ನೋಡಲು ಎರಡು ಕಣ್ಣುಗಳು ಸಾಲದು. ಅದಾದ ಮೇಲೆ ಸ್ವಲ್ಪ ಹೊತ್ತಿನಲ್ಲಿಅಷ್ಟದಿಕ್ಪಾಲಕರು, ನವಗೃಹದೇವತೆಗಳು ಬಂದರು. ಎಲ್ಲರೂ ಅವರವರ ವಸತಿ ಗೃಹದಲ್ಲಿ ಸೇರಿ ವಿಶ್ರಮಿಸಿದರು. ಶ್ರೀನಿವಾಸನನ್ನು ಭೇಟಿಮಾಡಿ 'ಸ್ವಾಮಿ! ಶ್ರೀಮಾನ್ನಾರಾಯಣ! ನಿನ್ನ ವಿವಾಹವು ನಮಗೆ ತುಂಬಾ ಆನಂದವನ್ನು ತರುತ್ತಿದೆ. ಈ ವಿವಾಹಸಮಯದಲ್ಲಿ ನಮ್ಮ ನೃತ್ಯದಿಂದ ಅತಿಥಿಯರೆಲ್ಲರನ್ನು ಸಂತೋಷಪಡಿಸುವ ಭಾಗ್ಯವನ್ನು ನಮಗೆ ಕರುಣಿಸು ಸ್ವಾಮೀ! ಎಂದು ಬೇಡಿಕೊಂಡರು. ಅದಕ್ಕೆ ಶ್ರೀನಿವಾಸನು ಸಂತೋಷದಿಂದ ಒಪ್ಪಿಕೊಂಡು ಅವರಿಗೆಲ್ಲಾ ಅವರವರ ವಸತಿ ಗೃಹಗಳನ್ನು ತೋರಿಸಿದಾಗ ಅವರೆಲ್ಲರೂ ಆ ದಿನ ವಿಶ್ರಮಿಸಿದರು.

ಅಲ್ಲಿ ನಾರಾಯಣಪುರದಲ್ಲಿ ಪದ್ಮಾವತಿಯ ಕಣ್ಣಿಗೆ ನಿದ್ರೆ ಹತ್ತುತ್ತಿಲ್ಲ. ಯಾವಾಗ ಶ್ರೀನಿವಾಸನೊಂದಿಗೆ ವಿವಾಹವಾಗುತ್ತದೋ ಎಂದು ಆತುರತೆಯಿಂದ ಎದುರು ನೋಡುತ್ತಿದ್ದಳು. ಆಕಾಶರಾಜ ದಂಪತಿಗಳ ಆನಂದಕ್ಕೆ ಪಾರವೇ ಇಲ್ಲ. ನಗರವೆಲ್ಲಾ ಅದ್ಭುತವಾಗಿ ಅಲಂಕರಿಸಲ್ಪಟ್ಟಿತು. ಅಂತಃಪುರವನ್ನು ಹೇಳಲೇ ಬೇಕಾಗಿಲ್ಲ.... ಬಹಳ ಸುಮನೋಹರವಾಗಿ ಅನೇಕ ತರಹದ ಪುಷ್ಪಗಳಿಂದ ದಿವ್ಯವಾಗಿ ಅಲಂಕರಿಸಲ್ಪಟ್ಟಿದೆ. ಶೇಷಾಚಲವನ್ನು ಅದ್ಭುತವಾಗಿ ಮಾರ್ಪಡಿಸಿದ ವಿಶ್ವಕರ್ಮ ನಾರಾಯಣಪುರದಲ್ಲಿಯೂ ವಿವಾಹಕ್ಕೆ ಬಂದ ಅತಿಥಿಗಳಿಗಾಗಿ ಅದ್ಭುತವಾದ ವಸತಿಗೃಹಗಳನ್ನು ನಿರ್ಮಿಸಿದನು.

ಇಲ್ಲಿ ಕಲ್ಯಾಣವೇದಿಕೆಯ ವೈಭವವನ್ನು ವರ್ಣಿಸಲು ಸಾವಿರ ನಾಲಗೆಯುಳ್ಳ ಆದಿಶೇಷನಿಗೂ ಸಾಧ್ಯವಾಗದು ಎಂದು ಅನ್ನಿಸುತ್ತದೆ. ಅಷ್ಟು ವಿಶೇಷವಾಗಿ ಅಲಂಕರಿಸಲ್ಪಟ್ಟಿದೆ. ಚೆಂಡು ಹೂ, ಸೇವಂತಿಗೆ, ಜಾಜಿ, ಮಲ್ಲಿಗೆ, ಗುಲಾಬಿ, ಕನಕಾಂಬರ.... ಆಹಾ! ಒಂದೋ ಎರಡೋ! ಅನೇಕ ತರಹದ ಪುಷ್ಪಗಳಿಂದ ಅಲಂಕರಿಸಲ್ಪಟ್ಟಿದೆ. ಆ ವೇದಿಕೆಯನ್ನು ಅಲಂಕರಿಸಿದ ಪುಷ್ಪಗಳ ಪರಿಮಳವು ನಾರಾಯಣಪುರದಲ್ಲಿರುವ ಅತಿಥಿಗಳೆಲ್ಲರ ಮೂಗಿಗೆ ಬಡಿಯುತ್ತಿದೆ. ವಿವಾಹದ ನಂತರ ವಧುವರರು ಕುಳಿತುಕೊಳ್ಳಲು ಎರಡು ಅದ್ಭುತವಾದ ಸಿಂಹಾಸನಗಳನ್ನು ವ್ಯವಸ್ಥೆ ಮಾಡಲಾಯಿತು. ಆ ಸಿಂಹಾಸನವು ನೀಲ, ಗೋಮೇಧಕ, ಮಕರತ, ಮಾಣಿಕ್ಯ, ಪುಷ್ಯರಾಗ ಮತ್ತು ಅನೇಕ ದಿವ್ಯ ರತ್ನಗಳಿಂದ ಮಾಡಲ್ಪಟ್ಟಿತ್ತು. ಒಂದೊಂದು ಸಿಂಹಾಸನವು ಕನಿಷ್ಠ ಐದು ಮನುಷ್ಯರಿಲ್ಲದೆ ಕದಲಿಸಲಾಗದು. ಸಿಂಹಾಸನವೆರಡೂ ಪೂರ್ತಿಯಾಗಿ ಬಂಗಾರದಿಂದ ಮಾಡಲ್ಪಟ್ಟಿತ್ತು. ವಿಶ್ವಕರ್ಮ ಇವುಗಳನ್ನು ಬಹಳ ಅದ್ಭುತ ನೈಪುಣ್ಯತೆಯಿಂದ ನಿರ್ಮಿಸಿದ್ದನು.

ಇಷ್ಟರಲ್ಲಿ ಪದ್ಮಾವತಿಯನ್ನು ಮದುಮಗಳಾಗಿ ಮಾಡುವ ದಿನ ಬಂದೇ ಬಿಟ್ಟಿತು. ಹಿಂದಿನದಿನ ಸಾಯಂಕಾಲವೇ ಸರಸ್ವತಿ, ಪಾರ್ವತಿ ದೇವಿಯರು ನಾರಾಯಣಪುರಕ್ಕೆ ಬಂದು ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು. ಮುಂಜಾನೆ ಬೇಗನೇ ಅಂತಃಪುರಕ್ಕೆ ಬಂದು ಪದ್ಮಾವತಿಯನ್ನು ಮದುಮಗಳನ್ನಾಗಿ ಮಾಡುವ ಕಾರ್ಯಕ್ರಮವನ್ನು ಆರಂಭಿಸಿದರು. ಅಂತಃಪುರದಲ್ಲಿ ಮಂಗಳವಾದ್ಯಗಳು ಮೊಳಗಿದವು. ನಾದಸ್ವರ ಕಿವಿಗೆ ಇಂಪಾಗಿ ಕೇಳಿಸುತ್ತಿದೆ. ಸುಮಂಗಳಿಯರು ಲಕ್ಷ್ಮೀಕಲ್ಯಾಣ, ಗೌರಿ ಕಲ್ಯಾಣ ಕೀರ್ತನೆಗಳನ್ನು ಹಾಡುತ್ತಿರಲು ಗೌರಿದೇವಿ ಪದ್ಮಾವತಿಗೆ ಮಂಗಳ ಸ್ನಾನ ಮಾಡಿಸಿದಳು. ಆಮೇಲೆ ಸರಸ್ವತಿಯಿಂದ ಕೂಡಿಕೊಂಡು ಗೌರಿದೇವಿ ಪದ್ಮಾವತಿಗೆ ರೇಷ್ಮೆಸೀರೆ, ರವಕೆಯನ್ನು ಉಡಿಸಿದಳು ಮತ್ತು ಕೇಶಾಲಂಕಾರ, ವಿವಿಧ ಅಲಂಕಾರಗಳನ್ನು ಮಾಡಿದರು.

ಸರಸ್ವತಿಯು ಪದ್ಮಾವತಿಯೊಡನೆ 'ನಮ್ಮ ಶ್ರೀನಿವಾಸ ಎಂತಹಾ ಅದೃಷ್ಟವಂತನಮ್ಮಾ! ಇಂತಹ ಚೆಂದದ ಗೊಂಬೆಯನ್ನು ಭಾರ್ಯೆಯಾಗಿ ಪಡೆಯುತ್ತಿದ್ದಾನೆ. ಈ ಸೃಷ್ಟಿಯಲ್ಲಿ ಸಕಲ ಐಶ್ವರ್ಯಕ್ಕೆ ನಿಲಯಳಾದ ನಿನ್ನನ್ನು ವಿವಾಹವಾಗುವ ಅದೃಷ್ಟವಂತ ನಮ್ಮ ಶ್ರೀನಿವಾಸ. ಓ ಮಹಾಲಕ್ಷ್ಮೀ! ಪದ್ಮಾವತಿ! ನೀನು ಸಕಲ ಗುಣಸಂಪನ್ನಳು. ಶ್ರೀ ಲಕ್ಷ್ಮೀನಾರಾಯಣರು ಜೀವರಾಶಿಗೆಲ್ಲಾ ಆದರ್ಶಪ್ರಾಯರು. ನಿನ್ನನ್ನು ಮದುಮಗಳಾಗಿ ಅಲಂಕರಿಸುವ ಭಾಗ್ಯ ಸಿಕ್ಕಿದ್ದಕ್ಕೆ ನಾವೆಷ್ಟೋ ಸಂತೋಷಪಡುತ್ತೇವೆ. ನೋಡಿಲ್ಲಿ! ಈ ಆಭರಣಗಳನ್ನು ನೋಡು! ನಿನ್ನ ಕೇಶವನ್ನು ಅಲಂಕರಿಸಲು ಎಷ್ಟು ಕಷ್ಟ ಪಡುತ್ತಿವೆ. ನಿನ್ನ ಕೇಶವನ್ನು ಅಲಂಕರಿಸುವಾಗ ಈ ಗುಲಾಬಿ ಪುಷ್ಪಗಳ ಅಂದ ಮತ್ತಷ್ಟು ಹೆಚ್ಚುತ್ತಿದೆ ಎಂದು ಅವು ತಿಳಿಯುತ್ತಿವೆ. ಒಂದು ಕ್ಷಣವಾದರೂ ನಿನ್ನ ಕೇಶದಲ್ಲಿರಬೇಕೆಂದು ಈ ಮಲ್ಲಿಗೆ ಎಷ್ಟು ಆತುರಪಡುತ್ತಿದೆ. ಆ ಜಾಜಿಯನ್ನು ನೋಡಮ್ಮಾ ಮಹಾಲಕ್ಷ್ಮೀ! ನೀನು ಎಲ್ಲಿ ಮುಡಿದುಕೊಳ್ಳುವುದಿಲ್ಲವೋ ಎಂದು ಮುದುಡುತ್ತಿವೆ.... ಆಹಾ! ಈ ಪುಷ್ಪಗಳು ಎಂತಹಾ ಆತುರತೆಯಿಂದ ಇವೆ! ಓ ಸಮುದ್ರರಾಜನ ಮಗಳೇ! ನಿನ್ನನ್ನು ಮದುಮಗಳಾಗಿ ಅಲಂಕರಿಸುತ್ತಿದ್ದಾಗ ನಮಗೆ ಎಷ್ಟು ಸಂತೋಷವಾಗುತ್ತಿದೆ ಗೊತ್ತಾ' ಎಂದು ಹೇಳಿದರು.

ಅದಾದ ಮೇಲೆ ಪದ್ಮಾವತಿ ತಾಯಿತಂದೆಯರಾದ ಆಕಾಶರಾಜ, ಧರಣೀದೇವಿ ದಂಪತಿಗಳಿಗೆ ನಮಸ್ಕಾರ ಮಾಡಿದಳು. ಶ್ರೀನಿವಾಸನ ಭಾವಚಿತ್ರಕ್ಕೂ ನಮಸ್ಕಾರ ಮಾಡಿಸಿದರು. ಬ್ರಹ್ಮ, ಪರಮೇಶ್ವರರಿಗೆ ಅಲ್ಲಿಯ ವಿಶೇಷವನ್ನು ತಿಳಿಸಿದರು. ಅದನ್ನು ತಿಳಿದ ಅವರೆಲ್ಲರೂ ಬಹಳ ಸಂತೋಷಪಟ್ಟರು. ಅವರೆಲ್ಲರೂ ಶ್ರೀನಿವಾಸನಲ್ಲಿ 'ಓ ಶ್ರೀನಿವಾಸ! ನಿನ್ನ ಪದ್ಮಾವತಿ ಎಷ್ಟು ಸುಂದರವಾಗಿ ಇದ್ದಾಳಯ್ಯಾ! ದೇವತಾ ಸ್ತ್ರೀಯರಾದ ನಮಗೇ ಈರ್ಶೆ ಬರುವಂತಹ ಅದ್ಭುತ ಸೌಂದರ್ಯರಾಶಿಯಾಗಿ ವಿಜೃಂಭಿಸುತ್ತಿದ್ದಾಳೆ! ಈ ಸೃಷ್ಟಿಯ ಸೌಂದರ್ಯವೆಲ್ಲಾ ಅವಳದೇ! ನಿಮ್ಮಿಬ್ಬರ ದಾಂಪತ್ಯ ಈ ಲೋಕಕ್ಕೇ ಆದರ್ಶಪ್ರಾಯವಾಗಿದೆ. ಕಣ್ಣಿಗೆ ಆನಂದಕೊಡುವ ಎಂತಹ ದಾಂಪತ್ಯ ನಿಮ್ಮದು! ಯಾವಾಗ ನೀವಿಬ್ಬರೂ ಕಲ್ಯಾಣಮಂಟಪದಲ್ಲಿ ಒಬ್ಬರ ಪಕ್ಕದಲ್ಲಿ ಒಬ್ಬರು ಇರುವುದನ್ನು ನೋಡುತ್ತೇವೋ ಎಂದು ನಾವೆಲ್ಲಾ ಕಾಯುತ್ತಿದ್ದೇವೆ. ಈ ಭೂಲೋಕವಾಸಿಗಳು ಎಷ್ಟು ಅದೃಷ್ಟವಂತರೋ! ದೇವತೆಗಳಿಗೂ ಅಸಾಧ್ಯವಾದ ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣದಲ್ಲಿ ಭಾಗವಹಿಸುವ ಅದೃಷ್ಟವನ್ನು ಪಡೆದಿದ್ದಾರೆ. ಇಡೀ ಬ್ರಹ್ಮಾಂಡವೇ ನಿಮ್ಮ ಕಲ್ಯಾಣಗಳಿಗೆಯನ್ನು ಎದುರು ನೋಡುತ್ತಿದೆ. ಕೋಗಿಲೆ ಗಂಟಲೆತ್ತಿ ಮಂಗಳ ಗೀತೆ ಹಾಡುತ್ತಿದೆ. ಜಿಂಕೆಗಳು ಚೆಂಗನೆ ಜಿಗಿಯುತ್ತಾ ಶೇಷಾಚಲದಲ್ಲೆಲ್ಲಾ ತಿರುಗುತ್ತಿವೆ. ನವಿಲುಗಳು ಗರಿಬಿಚ್ಚಿ ಅದ್ಭುತವಾಗಿ ನಾಟ್ಯ ಮಾಡುತ್ತಿವೆ. ಬಣ್ಣ ಬಣ್ಣದ ಗಿಳಿಗಳು ಮರಗಳ ಮೇಲೆ ಇದ್ದು ಕಲ್ಯಾಣವಿಶೇಷಗಳನ್ನು ಆನಂದಿಸುತ್ತಿವೆ. ಮೊಲಗಳು ಬಹಳ ಮುದ್ದಾಗಿ ಪೊದೆಗಳ ಹಿಂದೆ ಆಡಿಕೊಳ್ಳುತ್ತಿವೆ. ಇಲ್ಲಿ ಸರೋವರದಲ್ಲಿರುವ ತಾವರೆಗಳು ಯಾವಾಗ ಆ ಶುಭಮುಹೂರ್ತ ಬರುತ್ತದೋ, ಯಾವಾಗ ನಮ್ಮನ್ನು ಮಂಟಪದಲ್ಲಿ ಅಲಂಕರಿಸಲು ಉಪಯೋಗಿಸುತ್ತಾರೋ ಎಂದು ಆತುರತೆಯಿಂದ ಎದುರು ನೋಡುತ್ತಿವೆ. ಬಣ್ಣ ಬಣ್ಣದ ಗುಲಾಬಿಗಳು ಅವರಲ್ಲಿ ಯಾರು ಮಹಾಲಕ್ಷ್ಮೀಯ ತಲೆಯನ್ನು ಅಲಂಕರಿಸುವ ಭಾಗ್ಯವನ್ನು ಪಡೆಯುತ್ತೇವೋ ಎಂದು ಎದುರು ನೋಡುತ್ತಿವೆ. ಕನಕಾಂಬರ ಕಲ್ಯಾಣಮಂಟಪದ ಸುತ್ತಲೂ ಆಡುತ್ತಿವೆ. ನಿಮ್ಮ ಲಕ್ಷ್ಮೀ ನಾರಾಯಣರ ಕಲ್ಯಾಣ ಈ ಸೃಷ್ಟಿಗೆಲ್ಲಾ ಕಲ್ಯಾಣ. ಈ ಸೃಷ್ಟಿಯೆಲ್ಲಾ ಹೊಸ ಶೋಭೆಯಿಂದ ಆನಂದದಿಂದ ಆ ಶುಭಮುಹೂರ್ತಕ್ಕೆ ಎದುರು ನೋಡುತ್ತಿದೆ. ಓ ಶ್ರೀನಿವಾಸ! ಓ ಶ್ರೀಮಾನ್ನಾರಾಯಣ! ಓ ಜಗನ್ನಾಥ! ದೇವಲೋಕದಿಂದ ಬಂದ ನಾವೆಲ್ಲರೂ

ಕೂಡಾ ನಿದ್ದೆ ಬಿಟ್ಟು ಆ ಶುಭಮುಹೂರ್ತವನ್ನು ಎದುರು ನೋಡುತ್ತಿದ್ದೇವೆ' ಎಂದು ಹೇಳಿದರು.

ಈ ಮಾತನ್ನು ಕೇಳಿದ ಶ್ರೀನಿವಾಸನು 'ಅಮ್ಮಾ! ಸರಸ್ವತಿ ದೇವಿ! ಗೌರಿಮಾತಾ! ನನ್ನ ಮೇಲೆ ನಿಮಗಿದ್ದ ಅನುರಾಗ, ವಿಶ್ವಾಸಕ್ಕೆ ತುಂಬಾ ಸಂತೋಷ. ಶ್ರೀ ಪದ್ಮಾವತಿಯನ್ನು ಜೊತೆಗಿದ್ದು ಮದುಮಗಳಾಗಿ ಅಲಂಕರಿಸಿದ್ದಕ್ಕೆ ನನಗೆ ತುಂಬಾ ಸಂತೋಷ. ಸಾಕ್ಷಾತ್ ನೀವು ಬಂದು ಪದ್ಮಾವತಿಯನ್ನು ಮದುಮಗಳಾಗಿ ಅನೇಕ ವಿಧದ ಆಭರಣಗಳಿಂದ ಅಲಂಕರಿಸಿರುವುದು ನನಗೂ, ನಮ್ಮ ಶೇಷಾಚಲವಾಸಿಗಳಿಗೆ ತುಂಬಾ ಸಂತೋಷ, ಅತ್ಯಾನಂದಕರ. ವಿವಾಹದ ದಿನವೂ ನೀವಿಬ್ಬರೂ ಕಲ್ಯಾಣವೇದಿಕೆಯ ಮೇಲೆ ಇದ್ದು ವಿವಾಹ ಕಾರ್ಯಕ್ರಮವನ್ನೆಲ್ಲಾ ಚತುರ್ಮುಖ, ಪರಮೇಶ್ವರರೊಂದಿಗೆ ಕೂಡಿಕೊಂಡು ನಡೆಸಿಕೊಡಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ. ವಿವಾಹಕ್ಕೆ ಬಂದ ಸ್ತ್ರೀಯರೆಲ್ಲರಿಗೂ ಬೇಕಾದ ಸಮಸ್ತವನ್ನೂ ನೀವು ಹತ್ತಿರದಲ್ಲಿದ್ದು ನೋಡಿಕೊಳ್ಳಬೇಕು' ಎಂದು ಹೇಳಿದನು. ಆಗ ಆ ತಾಯಂದಿರು ಬಹಳ ಸಂತೋಷಪಟ್ಟು ಪದ್ಮಾವತಿಯ ಜೊತೆಗಿದ್ದು ಎಲ್ಲಾ ಶಾಸ್ತ್ರಕ್ರಮಗಳನ್ನು ಮಾಡಿಸುತ್ತೇವೆ, ಪದ್ಮಾವತಿ ಶ್ರೀನಿವಾಸರ ವಿವಾಹ ನಡೆಯುವಷ್ಟು ಕಾಲ ಕಲ್ಯಾಣವೇದಿಕೆಯ ಮೇಲೆಯೇ ಇರುತ್ತೇವೆ ಎಂದು ಹೇಳಿದರು.

ಇದಾದ ಮೇಲೆ ಇವರಿಬ್ಬರೂ ಸೇರಿ ಶೇಷಾಚಲದಲ್ಲಿರುವ ವಸತಿಗೃಹಗಳಿಗೆ ಹೋಗಿ ಶಚೀದೇವಿ, ದೇವಲೋಕದ ಅಪ್ಸರೆಯರಾದ ಊರ್ವಶಿ, ಮೇನಕ, ತ್ರಿಲೋತ್ತಮೆಯರನ್ನೂ ಅಹಲ್ಯ, ಅರುಂಧತಿ ಮೊದಲಾದ ಮುನಿಪತ್ನಿಯರನ್ನೂ, ಕುಮಾರಸ್ವಾಮಿಯ ಪತ್ನಿಯರಾದ ಶ್ರೀವಲ್ಲೀ, ದೇವಸೇನಯರನ್ನೂ ಮತ್ತು ಅನೇಕ ಮಂದಿಯನ್ನು ಕುಶಲ ಪ್ರಶ್ನೆ ಮಾಡಿ ಅವರಿಗೆ ಬೇಕಾದ ಎಲ್ಲವೂ ಸರಿಯಾಗಿದೆಯೇ ಎಂದು ತಿಳಿದುಕೊಂಡರು. ಸಾಕ್ಷಾತ್ ಜಗನ್ಮಾತೆಯರು ಈ ವಿಧವಾಗಿ ಬರುವುದನ್ನು ನೋಡಿ ಇವರೆಲ್ಲರೂ ಬಹಳ ಆನಂದಪಟ್ಟು, ಸೌಕರ್ಯಗಳೆಲ್ಲಾ ಅದ್ಭುತವಾಗಿ ಇದೆ ಎಂದರು. ಆಮೇಲೆ ಸರಸ್ವತಿ, ಗೌರಿದೇವಿಯರಿಬ್ಬರೂ ತಮ್ಮ ತಮ್ಮ ವಸತಿಗೃಹಗಳಿಗೆ ಸೇರಿಕೊಂಡರು.

ಶೇಷಾಚಲವೆಲ್ಲಾ ದಿವ್ಯವಾಗಿ ಬೆಳಗುತ್ತಿದೆ. ಸಮಸ್ತದೇವತಾಗಣ ಇಲ್ಲಿರುವುದರಿಂದ ದಿವ್ಯತೇಜಸ್ಸಿನಿಂದ ಪ್ರಕಾಶಿಸುತ್ತಿದೆ. ಪ್ರತಿದಿನ ಸಾಯಂಕಾಲ ದೇವಕನ್ಯೆಯರು ಅದ್ಭುತ ನಾಟ್ಯದಿಂದ ಅತಿಥಿಯರನ್ನು ಸಂತೋಷಪಡಿಸುತ್ತಿದ್ದಾರೆ. ಅಗ್ನಿದೇವನು ಬಂದವರಿಗೆಲ್ಲಾ ಬೇಕಾದ ಆಹಾರದ ಏರ್ಪಾಡನ್ನು ನೋಡಿಕೊಂಡನು. ಪ್ರತಿ ಸಮಯ ಅತಿಥಿಗಳಿಗೆ ವಿಧವಿಧವಾದ ಅಡುಗೆಯನ್ನು ಬಡಿಸಿದರು. ಪ್ರತಿ ಹೊತ್ತು ಹೊಸ ಹೊಸ ಅಡುಗೆ ಅತಿಥಿಯರನ್ನು ತೃಪ್ತಿಗೊಳಿಸಿತು. ಮಹಾ ಲಕ್ಷ್ಮೀ ದೇವಿಯ ಸಹೋದರನಾದ ಚಂದ್ರನು ಪ್ರತಿ ರಾತ್ರಿ ತಂಪಾದ ಬೆಳದಿಂಗಳನ್ನು ಬೆಳಗಿದನು. ಸೂರ್ಯಭಗವಾನನು ಹಗಲುಹೊತ್ತು ಬಹಳ ತೀಕ್ಷ್ಣವಲ್ಲದ ಅತಿಥಿಗಳಿಗೆ ಆಹ್ಲಾದಕರವಾದ ವಾತಾವರಣ ಇರುವಂತೆ ನೋಡಿಕೊಂಡನು. ವರುಣನು ಸಾಯಂಕಾಲ ಮಳೆಯ ಹನಿಗಳನ್ನು ಉದಿರಿಸಿ ಆಹ್ಲಾದವನ್ನಿತ್ತನು. ವಾಯುದೇವನು ಶುಭ್ರವಾದ, ತಂಪಾದ ಗಾಳಿಯನ್ನು ಬೀಸುತ್ತಾ ಅತಿಥಿಗಳನ್ನು ಒಳ್ಳೆಯ ಅನುಭವದಲ್ಲಿ ತೇಲಿಸುತ್ತಿದ್ದಾನೆ. ವಿವಾಹದ ವ್ಯವಸ್ಥೆ ಘನವಾಗಿ, ಅತಿಥಿಗಳಿಗೆ ಎಂದೂ ಮರೆತುಹೋಗದಂತೆ ಇವೆ.

ಇನ್ನು ನಾಳೆಯೇ ವೈಶಾಖ ಶುದ್ಧ ಪೌರ್ಣಮಿ. ಹಿಂದಿನ ದಿನ ಸಾಯಂಕಾಲ ವರನ ಮನೆಯವರೆಲ್ಲರೂ ನಾರಾಯಣಪುರಕ್ಕೆ ಹೊರಡಲನುವಾದರು. ಅತಿಥಿಗಳೆಲ್ಲರೂ ಅದ್ಭುತವಾದ ವಸ್ತ್ರ, ಅಲಂಕಾರಗಳಿಂದ ತಯಾರಾದರು. ಮುಂದೆ ಚತುರ್ಮುಖ ಬ್ರಹ್ಮ, ಸರಸ್ವತಿ ಹೊರಟರು. ಹಿಂದೆಯೇ ಪಾರ್ವತಿ, ಪರಮೇಶ್ವರರು ಇದ್ದಾರೆ. ಆಮೇಲೆ ವಿಘ್ನೇಶ್ವರ, ಕುಮಾರಸ್ವಾಮಿ ಬರಲು ಅವರ ಹಿಂದೆ ಮದುಮಗನಾದ ಶ್ರೀನಿವಾಸನು ದಿವ್ಯ ಅಲಂಕಾರಗಳಿಂದ ಶೋಭಿಸುತ್ತಾ, ರೇಷ್ಮೆ ಪೀತಾಂಬರವನ್ನು ಧರಿಸಿ ಗರುಡನ ಮೇಲೆ ಹೊರಟನು. ಆಮೇಲೆ ಅಷ್ಟದಿಕ್ಪಾಲಕರು, ನವಗ್ರಹದೇವತೆಗಳು, ಸಮಸ್ತ ದೇವತಾಗಣ, ಸಮಸ್ತ ಮುನಿಗಣ, ಯಕ್ಷ, ಕಿನ್ನರ, ಕಿಂಪುರುಷ ಗಣಗಳು ಹೊರಟರು. ಮಂಗಳ ವಾದ್ಯಗಳಿಂದ ಕೂಡಿಕೊಂಡು ವರನ ಮನೆಯವರು ನಾರಾಯಣಪುರವನ್ನು ಸೇರಿದರು.

ಮೊದಲೇ ಈ ವಿಷಯವನ್ನು ತಿಳಿದ ಆಕಾಶರಾಜನು ನಗರದ ಹೊರಗೆ ಮಂಗಳ ವಾದ್ಯಗಳಿಂದ ಕೂಡಿಕೊಂಡು ಕಸ್ತೂರಿ, ಸುಗಂಧ ದ್ರವ್ಯಗಳು, ಬಗೆಬಗೆಯ ಪುಷ್ಪಮಾಲೆಗಳಿಂದ ಕೂಡಿಕೊಂಡು ಇದ್ದಾನೆ. ಧರಣೀದೇವಿಯು ಅಳಿಯನಿಗೆ ಆರತಿ ಎತ್ತಲು ಅಂತಃಪುರ ಕಾಂತೆಯರೊಂದಿಗೆ ಎದುರು ನೋಡುತ್ತಿದ್ದಾಳೆ. ಸುಮಂಗಳಿಯರು ದಿವ್ಯ ಕೀರ್ತನೆಯನ್ನು ಹಾಡುತ್ತಿದ್ದಾರೆ. ಮೊದಲಿಗೆ ಬಂದ ಬ್ರಹ್ಮ, ಸರಸ್ವತಿಯರನ್ನು ನೋಡಿ ಆಕಾಶರಾಜ ದಂಪತಿಯರು ನಮಸ್ಕಾರ ಮಾಡಿ ‘ಓ ಬ್ರಹ್ಮದೇವ! ಶ್ರೀನಿವಾಸನ ದಯೆಯಿಂದ ನಿಮ್ಮೆಲ್ಲರನ್ನು ಕಣ್ಣಾರೆ ಕಾಣುವ ಭಾಗ್ಯ ನನಗೆ ಸಿಕ್ಕಿದೆ. ನನ್ನ ಕುಮಾರಿ ಪದ್ಮಾವತಿ ಶ್ರೀನಿವಾಸನನ್ನು ಬಯಸುವುದು, ಅದಕ್ಕೆ ಆ ಸ್ವಾಮಿಯು ಒಪ್ಪಿಕೊಳ್ಳುವುದು ನನ್ನ ಭಾಗ್ಯ. ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣವಾದುದರಿಂದ ಸಾಕ್ಷಾತ್ ಸೃಷ್ಟಿಕರ್ತನಾದ ನೀನೇ ಹೊರಟುಬಂದಿದ್ದೀಯ’ ಎಂದು ಹೇಳಿದನು.

ಹೀಗೆ ಹೇಳುತ್ತಿರುವಾಗಲೇ ಹಿಂದೆಯೇ ಇದ್ದ ಪಾರ್ವತಿ, ಪರಮೇಶ್ವರರು ಕಾಣಿಸಿಕೊಂಡರು. ಆಹಾ! ಪರಮೇಶ್ವರ! ಜಗನ್ನಾಥ! ಆದಿ ದಂಪತಿಗಳಿರಾ! ಪಾರ್ವತಿ, ಪರಮೇಶ್ವರರೇ! ನನ್ನ ಜನ್ಮ ಧನ್ಯ. ನೀವು ನಮ್ಮ ನಗರಕ್ಕೆ ನನ್ನ ಅತಿಥಿಯಾಗಿ ಬರುವುದು ನಾನು ಎಷ್ಟೋ ಕೋಟಿ ಜನ್ಮದಲ್ಲಿ ಮಾಡಿದ ಪುಣ್ಯಫಲವಲ್ಲದೆ ಬೇರೇನಲ್ಲ. ಇಲ್ಲದಿದ್ದರೆ ಸಾಮಾನ್ಯನಾದ ನಾನೆಲ್ಲಿ ಈ ಸೃಷ್ಟಿಸ್ಥಿತಿ ಲಯಕಾರಕರಾದ ನೀವೆಲ್ಲಿ! ಆಹಾ! ಈ ಜನ್ಮದ ಭಾಗ್ಯ ಸಾಕು!’ ಎಂದನು. ಆಗ ಪರಮೇಶ್ವರನು ‘ಓ ಆಕಾಶರಾಜ! ಇದೆಲ್ಲಾ ನಮ್ಮ ಶ್ರೀನಿವಾಸನ ಲೀಲೆ. ತ್ರಿಮೂರ್ತಿಗಳಾದ ನಮ್ಮಲ್ಲಿ ಒಬ್ಬನಾದ ಶ್ರೀಮಾನ್ನಾರಾಯಣನ ವಿವಾಹ ನಾವು ಹತ್ತಿರವಿಲ್ಲದೆ ನಡೆಯುವುದು ಊಹಿಸಲಾಗಬಹುದೇ! ಶ್ರೀ ಲಕ್ಷ್ಮೀನಾರಾಯಣರ ವಿವಾಹವನ್ನು ಹತ್ತಿರವಿದ್ದು ನೊಡಬೇಕೆಂದು ನಾವು, ಹಾಗೂ ನಮ್ಮೊಟ್ಟಿಗೆ ಸರಸ್ವತಿ, ಗೌರಿ ಬಹಳ ಕಾತುರತೆಯಿಂದ ಎದುರು ನೋಡುತ್ತಿದ್ದಾರೆ’ ಎಂದು ಹೇಳಿದನು.

ಇವರು ಹೀಗೆ ಮಾತನಾಡುತ್ತಿರಲು ಹಿಂದೆಯೇ ದೇವತೆಗಳೆಲ್ಲರೂ ಬಂದರು. ಇನ್ನು ಮದುಮಗನಾದ ಶ್ರೀನಿವಾಸನು ಬರುವುದನ್ನು ಎದುರು ನೋಡುತ್ತಿದ್ದಾರೆ. ಹೀಗೆ ಆಕಾಶರಾಜ ಸ್ವಲ್ಪದೂರದಲ್ಲಿ ದೇವದುಂದುಭಿ ಮೊಳಗಿದ್ದನ್ನು ಕೇಳಿಸಿಕೊಂಡನು. ಮಂಗಳವಾದ್ಯ ಅದ್ಭುತವಾಗಿ ಕಿವಿಗಳಿಗೆ ಕೇಳಿಸುತ್ತಿತ್ತು. ಒಮ್ಮೆಲೇ ವಾತಾವರಣ ತುಂಬಾ ಚೆನ್ನಾಗಿ, ಆಹ್ಲಾದಕರವಾಗಿ ಬದಲಾಯಿತು. ಎಲ್ಲಿಂದೋ ಅದ್ಭುತವಾದ ಸುಗಂಧದ ಪರಿಮಳ ಬರುತ್ತಿದೆ. ನವಿಲುಗಳ ಗುಂಪು ನಾಟ್ಯವಾಡುತ್ತಿದೆ. ಹಿಂದೆಯೇ ಮೊಲಗಳು ಅಂದವಾಗಿ ಜಿಗಿಯುತ್ತಿವೆ. ಈಗ

ಬರುತ್ತಿರುವುದು ಶ್ರೀನಿವಾಸನೆ! ಅನುಮಾನವಿಲ್ಲ! ಸಾಕ್ಷಾತ್ ಶ್ರೀಮಾನ್ನಾರಾಯಣನೇ ಮದುಮಗನಾಗಿ ಬರುತ್ತಿದ್ದಾನೆ! ಆಹಾ! ಅಲ್ಲಿರುವವರೆಲ್ಲರೂ ತುಂಬಾ ಅದೃಷ್ಟವಂತರಲ್ಲವೇ! ಆಕಾಶರಾಜ ಬಹಳ ಆನಂದದಿಂದ ಮಾತುಹೊರಡಲಾರದೆ ಸ್ತಬ್ಧನಾದನು.

ಇಷ್ಟರಲ್ಲಿ ಶ್ರೀನಿವಾಸನು ಎದುರಿಗೆ ಬಂದನು. ಆ ಸ್ವಾಮಿಯ ದಿವ್ಯಮಂಗಳ ರೂಪವನ್ನು ನೋಡಿದ ಆಕಾಶರಾಜ, ಧರಣೀದೇವಿ ದಂಪತಿಗಳ ಆನಂದಕ್ಕೆ ಪಾರವೇ ಇಲ್ಲ. 'ಓ ಶ್ರೀನಿವಾಸ! ಶ್ರೀಮಾನ್ನಾರಾಯಣ! ಯಾರ ದರ್ಶನಕ್ಕಾಗಿ ಸಮಸ್ತ ಮುನಿಗಣ ಬಹಳ ಸಂವತ್ಸರಗಳ ಕಾಲ ತಪಸ್ಸು ಮಾಡುತ್ತಿದ್ದಾರೋ, ಯಾರ ಅನುಗ್ರಹಕ್ಕೋಸ್ಕರ ಸಮಸ್ತ ದೇವತಾಗಣ ಎಲ್ಲಾ ಕಾಲದಲ್ಲಿಯೂ ಎದುರು ನೋಡುತ್ತಿದೆಯೋ, ಯಾರ ತೇಜಸ್ಸು ಕೋಟಿಸೂರ್ಯರಿಗಿಂತ ಕೂಡಾ ಮಿಗಿಲಾದದ್ದೋ, ಯಾರು ಈ ಸೃಷ್ಟಿಯಲ್ಲಿರುವ ಜೀವರಾಶಿಗಳ ಹೃದಯದಲ್ಲಿ ಅಂತರ್ಯಾಮಿಯಾಗಿ ಇರುವನೋ, ಅಂತಹ ನಿನ್ನ ದರ್ಶನ ದೊರಕುವುದೂ, ಸಾಕ್ಷಾತ್ ನಿನ್ನನ್ನು ನನ್ನ ಅಳಿಯನಾಗಿ ಪಡೆಯುವುದು ಎಂತಹ ಭಾಗ್ಯ! ನೀವು ನಮ್ಮ ನಾರಾಯಣಪುರದಲ್ಲಿ ಕಾಲಿಡುವುದರಿಂದ ನಮ್ಮ ರಾಜ್ಯ ಹಾಗೂ ಪ್ರಜೆಗಳೆಲ್ಲರೂ ಪುನೀತರಾಗಿದ್ದಾರೆ. ಎಲ್ಲರ ಜನ್ಮ ಧನ್ಯವಾಯಿತು. ಓ ಶ್ರೀನಿವಾಸ! ಶ್ರೀಮಾನ್ನಾರಾಯಣ! ನಮ್ಮ ಕುಮಾರಿ ಹಾಗೂ ನಮ್ಮನ್ನು ಧನ್ಯರನ್ನಾಗಿ ಮಾಡೆಂದು ಪ್ರಾರ್ಥಿಸುತ್ತೇವೆ. ನಮ್ಮ ಆತಿಥ್ಯವನ್ನು ಸ್ವೀಕರಿಸಿ, ನಮ್ಮ ಅತಿಥಿ ಮರ್ಯಾದೆಯಲ್ಲಿ ಏನಾದರೂ ಕೊರೆಯಿದ್ದರೆ ಕ್ಷಮಿಸಿಬೇಕು ಎಂದು ಕೇಳಿಕೊಳ್ಳುತ್ತೇನೆ' ಎಂದು ಹೇಳಿದನು.

ಆಗ ಶ್ರೀನಿವಾಸನು ಮುಗುಳುನಗುತ್ತಾ 'ಓ ಆಕಾಶರಾಜ! ನಿನ್ನ ಕಮಾರಿ ಪದ್ಮಾವತಿಯನ್ನು ಭಾರ್ಯೆಯಾಗಿ ಪಡೆಯಲು ನನಗೆ ಬಹಳ ಸಂತೋಷ. ಮದುವೆಯ ವ್ಯವಸ್ಥೆಯ ಬಗ್ಗೆ ನೀನು ಚಿಂತಿಸಬೇಡ. ವಿವಾಹವು ಬಹಳ ವೈಭವದಿಂದ ನಡೆಯುತ್ತದೆ. ಸಮಸ್ತ ದೇವತಾಗಣವೂ ಇಲ್ಲಿಯೇ ಇರಲು ನಿನಗೇಕೆ ಚಿಂತೆ?' ಎಂದು ಹೇಳಿದನು. ಆಗ ಧರಣೀದೇವಿಯು ಮದುಮಗನಿಗೆ ಮಂಗಳಾರತಿ ಮಾಡಿದಳು. ಸುಮಂಗಳಿಯರು ಸುಮಧುರಧ್ವನಿಯಿಂದ ಹಾಡುತ್ತಿರಲು ಅವರೊಂದಿಗೆ ಸರಸ್ವತಿ, ಗೌರಿದೇವಿಯರು ಕೂಡಾ ಕಂಠಸೇರಿಸಿ ಹಾಡುತ್ತಿರಲು ಎಲ್ಲರೂ ತಮ್ಮ ಜನ್ಮ ಧನ್ಯವಾಯಿತೆಂದು ಸಂತೋಷಪಟ್ಟರು. ಅದಾದಮೇಲೆ ಆಕಾಶರಾಜ ಶ್ರೀನಿವಾಸನನ್ನು ಅವನ ಮಂದಿರಕ್ಕೆ ಕರೆತಂದನು. ದೇವತೆಗಳೆಲ್ಲರೂ ಅವರವರ ಗೃಹಗಳಿಗೆ ಹೋದರು.

ಆ ದಿನ ರಾತ್ರಿ ಅತಿಥಿಗಳೆಲ್ಲರಿಗೆ ಷಡ್ರಸಾನ್ನ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಬಗೆಬಗೆಯ ತರಕಾರಿಗಳಿಂದ ಅನೇಕ ಬಗೆಯ ರುಚಿಯಾದ ಅಡುಗೆ ಮಾಡಲಾಗಿತ್ತು. ಆಕಾಶರಾಜ ಹತ್ತಿರದಲ್ಲಿದ್ದು ಅಡುಗೆಯ ವ್ಯವಸ್ಥೆಯನ್ನು ನೋಡಿಕೊಂಡನು. ದೇವತೆಗಳೆಲ್ಲರೂ ಭೋಜನಶಾಲೆಗೆ ಬಂದು ತಂಬಾ ಇಷ್ಟಪಟ್ಟು ಎಲ್ಲಾ ಅಡುಗೆಯ ರುಚಿ ನೋಡಿದರು. ಮದುಮಗನಾದ ಶ್ರೀನಿವಾಸನಿಗೆ ಮಂದಿರಕ್ಕೆ ರಾತ್ರಿ ಊಟ ಕಳುಹಿಸಲಾಯಿತು. ಆಕಾಶರಾಜನು ಬ್ರಹ್ಮ, ಪರಮೇಶ್ವರ, ವಿಘ್ನೇಶ್ವರ, ಕುಮಾರಸ್ವಾಮಿ ಮೊದಲಾದ ದೇವತೆಗಳ ಮನೆಗಳಿಗೆ ಆಹಾರ ಕಳುಹಿಸುವ ವ್ಯವಸ್ಥೆ ಮಾಡಲು, ಅವರೆಲ್ಲರೂ 'ನಾವೆಲ್ಲರೂ ಒಟ್ಟಿಗೆ ಸೇರಿ ಭೋಜನಶಾಲೆಯಾಲ್ಲಿ ಊಟಮಾಡುವುದು ತುಂಬಾ ಸಂತೋಷಕರ' ಎಂದರು. ತಮ್ಮೊಟ್ಟಿಗೆ ಸೇರಿ ಊಟಮಾಡುವ ಬ್ರಹ್ಮ, ಪರಮೇಶ್ವರರನ್ನು ನೋಡಿ ದೇವತೆಗಳೆಲ್ಲರೂ ತುಂಬಾ ಆಶ್ಚರ್ಯಪಟ್ಟರು. ಬಹಳ ಆನಂದಿಸಿದರು. ನಾಳೆ ನಡೆಯಲಿರುವ ಶ್ರೀ ಲಕ್ಷ್ಮೀನಾರಾಯಣರ ವಿವಾಹವನ್ನು ನೆನೆದು ಸಂತೋಷಪಟ್ಟರು. ಚಿರಂಜೀವಿಯರಾದ ಹನುಮಂತ, ಅಶ್ವಥಾಮ,

ಬಲಿ, ಮಾರ್ಕಾಂಡೇಯ, ವ್ಯಾಸರು ವಿವಾಹಕ್ಕೆ ಬಂದು ಭೋಜನದಲ್ಲಿ ಪಾಲ್ಗೊಂಡರು. ಹನುಮಂತನ್ನು ನೋಡಿದ ಪರಮೇಶ್ವರನು ಕುಶಲ ಪ್ರಶ್ನೆ ಮಾಡಿದನು.

ಇಷ್ಟರಲ್ಲಿ ಅಲ್ಲಿಗೆ ವಿಘ್ನೇಶ್ವರ, ಕುಮಾರಸ್ವಾಮಿಯರು ಬಂದರು. ಹನುಮಂತನು ವಿಘ್ನೇಶ್ವರನೊಡನೆ ಕುಶಲ ಪ್ರಶ್ನೆ ಮಾಡಿದನು. ವಿವಾಹ ವಿಶೇಷಗಳ ಬಗ್ಗೆ ಮಾತಾಡಿದನು. ಇಷ್ಟರಲ್ಲಿ ಅಲ್ಲಿಗೆ ಸ್ವಾಮಿಯ ಪ್ರಿಯಭಕ್ತನಾದ ಆದಿಶೇಷನು ಕೂಡಾ ಬಂದನು. ಸ್ವಲ್ಪಹೊತ್ತು ಆದಿಶೇಷ ವಿಘ್ನೇಶ್ವರರು ಕುಶಲ ಪ್ರಶ್ನೆ ಮಾಡಿಕೊಂಡರು. ಹೀಗೆ ಎಲ್ಲಾ ದೇವತೆಗಳೂ ಎಲ್ಲರನ್ನೂ ಒಂದೇ ಸ್ಥಳದಲ್ಲಿ ನೋಡಿ ಎಲ್ಲರೂ ಆನಂದಿಸಿದರು. ಆಕಾಶರಾಜ ಅವರೆಲ್ಲರ ಹತ್ತಿರ ಬಂದು ಭೋಜನವಾಯಿತೇ ಎಂದು ವಿಚಾರಿಸಿದನು. ಧರಣೀದೇವಿಯು ಕೂಡಾ ಸ್ತ್ರೀಯರೆಲ್ಲರಿಗೆ ಹತ್ತಿರದಲ್ಲಿದ್ದು ಊಟ ಬಡಿಸಿದಳು. ಸಮಸ್ತ ದೇವತೆಗಳು, ಸಮಸ್ತ ಯಕ್ಷ, ಕಿನ್ನರ, ಕಿಂಪುರುಷರು, ಸಮಸ್ತ ಮುನಿಗಣಗಳೂ ಒಟ್ಟು ಸೇರಿ ತನ್ನ ನಗರದಲ್ಲಿ ಸಹಪಂಕ್ತಿ ಭೋಜನಮಾಡುವುದು ತನ್ನ ಪೂರ್ವಜನ್ಮ ಅದೃಷ್ಟ ಎಂದು ಆಕಾಶರಾಜ ಎಲ್ಲರಿಗೆ ಹೇಳಿದನು.

ಭೋಜನವಾದ ಮೇಲೆ ಎಲ್ಲರೂ ಅವರವರ ಗೃಹಗಳಿಗೆ ಹೋಗಿ ವಿಶ್ರಮಿಸಿದರು. ಪರಮೇಶ್ವರನು ತನ್ನ ಅತಿಥಿ ಗೃಹದಲ್ಲಿ ನಿದ್ರೆ ಹೋಗಲನುವಾಗುವಷ್ಟರಲ್ಲಿ ಬ್ರಹ್ಮದೇವನು ಅಲ್ಲಿಗೆ ಬಂದನು. ಬ್ರಹ್ಮನನ್ನು ನೋಡಿದ ಪರಮೇಶ್ವರನು, ಚತುರ್ಮುಖನು ಈ ಸಮಯದಲ್ಲಿ ಬರಲು ಏನೋ ವಿಶೇಷವಿರಬೇಕೆಂದುಕೊಂಡನು. ಆಗ ಬ್ರಹ್ಮದೇವನು ಈಶ್ವರನಲ್ಲಿ 'ಓ ಪರಮೇಶ್ವರ! ನಿನಗೆ ತಿಳಿಯದ ವಿಶೇಷವೇನಿದೆ ಹೇಳು. ನಾಳೆ ನಡೆಯಲಿರುವ ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣವು ಜಗತ್ಕಲ್ಯಾಣವು. ಇದು ನಮಗೆಲ್ಲರಿಗೆ ಬಹಳ ಸಂತೋಷದಾಯಕವು. ನಾಳೆಯ ಕಲ್ಯಾಣದ ಬಗ್ಗೆ ನೆನೆಯುತ್ತಿರುವ ನನಗೆ ಒಂದು ಆಲೋಚನೆ ಬಂದಿದೆ. ಆ ವಿಷಯ ನಿನಗೆ ಹೇಳಬೇಕೆಂದು ಇಲ್ಲಿಗೆ ಬಂದೆನು. ಶ್ರೀ ಪದ್ಮಾವತಿ, ಶ್ರೀನಿವಾಸರು ವಿವಾಹವಾದ ಸ್ವಲ್ಪಸಮಯದ ನಂತರ ಶೇಷಾಚಲಕ್ಕೆ ಹೋಗುತ್ತಾರಲ್ಲವೇ! ಹೋದ ಮೇಲೆ ಹೃದಯಲಕ್ಷ್ಮೀ ಸಮೇತ ಶ್ರೀನಿವಾಸನು ಆನಂದನಿಲಯದಲ್ಲಿ ಪ್ರವೇಶಮಾಡುವ ಆನಂದವನ್ನು ನೆನೆದು ನಾನು ಬ್ರಹ್ಮಾಂಡವಾದ ಉತ್ಸವವನ್ನು ಮಾಡಬೇಕೆಂದಿದ್ದೇನೆ. ಶೇಷಾಚಲವನ್ನೆಲ್ಲಾ ವೈಭವವಾಗಿ ಅಲಂಕರಿಸಿ ಆ ಉತ್ಸವಕ್ಕೆ ನಾವು ಸಮಸ್ತ ದೇವಗಣಗಳನ್ನು ಆಹ್ವಾನಿಸೋಣ. ನಮ್ಮ ಪ್ರಿಯ ಸಖನಾದ ಶ್ರೀನಿವಾಸನು ಆನಂದನಿಲಯದಲ್ಲಿ ಪ್ರವೇಶಮಾಡುವ ವೇಳೆ ನಮಗೆಲ್ಲರಿಗೂ ಹಾಗೂ ಮತ್ತೆ ಕಲಿಯುಗದ ಭಕ್ತರೆಲ್ಲರಿಗೆ ನೆನಪಿರುವಂತೆ, ಕಣ್ಣಿಗೆ ಹಬ್ಬವಾಗಿರುವಂತೆ ನಡೆಯಬೇಕು ಎಂದು ನನಗೆ ತೋರುತ್ತಿದೆ. ಇದಕ್ಕೆ ನಿನ್ನ ಸಹಾಯ ಕೂಡಾ ಬೇಕು. ಕ್ಷೇತ್ರಪಾಲನಾದ ನಿನ್ನಲ್ಲಿ, ಈ ಆಲೋಚನೆ ಮನಸ್ಸಿಗೆ ಬಂದೊಡನೆ ಹಂಚಿಕೊಳ್ಳಬೇಕೆಂದು ಅವಸರವಸರವಾಗಿ ಬಂದೆನು. ನಿನಗೆ ನಿದ್ರಾಭಂಗವಾದುದ್ದಕ್ಕೆ ಕ್ಷಮಿಸಬೇಕು' ಎಂದನು.

ಇದನ್ನು ಕೇಳಿದ ಮಹೇಶ್ವರನು 'ಆಹಾ! ಎಂತಹ ಅದ್ಭುತವಾದ ಆಲೋಚನೆ! ಇದಕ್ಕೆ ಮೇಲಾದ ಆನಂದ ಬೇರೇನಿದೆ. ಹಾಗೆಯೇ ಆಗಲಿ. ಈ ಆಲೋಚನೆ ನಿನಗೆ ಬಂದದ್ದರಿಂದ ಈ ಉತ್ಸವವು "ಬ್ರಹ್ಮೋತ್ಸವ" ಎಂದು ಕರೆಯಲ್ಪಡುತ್ತದೆ. ಇದು ಯಾವಾಗಲೂ ನಿರಾತಂಕವಾಗಿ, ಅದ್ಭುತವಾಗಿ, ಕಣ್ಣಿಗೆ ಹಬ್ಬವಾಗಿ ನಡೆಯಲ್ಪಡುತ್ತದೆ. ಬ್ರಹ್ಮೋತ್ಸವದಲ್ಲಿ ಶ್ರೀ ಭೂಸಮೇತ ಶ್ರೀನಿವಾಸನ್ನು ದರ್ಶನ ಮಾಡುವ ಭಕ್ತರಿಗೆ ಮುಕ್ತಿ ಸಿಗಲಿ ಎಂದು ನಾನು ಅನುಗ್ರಹಿಸುತ್ತೇನೆ.

ಅಲ್ಲದೆ ಬ್ರಹ್ಮೋತ್ಸವದಲ್ಲಿ ಸ್ವಾಮಿಯ ದರ್ಶನ ಮಾಡುವವರಿಗೆ ಶ್ರೀದೇವಿ ಭೂದೇವಿ ಸಮೇತನಾಗಿರುವ ಶ್ರೀನಿವಾಸನ ದರ್ಶನ ಮಾಡುವವರಿಗೆ ಅಕಾಲಮರಣ ಬಾರದು. ಯಾವ ಅನಾರೋಗ್ಯ ಬಾರದು. ಓ ಬ್ರಹ್ಮದೇವ! ನೀನು ಹೇಳಿದಂತೆ ಶೇಷಾಚಲದ ಮೇಲೆ ಉತ್ಸವವನ್ನು ಅದ್ಭುತವಾಗಿ ನಡೆಸೋಣ' ಎಂದನು.

ಬ್ರಹ್ಮ, ರುದ್ರರು ಹೀಗೆ ಮಾತಾಡುತ್ತಿರಲು ಅಲ್ಲಿಗೆ ಪಾರ್ವತಿದೇವಿ ಬಂದಳು. ಪರಮೇಶ್ವರನು ಆ ತಾಯಿಗೆ ಅವರು ಮಾತಾಡಿಕೊಂಡ ಬ್ರಹ್ಮೋತ್ಸವದ ಬಗ್ಗೆ ಹೇಳಿದನು. ಆಗ ಗೌರಿದೇವಿ 'ಆಹಾ! ಬಹಳ ಸಂತೋಷ. ಆದರೆ ನನ್ನದೊಂದು ಮನವಿ. ಬೇಸರಿಸಬಾರದು. ಬ್ರಹ್ಮೋತ್ಸವದಲ್ಲಿ ಒಂದು ದಿನ ನನ್ನ ವಾಹನವಾದ ಸಿಂಹವನ್ನು ಶ್ರೀನಿವಾಸನಿಗೆ ಕೊಡುತ್ತೇನೆ. ಶ್ರೀಮಾನ್ನಾರಾಯಣನು ಈ ವಾಹನವನ್ನೇರಿ ಹೋಗುವ ವೈಭವವನ್ನು ನನಗೆ ನೋಡಬೇಕೆಂದಿದೆ' ಎಂದಳು. ಅದಕ್ಕೆ ಮಹೇಶ್ವರನು ಹಾಗೆಯೇ ಮಾಡೋಣ, ತುಂಬಾ ಸಂತೋಷ ಎಂದು ಹೇಳಿದನು. ಅದಾದ ಮೇಲೆ ಬ್ರಹ್ಮ ಅವರಿಬ್ಬರನ್ನು ಬೀಳ್ಕೊಂಡು ತನ್ನ ಮನೆಗೆ ಹೊರಟುಹೋದನು.

ಆ ದಿನ ವೈಶಾಖ ಶುದ್ಧ ದಶಮಿ. ಸೂರ್ಯಭಗವಾನನು ಉದಯಕಾಲದಲ್ಲಿ ಬಹಳ ಆನಂದದಿಂದ ಇದ್ದಾನೆ. ಆ ದಿನವೇ ಪದ್ಮಾವತಿ, ಶ್ರೀನಿವಾಸರ ಕಲ್ಯಾಣ. ಪ್ರಕೃತಿಯೆಲ್ಲಾ ಉತ್ಸಾಹದಿಂದಿತ್ತು. ಸರೋವರದಲ್ಲಿರುವ ಕಮಲಗಳೆಲ್ಲಾ ಚೆನ್ನಾಗಿ ಅರಳಿವೆ. ಪಕ್ಷಿಗಳ ಕಲರವ ಕಿವಿಗೆ ಇಂಪಾಗಿ ಕೇಳಿಸುತ್ತಿದೆ. ನಾರಾಯಣಪುರ ಬಹಳ ಸಂಭ್ರಮದಿಂದ ಕೂಡಿದೆ. ದೇವತೆಗಳೆಲ್ಲರೂ ಬಹಳ ಅದ್ಭುತವಾದ ವಸ್ತ್ರಗಳನ್ನು ಧರಿಸುತ್ತಿದ್ದಾರೆ. ಆ ದಿನ ಶ್ರೀ ಲಕ್ಷ್ಮೀನಾರಾಯಣರ ವಿವಾಹಕ್ಕೆ ಅನೇಕ ಆಭರಣಗಳನ್ನು ಧರಿಸಿ ತಯಾರಾಗುತ್ತಿದ್ದಾರೆ. ಸುಮಂಗಳಿಯರು ಬಹಳ ಅಂದವಾದ ವಸ್ತ್ರಗಳನ್ನು ಧರಿಸಿ, ಪುಷ್ಪಗಳಿಂದ ಕೇಶವನ್ನು ಅಲಂಕರಿಸಿಕೊಂಡು, ಬಗೆಬಗೆಯ ದಿವ್ಯ ಆಭರಣಗಳನ್ನು ಧರಿಸಿ ತಯಾರಾಗುತ್ತಿದ್ದಾರೆ.

ಆಕಾಶರಾಜ, ಧರಣೀದೇವಿ ದಂಪತಿಯರು ವರಪೂಜೆಗೆ ಬೇಕಾದ ಸಾಮಾನುಗಳನ್ನು ತಯಾರುಮಾಡಿಕೊಂಡು ನೂತನ ವಸ್ತ್ರಾಭರಣಗಳು, ಬಣ್ಣ ಬಣ್ಣದ ಹೂವಿನ ಮಾಲೆಗಳು, ತಾಂಬೂಲ, ಅನೇಕ ದಿವ್ಯ ಕಾಣಿಕೆಗಳನ್ನು ತೆಗೆದುಕೊಂಡು ಶ್ರೀನಿವಾಸನ ಮಂದಿರಕ್ಕೆ ಹೊರಟರು. ಅವರೊಡನೆ ಶುಕ, ಬೃಹಸ್ಪತಿ ಮಹರ್ಷಿಯರು ಕೂಡಾ ಹೊರಟರು. ಆಕಾಶರಾಜನ ಹಿಂದೆ ಸಮಸ್ತ ಬಂಧುಜನರು ಬಂದರು. ಇವರೆಲ್ಲರೂ ಸೇರಿ ತಾಳಮೇಳದೊಂದಿಗೆ ಶ್ರೀನಿವಾಸನ ಮಂದಿರಕ್ಕೆ ಬಂದರು. ಅಲ್ಲಿ ಆಗಲೇ ಚತುರ್ಮುಖ ಬ್ರಹ್ಮ, ಪರಮೇಶ್ವರ, ಅಷ್ಟದಿಕ್ಪಾಲಕರು, ನವಗ್ರಹದೇವತೆಗಳು ಮೊದಲಾದ ದೇವತೆಗಳೆಲ್ಲರೂ ಬಂದಿದ್ದರು. ಅಲ್ಲಿ ಮುನಿಗಣದಲ್ಲಿರುವ ವಶಿಷ್ಠರು ಆಕಾಶರಾಜನೊಡನೆ ವರಪೂಜೆ ಮಾಡಬೇಕೆಂದು ಹೇಳಿದರು. ಆಗ ಆಕಾಶರಾಜ ಶ್ರೀನಿವಾಸನಿಗೆ ನಮಸ್ಕಾರ ಮಾಡಿ 'ಓ ಶ್ರೀನಿವಾಸ! ಶ್ರೀಮಾನ್ನಾರಾಯಣ! ನಿನ್ನನ್ನು ಅಳಿಯನಾಗಿ ಪಡೆಯುವುದಕ್ಕೆ ನನ್ನ ಭಾಗ್ಯ ಎಷ್ಟೆಂದು ಹೇಳಲಿ? ಯಾರ ನಾಮಸ್ಮರಣೆಯಿಂದ ಕೋಟಿಜನ್ಮದ ಪಾಪ ನಾಶವಾಗುತ್ತದೋ, ಯಾರ ನಾಮಸ್ಮರಣೆಯಿಂದ ಮನಸ್ಸು ಶರೀರ ಶುದ್ಧಿಯಾಗುತ್ತದೋ, ಯಾರ ನಾಮಸ್ಮರಣೆಯಿಂದ ಕೋಟಿ ಯಾಗದ ಫಲ ಬರುತ್ತದೋ, ಯಾರ ನಾಮಸ್ಮರಣೆಯಿಂದ ಸಮಸ್ತ ದೇವಗಣ ಅವರವರ ಶಕ್ತಿ ಪಡೆದಿದ್ದಾರೋ, ಯಾರ ದರ್ಶನಭಾಗ್ಯಕ್ಕೋಸ್ಕರ ಸಮಸ್ತ ಮುನಿಗಣ ಕೋಟಿವರ್ಷ ತಪಸ್ಸು ಮಾಡುತ್ತಾರೋ ಅಂತಹ ಪರಬ್ರಹ್ಮನಾದ ನೀನು ನನಗೆ

ಅಳಿಯನಾಗಿ ಬರುವುದು ನನ್ನ ಅದೃಷ್ಟವಲ್ಲದೆ ಬೇರೇನು ಹೇಳಲಿ? ನಿನ್ನ ಪಾದಪದ್ಮವನ್ನು ಒಂದುಸಾರಿ ಮನಸ್ಸಿನಲ್ಲಿ ನೆನೆದರೆ ಸಾಕು ಸರ್ವಪಾಪಗಳು ತೊಲಗಿಹೋಗುತ್ತವೆ. ಸರ್ವಭಾಗ್ಯಗಳೂ ಲಭಿಸುತ್ತವೆ. ಸಾಕ್ಷಾತ್ ಬ್ರಹ್ಮದೇವನೇ ತೊಳೆದ ನಿನ್ನ ಪಾದವನ್ನು ತೊಳೆವ ಅದೃಷ್ಟ ನನಗೆ ದೊರೆತದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ಕನ್ಯಾದಾತರೆಲ್ಲರೂ ತಮ್ಮ ಕುಮಾರಿಗೆ ಗಂಡನಾಗಿ ಬರುವವನಲ್ಲಿ ಶ್ರೀಮಾನ್ನಾರಾಯಣನ ಗುಣ, ಸೌಂದರ್ಯ, ತೇಜಸ್ಸು ಕರಗತವಾಗಿರಬೇಕೆಂದು ನೋಡುತ್ತಾರೆ. ಹಾಗಿರುವಾಗ ಸಾಕ್ಷಾತ್ ನೀನೇ ನನಗೆ ಅಳಿಯನಾಗಿ ಬರುವುದು ಯಾವ ಕನ್ಯಾದಾತನಿಗೂ ಲಭಿಸದ ಅದೃಷ್ಟ ನನಗೆ ಸಿಕ್ಕಿದೆ ಎಂದು ಹೇಳಿ ಆನಂದಭಾಷ್ಪದಿಂದ ಗಂಟಲುಕರಗಿ ಶ್ರೀನಿವಾಸನ ಪಾದಪದ್ಮವನ್ನು ತೊಳೆದು, ಚಂದನ, ಕುಂಕುಮ ಪುಷ್ಪ ಅಕ್ಷತೆಗಳಿಂದ ಪೂಜೆಮಾಡಿದನು. ಸುಮಂಗಳಿಯರೆಲ್ಲರೂ ಮಂಗಳಾರತಿ ಹಾಡು ಹಾಡುತ್ತಾ ಆರತಿ ಮಾಡಿದರು. ಈ ವೇದಿಕೆಯನ್ನು ನೋಡುತ್ತಿರುವ ಅವರೆಲ್ಲರ ಆನಂದ ಹೇಳಲಸಾಧ್ಯ.

ಇನ್ನು ಮದುಮಗಳು ತನ್ನ ಮಂದಿರದಲ್ಲಿ ಹೇಗಿದ್ದಾಳೆ ನೋಡೋಣ. ಸಾಕ್ಷಾತ್ ಸರಸ್ವತಿದೇವಿ, ಗೌರಿದೇವಿ ಪದ್ಮಾವತಿಯನ್ನು ಅಲಂಕರಿಸುತ್ತಿದ್ದಾರೆ. ಅದ್ಭುತವಾದ ಬಂಗಾರದ ಸೆರಗು ಇರುವ ರೇಷ್ಮೆಸೀರೆಯನ್ನು ಉಡಿಸಿ, ಬಂಗಾರದ ಕುಚ್ಚು ಇರುವ ಮಲ್ಲಿಗೆಯಿಂದ ಜಡೆ ಹಾಕಿ, ಕಸ್ತೂರಿ ತಿಲಕ ಇಟ್ಟು, ಮುತ್ತಿನ ಹಾರಗಳಿಂದ ಅಲಂಕರಿಸಿದರು. ಸರಸ್ವತಿದೇವಿ ಕಾಲುಗಳಿಗೆ ಅರಶಿನ ಕುಂಕುಮ ಹಚ್ಚಿದಳು, ಗೌರಿದೇವಿ ಕೆನ್ನೆಗೆ ಚುಕ್ಕೆಯನ್ನಿಟ್ಟಳು. ಇಂದ್ರನ ಭಾರ್ಯೆ ಶಚೀದೇವಿಯು ಪದ್ಮಾವತಿಗೆ ಬಹಳ ಅಂದವಾದ, ಹೊಳೆಯುವ ಆಭರಣಗಳಿಂದ ಅಲಂಕರಿಸಿದಳು. ಅಪ್ಸರಸೆಯರು ಪದ್ಮಾವತಿಯ ಕೈ, ಕಾಲುಗಳಿಗೆ ಮದರಂಗಿ ಹಾಕಿದರು.

ಆಹಾ! ಆ ತಾಯಿಯ ಸೌಂದರ್ಯವನ್ನು ಹೇಗೆಂದು ವರ್ಣಿಸಲಿ? ಶ್ರೀನಿವಾಸನ ಹೃದಯದಲ್ಲಿ ಆಡುತ್ತಾ, ಮಧುರ ಮಧುರ ಆಲೋಚನೆಗಳಿಂದ ಆನಂದಿಸುತ್ತಾ, ಮತ್ತೆ ಇಷ್ಟರಲ್ಲಿ ಓಹ್! ಇಲ್ಲಿ ಇಷ್ಟು ಮಂದಿ ಇದ್ದಾರಲ್ಲಾ! ಎಂದು ನಾಚಿಕೆಗೊಂಡು ಮುದುಡಿಕೊಳ್ಳುತ್ತಿರುವ ಶ್ರೀ ಮಹಾಲಕ್ಷ್ಮೀಯನ್ನು ವರ್ಣಿಸಲು ಯಾರಿಗೆ ಸಾಧ್ಯ? ಆ ಸೃಷ್ಟಿಯಲ್ಲಿರುವ ಸೌಂದರ್ಯವೆಲ್ಲಾ ಅವಳದಲ್ಲವೇ! ಈಗ ಇಲ್ಲಿ ಬಂಗಾರದ ಆಭರಣ ಧರಿಸಿದ್ದಾಳೆ ಆದರೆ ಈ ಸೃಷ್ಟಿಯಲ್ಲಿರುವ ಬಂಗಾರವೆಲ್ಲಾ ಈಕೆಯ ಸ್ವರೂಪವಲ್ಲವೇ! ಇಷ್ಟು ಬಗೆಯ ಪುಷ್ಪಗಳನ್ನು ಚೆನ್ನಾಗಿ ಧರಿಸಿದರೂ ಈ ಪುಷ್ಪದಲ್ಲಿರುವ ಅಂದವೆಲ್ಲಾ ಆ ಲತಾಂಗಿಯದಲ್ಲವೇ! ಈ ಸೃಷ್ಟಿಯಲ್ಲಿರುವ ಸೌಂದರ್ಯವೆಲ್ಲಾ ತಾಯಿಯ ಸ್ವರೂಪವಲ್ಲವೇ! ಆಹಾ! ಈ ತಾಯಿ ಜಗನ್ಮಾತೆಯನ್ನು ಮದುಮಗಳಾಗಿ ನೋಡಿದ ಅವರೆಲ್ಲರೂ ತಮ್ಮನ್ನು ತಾವೇ ಮರೆತರು.

ಆಗ ಸರಸ್ವತಿ 'ಏನು ಸಖಿ! ಏನು ಆಲೋಚನೆ! ಮನಸ್ಸಿನಲ್ಲಿರುವ ಆ ರಾಜ ಏನು ಹೇಳುತ್ತಿದ್ದಾನೆ? ಎಷ್ಟೊತ್ತಿಗೆ ಮದುವೆಯ ಮಣೆಯಲ್ಲಿ ತನ್ನ ಪಕ್ಕದಲ್ಲಿ ಬಂದು ಕೂತುಕೊಳ್ಳುತ್ತಾಳಾ ಎಂದು ಎದುರು ನೋಡುತ್ತಿದ್ದಾನಾ? ಎಷ್ಟೊತ್ತಿಗೆ ತನ್ನ ಹೃದಯಕ್ಕೆ ನಿನ್ನನ್ನು ತಬ್ಬಿಕೊಳ್ಳಬೇಕೆಂದು ಆತುರತೆಯಲ್ಲಿದ್ದಾನಾ? ಆದರೆ ಆ ಹೃದಯಲ್ಲಿ ಇರುವುದು ನೀನೇ ಅಲ್ಲವೇ! ಓ ಸಮುದ್ರ ತನಯಾ! ಆತನು ಕನಕಾಂಬರನಾದರೆ ನೀನು ಕನಕಾಂಬರಿ. ನೀನು ಪ್ರಕೃತಿಯಾದರೆ ಅವನು ಪುರುಷೋತ್ತಮನು. ಆತನು ಕ್ಷೀರಸಾಗರದಲ್ಲಿ ಮಲಗುವವನಾದರೆ ನೀನು ಆ ಸಾಗರದ ಕುಮಾರಿಯಲ್ಲವೇ! ನಿಮ್ಮಿಬ್ಬರ ಕಲ್ಯಾಣವು ಜಗತ್ತಿಗೆ ಕಲ್ಯಾಣವಲ್ಲವೇ!' ಎಂದಳು. ಆಗ ಗೌರಿದೇವಿ 'ಏನು ಸಖಿ! ಈ ನಾಚಿಕೆಯಾಕೆ! ನಿಮ್ಮ ಶ್ರೀನಿವಾಸನು ನಿನ್ನನ್ನು

ಬಿಗಿದಪ್ಪಿಕೊಂಡಿರುವಂತೆ ಊಹಿಸಿಕೊಳ್ಳುತ್ತಿದ್ದೀಯಾ! ನಮ್ಮ ನಾರಾಯಣನು ನಿನ್ನ ಕೆನ್ನೆಗೆ ಮುದ್ದಿಡುವಂತೆ ತೋರುತ್ತಿದೆಯಾ! ಮನ್ಮಥನ ತಂದೆಯಾದ ಶ್ರೀಮಾನ್ನಾರಾಯಣನು ನಿನಗಾಗಿ ಮಧುರ ಗೀತೆಗಳನ್ನು ಹಾಡುತ್ತಿದ್ದಾನಾ! ಏನೋ ಅಂತಹ ಮಧುರ ಆಲೋಚನೆಯಲ್ಲದೆ ನೀನು ಈ ರೀತಿ ನಾಚಿಕೆಮಾಡುವುದಿಲ್ಲ!' ಎಂದು ಹೇಳಿದಳು.

ಆಗ ಪದ್ಮಾವತಿ ಮತ್ತಷ್ಟು ಮುದುಡಿಕೊಂಡು ಮತ್ತೆ ಸುಧಾರಿಸಿಕೊಂಡು 'ಓ ಪ್ರಿಯ ಸಖಿಯರೇ! ನೀವು ನನ್ನನ್ನು ಚೆನ್ನಾಗಿ ಆಟವಾಡಿಸುತ್ತಿದ್ದೀರಿ. ಆದರೂ ನೀವಲ್ಲದೆ ಬೇರೆ ಯಾರು ನನ್ನೊಡನೆ ಈ ರೀತಿ ಚಮತ್ಕಾರ ಮಾಡಬಲ್ಲರು? ನಾವು ಮೂವರೂ ಒಬ್ಬರೇ ಅಲ್ಲವೇ! ನೀವಿಬ್ಬರೂ ಜೊತೆಗಿದ್ದು ನನ್ನನ್ನು ಅಲಂಕರಿಸುವುದೆಂದರೆ ಅದಕ್ಕೆ ಮೇಲಾದ ಆನಂದ ಬೇರೇನಿದೆ?' ಎಂದು ಹೇಳಿದಳು. ಆ ಮೂವರ ಆಟ ನೋಡಿ ಅಲ್ಲಿ ಇಲ್ಲಿ ಓಡಾಡುತ್ತಿರುವ ಜನರು ಬಹಳ ಸಂತೋಷಪಟ್ಟರು. ಈ ಮೂವರೂ ಅದ್ಭುತವಾದ ಸೌಂದರ್ಯದಿಂದ, ದಿವ್ಯ ಆಭರಣಗಳಿಂದ ಅಲಂಕೃತರಾದ ಮೂವರೂ ಮದುಮಗಳಂತೆ ಇದ್ದಾರೆ ಆಹಾ! ಏನು ಅದ್ಭುತ ಈ ದೃಶ್ಯ!

ಇಲ್ಲಿ ನಾರಾಯಣನು ಆನಂದ ಸಾಗರದಲ್ಲಿ ತೇಲುತ್ತಿದ್ದಾನೆ. ಯಾವಾಗ ತನ್ನ ಪ್ರಿಯ ಸಖಿ ಪದ್ಮಾವತಿಯನ್ನು ನೋಡುತ್ತೇನೋ ಎಂದು ಆತುರತೆಯಿಂದ ಎದುರು ನೋಡುತ್ತಿದ್ದಾನೆ. ಶ್ರೀಮಾನ್ನಾರಾಯಣನನ್ನು ಮದುಮಗನಾಗಿ ಅಲಂಕರಿಸುವ ಕಾರ್ಯಕ್ರಮವನ್ನೆಲ್ಲಾ ಬ್ರಹ್ಮ, ಪರಮೇಶ್ವರರು ನೋಡಿಕೊಳ್ಳುತ್ತಿದ್ದಾರೆ. ಅದ್ಭುತವಾದ ಬಂಗಾರದ ವಸ್ತ್ರ, ಶಿರಸ್ಸಿನಲ್ಲಿ ಮಣಿಖಚಿತ ಕಿರೀಟ, ಅನೇಕ ದಿವ್ಯ ಆಭರಣಗಳಿಂದ ದಿವ್ಯ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದಾನೆ.

ಇಷ್ಟರಲ್ಲಿ ಮದುಮಗನಾದ ಶ್ರೀಮಾನ್ನಾರಾಯಣನ ಮಂದಿರಕ್ಕೆ ಆಂಜನೇಯನು ಬಂದನು. ಸ್ವಾಮಿಯನ್ನು ಮದುಮಗನನ್ನಾಗಿ ನೋಡಿದ ಹನುಮಂತನ ಆನಂದಕ್ಕೆ ಪಾರವೇ ಇಲ್ಲ. ಶ್ರೀನಿವಾಸನೊಡನೆ 'ತಂದೇ! ಶ್ರೀಮಾನ್ನಾರಾಯಣ! ಜಗನ್ನಾಥ! ನಿನಗೆ ನಮಸ್ಕಾರಗಳು. ಇದಕ್ಕೆ ಹಿಂದೆ ತ್ರೇತಾಯುಗದಲ್ಲಿ ನೀನು ಶ್ರೀ ರಾಮಚಂದ್ರನಾಗಿ ಅವತರಿಸಿದಾಗ ಸೀತಾಮಾತೆಯೊಂದಿಗೆ ನಡೆದ ನಿಮ್ಮ ಕಲ್ಯಾಣವನ್ನು ನೋಡುವ ಭಾಗ್ಯ ನನಗೆ ಸಿಗಲಿಲ್ಲ. ಈಗ ನನ್ನ ಆಸೆ ನೆರವೇರಿತು ತಂದೇ! ದಿವ್ಯ ಮನೋಹರಮೂರ್ತಿಯಾದ ನಿನ್ನನ್ನು ಮದುಮಗನಾಗಿ ನೋಡುವ ನನಗೆ ಬಹಳ ಸಂತೋಷ. ನೀನು ನಮ್ಮ ತಾಯಿಯಾದ ಲಕ್ಷ್ಮಿಯ ಜೊತೆ ವಿವಾಹವಾದ ನಂತರ ಶೇಷಾಚಲ ಸೇರಿದ ನಂತರ ನಾನು ಅಲ್ಲೇ ಸ್ಥಿರವಾಸಮಾಡುತ್ತೇನೆ. ಯಾವಾಗಲೂ ನಿನ್ನ ಸೇವೆ ಮಾಡುವೆ ಸ್ವಾಮೀ! ಏನು ನನ್ನ ಭಾಗ್ಯ! ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣಕ್ಕೆ ಬರುವ ಅದೃಷ್ಟ ಅದೆಷ್ಟೋ ಅಲ್ಲವೇ! ಓ ಸ್ವಾಮಿ! ನಿನಗಾಗಿ ಪ್ರತ್ಯೇಕವಾಗಿ ಈ ಮಣಿಯನ್ನು ಉಡುಗೊರೆಯಾಗಿ ತಂದಿದ್ದೇನೆ. ನೀವು ಧರಿಸಬೇಕೆಂದು ನನ್ನ ಪ್ರಾರ್ಥನೆ!' ಎಂದನು.

ಆಗ ಶ್ರೀನಿವಾಸನು ಹನುಮಂತನೊಡನೆ 'ಓ ಆಂಜನೇಯ! ನೀನು ನನ್ನ ಪ್ರಿಯ ಸಖನು. ನೀನು ಕೊಟ್ಟ ಈ ಮಣಿ ನನಗೆ ಅತ್ಯಂತ ಪ್ರಿಯಕರವು. ತಪ್ಪದೆ ಧರಿಸುತ್ತೇನೆ. ಮತ್ತೆ ನಿನ್ನ ತಾಯಿ ಪದ್ಮಾವತಿಗೆ ಏನು ಉಡುಗೊರೆ ತಂದಿದ್ದೀಯ? ಉಂಗುರ ಏನಾದರು ತೆಗೆದುಕೊಂಡು ಬರಲಿಲ್ಲ ತಾನೆ! ಎಂದನು. ಆಗ ಹನುಮಂತನು 'ಸ್ವಾಮಿ! ನನ್ನನ್ನು ಆಟವಾಡಿಸುತ್ತಿದ್ದೀಯಾ ತಂದೇ! ಈ ಹನುಮ ತನ್ನ ತಾಯಿಗೆ ಉಡುಗೊರೆ ತಾರದೇ ಇರುತ್ತಾನಾ! ಎಂದು ಅದ್ಭುತವಾದ ರತ್ನಖಚಿತವಾದ ಬಂಗಾರದ ಬಳೆಗಳನ್ನು ತೋರಿಸಿದನು. 'ಆಹಾ! ಹನುಮ! ಅದ್ಭುತ! ಈ

ಬಳೆಗಳು ಬಹಳ ಚೆನ್ನಾಗಿವೆ. ಏನಾದರೂ ನಿನಗೆ ತಾಯಿ ಮೇಲೆ ಹೆಚ್ಚು ಪ್ರೀತಿ! ನನಗೆ ತಂದ ಮಣಿಗಿಂತ ಈ ಬಳೆಗಳು ತುಂಬಾ ಅದ್ಭುತವಾಗಿವೆ!' ಎಂದನು. 'ಅಬ್ಬಾ! ನೋಡು ತಂದೆ! ಮತ್ತೆ ಆಟವಾಡುಸುತ್ತಿದ್ದೀಯ. ನನಗೆ ನೀವಿಬ್ಬರೂ ಸಮಾನರೇ! ಎಂದು ಹೇಳಿದನು. 'ಆಹಾ! ಏನೋ ತಮಾಷೆಗೆ ಹಾಗೆ ಹೇಳಿದೆನು. ಹನುಮಾ! ನಮಗಿಬ್ಬರಿಗೂ ನೀನೆಂದರೆ ಪ್ರೀತಿಯು. ನೀನು ನನಗೆ ಪ್ರಿಯ ಸಖನು. ನೀನಲ್ಲದೆ ಬೇರೆ ಯಾರೊಡನೆ ಹಾಸ್ಯಮಾಡುತ್ತೇನೆ ಹೇಳು' ಎಂದನು. ಇವರಿಬ್ಬರ ವಾತ್ಸಲ್ಯವನ್ನು ನೋಡಿ ಅಲ್ಲಿರುವ ದೇವತೆಗಳೆಲ್ಲಾ ಆಶ್ಚರ್ಯಪಟ್ಟರು.

ಕಲ್ಯಾಣವೇದಿಕೆ ಅದ್ಭುತವಾಗಿ ರೂಪುಗೊಂಡಿದೆ. ಬಗೆಬಗೆಯ ಪುಷ್ಪಗಳಿಂದಲೂ, ಅನೇಕ ಬೆಳಗುವ ದೀಪಗಳಿಂದಲೂ ಅಲಂಕರಿಸಲ್ಪಟ್ಟಿತು. ಪುಷ್ಪಗಳು ಒಂದಕ್ಕಿಂತ ಒಂದು ಅಂದವಾಗಿದ್ದವು. ಅದಕ್ಕೂ ಮೇಲೆ ನಾಲ್ಕು ದಿಕ್ಕುಗಳಿಗೆ ಕಂಬಗಳನ್ನು ಇಡಲಾಗಿದೆ. ಕಲ್ಯಾಣಮಂಟಪದಲ್ಲಿ ಮದುಮಗ, ಮದುಮಗಳಾಗಿ ಅಲಂಕರಿಸಲ್ಪಟ್ಟು ಕೂತಿರುವ ಶ್ರೀ ಪದ್ಮಾವತಿ ಶ್ರೀನಿವಾಸರನ್ನು ನೋಡಿದವರದ್ದೇ ಭಾಗ್ಯ. ಅಷ್ಟು ಸಂತೋಷದಿಂದ ಇದ್ದಾರೆ ಆ ದಂಪತಿಗಳು. ಜಗನ್ಮಾತೆ ಪದ್ಮಾವತಿ, ಜಗನ್ನಾಥ ಶ್ರೀನಿವಾಸರನ್ನು ವಧುವರರಾಗಿ ನೋಡಿದವರ ಜನ್ಮವೇ ಸಾರ್ಥಕ. ಮಹಾ ಭಾಗ್ಯ, ಆಹಾ! ನಮ್ಮ ಕಣ್ಣಮುಂದೆ ಈ ವಿವಾಹ ನಡೆಯುತ್ತಿದೆಯಲ್ಲವೇ!

ಮಾವನಾದ ಆಕಾಶರಾಜ ಅಳಿಯನಾದ ಶ್ರೀನಿವಾಸನಿಗೆ ಕೋಟಿ ಸಂಖ್ಯೆಯ ಸುವರ್ಣನಾಣ್ಯವನ್ನು ವರದಕ್ಷಿಣೆಯಾಗಿ ಕೊಟ್ಟನು. ನವರತ್ನ ಕರ್ಣ ಭೂಷಣಗಳು, ಭುಜಕೀರ್ತಿಗಳು, ಮಣಿಗಳು, ವಜ್ರ, ವೈಡೂರ್ಯಗಳಂತಹ ಅನೇಕ ಆಭರಣಗಳನ್ನು ಉಡುಗೊರೆಯಾಗಿ ಕೊಟ್ಟನು. ಆಕಾಶರಾಜನು ಅಳಿಯನಿಗೆ ಅರ್ಘ್ಯ ಕೊಡುವ ಸಲುವಾಗಿ 'ವರ ಇದಂ ಅರ್ಘ್ಯಂ' (ವರನೇ ಅರ್ಘ್ಯೆಯನ್ನು ಸ್ವೀಕರಿಸು) ಎಂದು ಮೂರು ಬಾರಿ ಹೇಳಿ ಶ್ರೀನಿವಾಸನಿಗೆ ಅರ್ಘ್ಯವನ್ನು ಕೊಟ್ಟನು. 'ಇದಂ ಆಚಮನೀಯಂ' (ಇದು ಆಚಮನದ ಜಲ) ಎಂದು ಹೇಳಿ ಆಕಾಶರಾಜ ಶ್ರೀನಿವಾಸನ ಕೈಗಳಲ್ಲಿ ನೀರು ಹಾಕಿದನು. ಆಗ ಶ್ರೀನಿವಾಸನು 'ಅಮೃತೋಪಸ್ತರಣ ಮಸಿ' ಎಂದು ಹೇಳುತ್ತಾ ಎರಡು ಬಾರಿ ಆಚಮನ ಮಾಡಿದನು.

ಸಾಕ್ಷಾತ್ ಜಗನ್ನಾಥನಾದ ಶ್ರೀಮನ್ನಾರಾಯಣನ ಕೈಗಳಲ್ಲಿ ಅರ್ಘ್ಯ ಕೊಡುವುದಾ? ಆಕಾಶರಾಜನ ಕಣ್ಣಲ್ಲಿ ಆನಂದಬಾಷ್ಪಗಳು ಉದುರಿದವು. ಸೋಮಕಾಸುರನು ವೇದಗಳನ್ನು ಅಪಹರಿಸಲು, ಮತ್ಸ್ಯಾವತಾರ ತಳೆದು ವೇದಗಳನ್ನು ಎತ್ತಿ ತಂದದ್ದು ಈ ಕೈಗಳಲ್ಲವೇ! ಪ್ರಹ್ಲಾದನ ರಕ್ಷಣೆಗಾಗಿ ನರಸಿಂಹಾವತಾರದಲ್ಲಿ ಹಿರಣ್ಯಕಶಿಪುವಿನ ಹೊಟ್ಟೆ ಬಗೆದು ಚೆಂಡಾಡಿದ ಕೈಗಳು ಇದೇ ಅಲ್ಲವೇ! ಪರಶುರಾಮ ಅವತಾರದಲ್ಲಿ ಭೂಮಿಯನ್ನೆಲ್ಲಾ ಬ್ರಾಹ್ಮಣರಿಗೆ ದಾನಮಾಡಿದ ದಿವ್ಯಹಸ್ತಗಳು ಇವೇ ಅಲ್ಲವೇ! ರಾಮಾವತಾರದಲ್ಲಿ ಶಿವಧನಸ್ಸನ್ನು ಮುರಿದ ಅದ್ಭುತ ಪರಾಕ್ರಮವುಳ್ಳ ಹಸ್ತಗಳು ಇವೇ ಅಲ್ಲವೇ! ಜಗನ್ಮಂಗಳಕರವಾದ ಈ ಹಸ್ತಗಳೆರಡರಲ್ಲಿ ಅರ್ಘ್ಯ ಕೊಡುವ ಭಾಗ್ಯ ದೊರಕಿದ್ದು ನನ್ನ ಪೂರ್ವಜನ್ಮ ಪುಣ್ಯಫಲವಲ್ಲದೆ ಬೇರೇನಲ್ಲ! ಎಂದು ನೆನೆದನು ಆಕಾಶರಾಜ. ಸಮಸ್ತ ಜೀವಕೋಟಿಯನ್ನು ಎಲ್ಲಾ ಕಾಲದಲ್ಲಿಯೂ ಕಾಪಾಡುವ ಶ್ರೀಮನ್ನಾರಾಯಣನ ಅಭಯಹಸ್ತಕ್ಕೆ ಅರ್ಘ್ಯ ಕೊಡುವ ಅದೃಷ್ಟ ಯಾರಿಗೆ ಸಿಗುತ್ತದೆ?

ವಿವಾಹ ಮಂಟಪದಲ್ಲಿ ದೇವತೆಗಳು, ಯಕ್ಷಕಿನ್ನರ ಕಿಂಪುರುಷರೆಲ್ಲರೂ ಆಸೀನರಾದರು. ವೇದಿಕೆಯ ಮೇಲೆ ನಡೆಯುವ ಕಲ್ಯಾಣ ಕಾರ್ಯಕ್ರಮವನ್ನು ರೆಪ್ಪೆ ಮುಚ್ಚದೆ ನೋಡುತ್ತಿದ್ದಾರೆ. ಬ್ರಹ್ಮ, ಸರಸ್ವತಿದೇವಿ, ಪರಮೇಶ್ವರ, ಗೌರಿದೇವಿ, ಇಂದ್ರ, ಶಚೀದೇವಿ, ಹನುಮಂತರು ವೇದಿಕೆಯ ಮೇಲಿಯೇ ನಿಂತಿದ್ದಾರೆ. ಅವರೊಟ್ಟಿಗೆ ಆಕಾಶರಾಜ ದಂಪತಿಗಳು, ವಶಿಷ್ಠರು, ಬೃಹಸ್ಪತಿ ಕೂಡಾ ಇದ್ದಾರೆ. ವಶಿಷ್ಠ ಮಹರ್ಷಿ ಶ್ರೀನಿವಾಸನಿಗೆ ಕಂಕಣ ಧಾರಣ ಮಾಡಿಸಲು, ಶ್ರೀನಿವಾಸನು ಪದ್ಮಾವತಿಗೆ ಕಂಕಣ ಧಾರಣೆ ಮಾಡಿದನು. ತನ್ನ ಪ್ರಿಯ ಸಖ ಶ್ರೀನಿವಾಸನು ಕಂಕಣಧಾರಣೆ ಮಾಡುವ ಸಮಯದಲ್ಲಿ ಜಗನ್ಮಾತೆ ಬಹಳ ನಾಚಿಕೆಯಿಂದ ಮುಗುಳುನಗುತ್ತಾ ತಲೆತಗ್ಗಿಸಿಕೊಂಡಳು. ಆ ನಾಚಿಕೆ ಪಡುತ್ತಿರುವ ಅವಳ ಬಂಗಾರದ ಮೈಬಣ್ಣ ಮತ್ತಷ್ಟು ಬೆಳಗಿತು. ಇನ್ನು ವಧೂವರರ ಪ್ರವರ ಹೇಳುವ ಸಮಯ ಬಂತು. ಬೃಹಸ್ಪತಿ ಮದುಮಗಳಾದ ಜಗನ್ಮಾತೆಯ ಪ್ರವರವನ್ನು ಈ ರೀತಿ ಹೇಳಿದರು. 'ಓ ಶ್ರೀನಿವಾಸ! ಶ್ರೀಮಾನ್ನಾರಾಯಣ! ಅತ್ರಿ ಗೋತ್ರೋದ್ಭವಸ್ಯ, ಸುವೀರ ಮಹಾರಾಜ ಪ್ರಪೌತ್ರಿ, ಸುಧರ್ಮ ಮಹಾರಾಜ ಪೌತ್ರಿ, ಆಕಾಶರಾಜ ಪುತ್ರಿಯಾದ ಸೌಭಾಗ್ಯವತಿ ಪದ್ಮಾವತಿಯನ್ನು ನಿನ್ನ ಸಹಧರ್ಮಿಣಿಯಾಗಿ, ಅರ್ಧಾಂಗಿಯಾಗಿ ಆಕಾಶರಾಜ ನಿನಗೆ ಕನ್ಯಾದಾನ ಮಾಡುತ್ತಿದ್ದಾನೆ' ಎಂದನು. ಆಗ ಆಕಾಶರಾಜನು ಶ್ರೀನಿವಾಸನಿಗೆ ದಿವ್ಯ ಆಭರಣಗಳು, ರೇಷ್ಮೆ ಪೀತಾಂಬರವನ್ನು ಬಹುಮಾನವಾಗಿ ಕೊಟ್ಟನು.

ಇಲ್ಲಿ ಶ್ರೀನಿವಾಸನಿಗೆ ಪ್ರವರ ಹೇಳುವ ಅದೃಷ್ಟ ವಶಿಷ್ಠರಿಗೆ ಲಭಿಸಿದೆ. ''ಆಹಾ! ಜಗನ್ನಾಥ! ಶ್ರೀನಿವಾಸ! ಶ್ರೀಮಾನ್ನಾರಾಯಣ! ಈ ಸೃಷ್ಟಿ ಸಮುದಾಯಕ್ಕೇ ಆಧಾರಭೂತನಾದ ನಿನ್ನ ಪ್ರವರವನ್ನು ಹೇಳುವ ಭಾಗ್ಯ ನನಗೆ ದೊರಕಿದ್ದು ಅನೇಕ ಜನ್ಮದ ಪುಣ್ಯಫಲ. ಅನೇಕ ಜನ್ಮದ ತಪಃಫಲವಾಗಿ ಜಗತ್ಕಲ್ಯಾಣ ಚಕ್ರವರ್ತಿಯಾದ ನಿನ್ನ ವಿವಾಹದಲ್ಲಿ ಪಾಲ್ಗೊಂಡು ನಿನ್ನ ಪ್ರವರ ಹೇಳುವ ಭಾಗ್ಯ ಲಭಿಸಿದೆ. ಈ ಸೃಷ್ಟಿ ಎಲ್ಲಾ ನಿನ್ನ ಸ್ವರೂಪವಲ್ಲವೇ ತಂದೇ! ಬ್ರಹ್ಮ, ರುದ್ರ, ವಿಘ್ನೇಶ್ವರ, ಕುಮಾರಸ್ವಾಮಿ, ಇಂದ್ರಾದಿ ಅಷ್ಟದಿಕ್ಪಾಲಕರು, ಆದಿತ್ಯಾದಿ ನವಗ್ರಹಗಳು, ಅಗಸ್ತ್ಯರು, ವಿಶ್ವಾಮಿತ್ರರು, ಕಶ್ಯಪರು ಅಲ್ಲದೆ ಸಮಸ್ತ ಮುನಿಗಣಗಳು, ಸಮಸ್ತ ಯಕ್ಷ ಕಿನ್ನರ, ಕಿಂಪುರುಷ ಗಣಗಳು, ಗಿಡ ಮರಗಳು, ಪರ್ವತಗಳು, ಸಮುದ್ರಗಳು.... ಸರ್ವವೂ ನೀನೆ! ಕಾಲವು ನೀನೆ, ಕಾಲಪುರುಷನು ನೀನೆ! ಅಂತಹ ನಿನ್ನ ಬಗ್ಗೆ ನಾನು ಪ್ರವರ ಹೇಳುವುದೇ? ಇದು ನಿನ್ನ ಅನುಗ್ರಹವಲ್ಲದೆ ಬೇರೇನಲ್ಲ! ಎಂದು ಹೇಳಿ ಈ ವಿಧವಾಗಿ ಪ್ರವರ ಹೇಳಿದನು.

'ಭಾರದ್ವಾಜ ಗೋತ್ರೋದ್ಭವನಾದ, ಯಯಾತಿ ಪ್ರಪೌತ್ರನಾದ, ಶೂರಸೇನನ ಪೌತ್ರನಾದ, ವಸುದೇವನ ಪುತ್ರನಾದ ಶ್ರೀ ವೇಂಕಟೇಶ್ವರನು ಅತ್ರಿ ಗೋತ್ರೋದ್ಭವಳಾದ ಆಕಾಶರಾಜನ ಪುತ್ರಿ ಪದ್ಮಾವತಿಯನ್ನು ತನ್ನ ಸಹಧರ್ಮಿಣಿಯಾಗಿ ಸ್ವೀಕರಿಸುತ್ತಿದ್ದಾನೆ' ಎಂದು ಪ್ರವರ ಹೇಳಿದನು. ಕೂಡಲೇ ಮಂಗಳವಾದ್ಯಗಳು ಮೊಳಗಿದವು. ಸುಮಂಗಳಿಯರು ಮಂಗಳಗೀತೆಗಳನ್ನು ಹಾಡಿದರು. ಆಗ ಧರಣೀದೇವಿಯು ತನ್ನ ಕೈಯಿಂದ ಜಲವನ್ನು ಸುರಿಸುತ್ತಿರಲು ಆಕಾಶರಾಜನು ಶ್ರೀನಿವಾಸನ ಹಸ್ತದ ತುದಿಗೆ ಕಶ್ಯಪಾದಿ ಪುರೋಹಿತರು ವೇದಮಂತ್ರ ಓದುತ್ತಿರಲು ಪದ್ಮಾವತಿಯ ಹಸ್ತವನ್ನು ಶ್ರೀನಿವಾಸನ ಹಸ್ತದ ಮೇಲಿಟ್ಟು ಕನ್ಯಾದಾನ ಮಾಡಿದನು.

ಆಗ ಬೃಹಸ್ಪತಿ, ವಶಿಷ್ಠರು ಜೀರಿಗೆ, ಬೆಲ್ಲವನ್ನು ಮದುಮಗಳು ಪದ್ಮಾವತಿಯ ಕೈಗಳಲ್ಲಿ, ಮದುಮಗನಾದ ಶ್ರೀನಿವಾಸನ ಕೈಗಳಲ್ಲಿ ಇಟ್ಟರು. ಪದ್ಮಾವತಿ ಪಶ್ಚಿಮಮುಖವಾಗಿ,

ಶ್ರೀನಿವಾಸನು ಪೂರ್ವಾಭಿಮುಖವಾಗಿ ಒಬ್ಬರ ಎದುರಿಗೆ ಒಬ್ಬರು ಕೂತುಕೊಂಡರು. ಅವರಿಬ್ಬರ ಮಧ್ಯೆ ಪರದೆಯನ್ನು ದೇವತಾಶಾಸ್ತ್ರಜ್ಞರು ಹಿಡಿದು ನಿಂತರು. ವೇದಮಂತ್ರವನ್ನು ದಿವ್ಯವಾಗಿ ಪಠಿಸುತ್ತಿದ್ದಾರೆ. ಮಂಗಳವಾದ್ಯಗಳು ಕಿವಿಗಳಿಗೆ ಇಂಪಾಗಿ ಕೇಳಿಸುತ್ತಿದೆ. ಬ್ರಾಹ್ಮಣರು ಸೂರ್ಯಸೂಕ್ತವನ್ನು ಪಠಿಸುತ್ತಿದ್ದಾರೆ. ಸುಮಂಗಳಿಯರು ಮಂಗಳಗೀತೆಯನ್ನು ಹಾಡುತ್ತಿದ್ದಾರೆ.

ಸುಮೂಹುರ್ತಕಾಲವು ಬರಲು ಪರದೆಯನ್ನು ಸರಿಸಿದರು. ವಧುವರರಾದ ಶ್ರೀ ಲಕ್ಷ್ಮೀ ನಾರಾಯಣರು ಮುಗುಳುನಗೆಯಿಂದ, ಒಬ್ಬರನ್ನೊಬ್ಬರು ನೋಡಿಕೊಂಡರು. ಜೀರಿಗೆ, ಬೆಲ್ಲವನ್ನು ಶ್ರೀನಿವಾಸನ ತಲೆಯ ಮೇಲೆ ಪದ್ಮಾವತಿಯು, ಪದ್ಮಾವತಿಯ ತಲೆಯ ಮೇಲೆ ಶ್ರೀನಿವಾಸನು ಇಟ್ಟರು. ಆಗ ಶ್ರೀನಿವಾಸನು 'ಕನ್ಯಾ ನಿರೀಕ್ಷಣ ಮುಹೂರ್ತಸುಮುಹೂರ್ತೋಸ್ತು ಇತಿ ಅನುಗೃಹ್ಣಂತು' ನಾನು ಕನ್ಯೆಯನ್ನು ನೋಡಿದ ಮುಹೂರ್ತವು ಸುಮುಹೂರ್ತವಾಗಲೆಂದು ಅನುಗ್ರಹಿಸಿರಿ' ಎಂದು ಮಂತ್ರವನ್ನು ಹೇಳುತ್ತಾ ಸಭೆಯನ್ನು ಉದ್ದೇಶಿಸಿ ಹೇಳಿದನು. ಆಗ ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳೆಲ್ಲರೂ ಕನ್ಯಾನಿರೀಕ್ಷಣ ಮುಹೂರ್ತ: ಸುಮುಹೂರ್ತೋಸ್ತು' (ನೀನು ಕನ್ಯೆಯನ್ನು ನೋಡಿದ ಮುಹೂರ್ತವು ಸುಮುಹೂರ್ತವಾಗಲಿ) ಎಂದು ಮಂತ್ರ ಹೇಳುತ್ತಾ ವಧುವರರಾದ ಪದ್ಮಾವತಿ ಶ್ರೀನಿವಾಸರ ಮೇಲೆ ಅಕ್ಷತೆಯನ್ನು ಹಾಕಿದರು. ವಿವಾಹ ನೋಡುತ್ತಿರುವವರೆಲ್ಲರೂ ಬಂದು ವಧುವರರ ಮೇಲೆ ಅಕ್ಷತೆಯನ್ನು ಹಾಕಿದರು.

ಈ ಮದುವೆಯನ್ನು ನೋಡುತ್ತಿದ್ದ ಅವರೆಲ್ಲರಿಗೂ ಮಾತಿನ ಮೂಲಕ ಹೇಳಲಾಗದ ಆನಂದ ಲಭಿಸಿತು. ಶ್ರೀ ಲಕ್ಷ್ಮೀನಾರಾಯಣರ ವಿವಾಹ ನೋಡುವ ಅದೃಷ್ಟ ಎಷ್ಟು ಜನರಿಗೆ ಸಿಗುತ್ತದೆ? ಈ ಜನ್ಮದ ಭಾಗ್ಯ ಸಾಕು! ಅಲ್ಲದೆ ಈ ಮಹಾಭಾಗ್ಯಕ್ಕಾಗಿಯೇ ಈ ಜನ್ಮವೆತ್ತಿದೆವೋ ಏನೋ! ಎಂದು ಹೇಳಿಕೊಂಡರು. ಶೇಷಾಚಲವಾಸಿಗಳೆಲ್ಲರೂ ತಮ್ಮ ಪೂರ್ವಜನ್ಮ ಪುಣ್ಯಫಲದಿಂದ ಈ ದೇಶದಲ್ಲಿ ಜನಿಸಿಸುವಂತಾಗಿದೆ, ಆದುದರಿಂದ ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣ ನೋಡುವ ಭಾಗ್ಯ ಲಭಿಸಿದೆ ಎಂದು ಹೇಳಿಕೊಂಡರು.

ಇಲ್ಲಿ ಶ್ರೀನಿವಾಸನ ತಾಯಿ ವಕುಳಮಾತೆಯ ಆನಂದಕ್ಕೆ ಪಾರವೇ ಇಲ್ಲ. ಶ್ರೀಮಾನ್ನಾರಾಯಣನು ದ್ವಾಪರಯುಗದಲ್ಲಿ ಶ್ರೀಕೃಷ್ಣನಾಗಿ ಅವತಾರಮಾಡಿದಾಗ ಯಶೋದೆ ಶ್ರೀಕೃಷ್ಣನಲ್ಲಿ 'ಕೃಷ್ಣ! ತಂದೆ! ನಿನ್ನ ಬಾಲ್ಯದಿಂದ ನಿನ್ನ ಆಟಪಾಟಗಳನ್ನು ನೋಡಿದ್ದೇನೆ. ಆದರೆ ನಿನ್ನ ಒಂದೂ ಕಲ್ಯಾಣವನ್ನೂ ನಾನು ನೋಡಲಾಗದೆ ಹೋದೆನು. ಇದು ನನಗೆ ತುಂಬಾ ಬೇಸರದ ವಿಷಯ' ಎಂದಳು. ಆಗ ಶ್ರೀಕೃಷ್ಣನು ಯಶೋದೆಯಲ್ಲಿ 'ತಾಯಿ! ನೀನು ದುಃಖಪಡಬೇಡ. ನಾನು ಕಲಿಯುಗದಲ್ಲಿ ಶ್ರೀನಿವಾಸನಾಗಿ ಶೇಷಾಚಲದಲ್ಲಿ ಅವತಾರ ಮಾಡುತ್ತೇನೆ. ಆಗ ನೀನು ವಕುಳದೇವಿಯಾಗಿ ಜನಿಸಿ ನನ್ನ ಬರುವಿಕೆಗಾಗಿ ಕಾಯುತ್ತಿರುವೆ. ಶ್ರೀ ಮಹಾಲಕ್ಷ್ಮೀ ಅಂಶದಿಂದ ಪದ್ಮಾವತಿಯು ನಾರಾಯಣಪುರದಲ್ಲಿ ಜನಿಸುತ್ತಾಳೆ. ಪದ್ಮಾವತಿಯೊಟ್ಟಿಗೆ ನನ್ನ ಕಲ್ಯಾಣ ಪೂರ್ತಿಯಾಗಿ ನಿನ್ನ ಕೈಗಳಿಂದಲೇ ನಡೆಯುತ್ತದೆ' ಎಂದು ಹೇಳಿದನು. ಆ ಮಾತಿನ ಪ್ರಕಾರವೇ ಈ ಪದ್ಮಾವತಿ, ಶ್ರೀನಿವಾಸರ ಕಲ್ಯಾಣವು ವಕುಳಮಾತೆಯ ಕಣ್ಮುಂದೆ ಅದ್ಭುತವಾಗಿ ನಡೆಯಿತು. ಆಹಾ! ಈ ದಿನ ನನ್ನ ಆಸೆ ತೀರಿತಲ್ಲ! ಎಂದು ವಕುಳಮಾತೆ ಬಹಳ ಸಂತೋಷಪಟ್ಟಳು. ಕಣ್ಣಲ್ಲಿ ಆನಂದಭಾಷ್ಪಗಳು ಉದುರಿದವು. ನನ್ನ ಜನ್ಮ ಸಾರ್ಥಕವಾಯಿತು ಎಂದು ತುಂಬಾ ಆನಂದಪಟ್ಟಳು.

ಕಲ್ಯಾಣವೇದಿಕೆ ಪೂರ್ಣವಾಗಿ ನೋಡುತ್ತಿದ್ದ ಹನುಮಂತನ ಕಣ್ಣಲ್ಲಿಯೂ ಆನಂದಭಾಷ್ಪಗಳು ಉದುರಿದವು. ಸಂತೋಷದಲ್ಲಿ ಕಣ್ಣು ಒದ್ದೆಯಾಯಿತು. ತ್ರೇತಾಯುಗದಲ್ಲಿ ಶ್ರೀ ಸೀತಾರಾಮಚಂದ್ರುರ ವಿವಾಹ ನೋಡಲಾಗದಿದ್ದರೂ ಈಗ ಅದು ತೀರಿತು ಎಂದು ಸಂತೋಷಪಟ್ಟನು. ಕಲ್ಯಾಣ ನಡೆಯುವಷ್ಟು ಕಾಲ ವಧುವರರಿಬ್ಬರೂ ಶ್ರೀ ಸೀತಾರಾಮಚಂದ್ರುರಂತೆ ಕಾಣಿಸಿಕೊಂಡರು. ಆಹಾ! ನನ್ನ ತಾಯಿಯ ವಿವಾಹ ನೋಡುವ ಅದೃಷ್ಟ ಈಗ ಲಭಿಸಿತಲ್ಲಾ! ನನ್ನ ತಂದೆಯ ಕಲ್ಯಾಣ ನೋಡುವ ಭಾಗ್ಯ ಈಗ ಕೂಡಿತಲ್ಲಾ! ಎಂದು ಸಂತೋಷಪಟ್ಟನು.

ಶ್ರೀಮಾನ್ನಾರಾಯಣನ ಪ್ರಿಯ ಭಕ್ತರಾದ ಗರುಡ, ಆದಿಶೇಷರು ಸ್ವಾಮಿಯ ಕಲ್ಯಾಣ ನೋಡಿ ಪುಲಕಿತರಾದರು. ಮದುಮಗಳಾಗಿ ಸಾಕ್ಷಾತ್ ಶ್ರೀ ಮಹಾ ಲಕ್ಷ್ಮೀ ಶೋಭೆಯನ್ನು ನೋಡಿ ಅತ್ಯಾನಂದಪಟ್ಟರು. ಮದುಮಗನಾದ ಜಗನ್ನಾಥನನ್ನು ನೋಡಿ ಪುಲಕಿತರಾದರು. ಹದಿನಾಲ್ಕು ಲೋಕದವರೆಲ್ಲರಿಗೂ ಈ ದಿನ ಹಬ್ಬವೇ. ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣವು ಜಗತ್ಕಲ್ಯಾಣ ಅಲ್ಲವೇ! ಅತಿಥಿಯರಲ್ಲಿ ಇದ್ದ ದೇವತೆಗಳೆಲ್ಲರೂ ಬಹಳ ಆನಂದಪಟ್ಟರು. ಸುಮುಹೂರ್ತವೇಳೆಯಲ್ಲಿ ಆಕಾಶದಲ್ಲಿ ಬಣ್ಣ ಬಣ್ಣದ ಕಾಮನಬಿಲ್ಲು ಮೂಡಿತು. ಪ್ರಕೃತಿಯೆಲ್ಲಾ ಪುಲಕರಿಸಿತು. ನವಿಲುಗಳೆಲ್ಲಾ ರೆಕ್ಕೆಬಿಚ್ಚಿ ನಾಟ್ಯವಾಡಿದವು.

ಆಗ ಸರಸ್ವತಿ, ಗೌರಿದೇವಿಯರು ಮದುಮಗಳಾದ ಪದ್ಮಾವತಿಯನ್ನು ಕರೆದುಕೊಂಡು ಹೋಗಿ ನೂತನ ವಸ್ತ್ರವನ್ನು ಉಡಿಸಿ, ತಿರುಗಿ ಮದುವೆಯ ಮಣೆಯಲ್ಲಿ ಕೂತುಕೊಳ್ಳಿರಿಸಿದರು. ಆಗ ಶ್ರೀನಿವಾಸನು ಯಂತ್ರಧಾರಣೆ ಮಾಡಲು (ವಧುವನ್ನು ವರ ಹಗ್ಗದಿಂದ ಕಟ್ಟುವುದು) ಮುಂದಾದನು. ಶ್ರೀನಿವಾಸನು ‘ಆಶಾಸಾನಾ ಸೋಮನಸಂ ಪ್ರಜಾಂ, ಸೌಭಾಗ್ಯಂ, ತನುಂ, ಅಗ್ನೇರ ನೂರತಾ ಭೂತ್ವಾ ಸನ್ನಹ್ಯೇ ಸುಕೃತಾಯ ಕಂ’ (ಒಳ್ಳೆಯ ಮನಸ್ಸು, ಒಳ್ಳೆಯ ಸಂತತಿ, ಸೌಭಾಗ್ಯ, ಒಳ್ಳೆಯ ಶರೀರವನ್ನು ಧರಿಸಿ ಅಗ್ನಿಹೋತ್ರನಾದ ನಾನು ಸಹಧರ್ಮಚಾರಿಣಿಯಿಂದ ಸತ್ಕಾರ್ಯಮಾಡಲು ಅನುಗ್ರಹಿಸು) ಎಂದು ಮಂತ್ರವನ್ನು ಹೇಳುತ್ತಾ ಪದ್ಮಾವತಿಯ ಸೊಂಟಕ್ಕೆ ಸುತ್ತಿ ಗಂಟು ಹಾಕಿದನು. ಇದನ್ನೇ ‘ಪತ್ನೀಪ್ರತೋಪನಯನ’ ಎಂದು ಹೇಳುತ್ತಾರೆ. ಆಮೇಲೆ ಮಾಂಗಲ್ಯಧಾರಣೆಯ ಶುಭಮುಹೂರ್ತ ಸಮೀಪಿಸಿತು.

ಶ್ರೀನಿವಾಸನು ಮಾಂಗಲ್ಯದೇವತೆಯನ್ನು ಆಹ್ವಾನಿಸಿ ಷೋಢಶೋಪಚಾರದಿಂದ ಮಂಗಳಸೂತ್ರವನ್ನು ಪೂಜಿಸಿದನು. ಆಗ ಬ್ರಾಹ್ಮಣೋತ್ತಮನು ಆ ಮಂಗಳಸೂತ್ರವನ್ನು ಸಭೆಯಲ್ಲಿದ್ದ ಮುತ್ತೈದೆಯರ ಹತ್ತಿರ ತೆಗೆದುಕೊಂಡುಹೋದಾಗ ಅವರೆಲ್ಲರೂ ಅದನ್ನು ಸ್ಪರ್ಷಮಾಡಿ, ಭಕ್ತಿಯಿಂದ ಕಣ್ಣಿಗೆ ಒತ್ತಿಕೊಂಡರು. ಸಾಕ್ಷಾತ್ ಶ್ರೀಮಾನ್ನಾರಾಯಣನು ಶ್ರೀ ಮಹಾಲಕ್ಷ್ಮೀಗೆ ಕಟ್ಟುವ ಮಂಗಳಸೂತ್ರವನ್ನು ಸ್ಪರ್ಷಿಸುವದು ತಮ್ಮ ಸೌಭಾಗ್ಯ ಎಂದು ತಿಳಿದರು. ಸರ್ವಸೌಭಾಗ್ಯಕ್ಕೆ ನಿಲಯಳಾದ ಶ್ರೀ ಮಹಾಲಕ್ಷ್ಮೀ ತಾಯಿಯ ಮಂಗಳಸೂತ್ರವನ್ನು ಒಂದು ಸಾರಿ ಸ್ಪರ್ಷಿಸುವದು ಕೂಡಾ ಮಹಾಭಾಗ್ಯವಲ್ಲವೇ! ನಾವು ಕೂಡಾ ಒಂದು ಸಾರಿ ನಮ್ಮ ಮನಸ್ಸಿನಲ್ಲಿ ಆ ಜಗನ್ಮಾತೆಯ ಮಂಗಳಸೂತ್ರವನ್ನು ಕಣ್ಣಿಗೆ ಒತ್ತಿಕೊಂಡಂತೆ ಭಾವಿಸಿ ನಮಸ್ಕರಿಸೋಣ.

ಆಗ ಸಮಸ್ತ ದೇವತಾಗಣ, ಸಮಸ್ತ ಯಕ್ಷ, ಕಿನ್ನರ, ಕಿಂಪುರುಷ ಗಣಗಳು ಆನಂದದಿಂದ ನೋಡುತ್ತಿರಲು ಶ್ರೀನಿವಾಸನು "ಮಾಂಗಲ್ಯಂ ತಂತುನಾ ಅನೇನ ಮಮ ಜೀವನ ಹೇತುನಾ ಕಂಠೇ ಬಧ್ನಾಮಿ ಸುಭಗೆ ತ್ವಂ ಜೀವ ಶರದಶ್ಶತಂ" (ನನ್ನ ಜೀವನದ ಹೇತುವಾದ ಈ ಸೂತ್ರದಿಂದ ನಾನು ನಿನ್ನ ಕಂಠದಲ್ಲಿ ಮಾಂಗಲ್ಯವನ್ನು ಕಟ್ಟುತ್ತಿದ್ದೇನೆ. ನೀನು ನೂರು ವರ್ಷ ಜೀವಿಸುವಂತಾಗಲಿ) ಎಂದು ಮಂತ್ರವನ್ನು ಹೇಳುತ್ತಾ ಮದುಮಗಳಾದ ಪದ್ಮಾವತಿಯ ಕೊರಳಿಗೆ ಮಾಂಗಲ್ಯಧಾರಣೆ ಮಾಡಿದನು. ಈ ಅದ್ಭುತ ದೃಶ್ಯವನ್ನು ನೋಡಿದರೆಲ್ಲರ ಆನಂದಕ್ಕೆ ಪಾರವೇ ಇಲ್ಲ. ಆಹಾ! ಶ್ರೀ ಲಕ್ಷ್ಮೀನಾರಾಯಣರ ಕಲ್ಯಾಣವು ಲೋಕ ಕಲ್ಯಾಣವಲ್ಲವೇ! ನಾವು ಎಷ್ಟು ಅದೃಷ್ಟವಂತರು ಎಂದು ತಿಳಿದರು. ಬ್ರಹ್ಮ ರುದ್ರರ ಕಣ್ಣಲ್ಲಿ ಆನಂದಭಷ್ಪಗಳು ಉದುರಿದವು. ತಮ್ಮ ಪ್ರಿಯಸಖನಾದ ಶ್ರೀಮಾನ್ನಾರಾಯಣನ ವಿವಾಹವನ್ನು ಹತ್ತಿರದಲ್ಲಿದ್ದು ಕಣ್ಣಾರೆ ನೋಡಿದ ಅವರ ಸಂತೋಷಕ್ಕೆ ಪಾರವಿಲ್ಲ. ನವ ವಧುಗಳಾದ ಶ್ರೀ ಲಕ್ಷ್ಮೀನಾರಾಯಣರನ್ನು ನೋಡಿ ಸರಸ್ವತಿ, ಪಾರ್ವತಿದೇವಿಯರಿಬ್ಬರೂ ಬಹಳ ಸಂತೋಷಪಟ್ಟರು. ಇಲ್ಲಿ ತಾಯಿ ವಕುಳಮಾತೆಯ ಆನಂದಕ್ಕೆ ಪಾರವೇ ಇಲ್ಲ.

ಮುಂದೆ ಅಕ್ಷತಾರೋಹಣ ಕಾರ್ಯಕ್ರಮ ನಡೆಯಿತು. ಬೃಹಸ್ಪತಿ ಮಂತ್ರವನ್ನು ಹೇಳುತ್ತಾ ಅಕ್ಷತೆಯನ್ನು ತೆಗೆದುಕೊಂಡು ಮೊದಲಿಗೆ ಮದುಮಗನಾದ ಶ್ರೀನಿವಾಸನ ತಲೆಯಮೇಲೆ ಹಾಕಿದನು. ಆಮೇಲೆ ಮತ್ತೆ ಅಕ್ಷತೆಯನ್ನು ತೆಗೆದುಕೊಂಡು ಮಂತ್ರೋಚ್ಚಾರಣೆ ಮಾಡುತ್ತಾ ವಧು ಶ್ರೀ ಪದ್ಮಾವತಿಯ ತಲೆಯಮೇಲೆ ಹಾಕಿದನು. ಆಮೇಲೆ ಅವಳ ತಲೆ, ಶ್ರೀನಿವಾಸನ ತಲೆಯ ಕೆಳಗೆ ಇರುವಂತೆ ಜೋಡಿಸಿದನು. ಆಹಾ! ಎಷ್ಟು ಅದ್ಭುತವಾಗಿದೆ ಈ ದೃಶ್ಯ!

ಆಗ ಬ್ರಾಹ್ಮಣೋತ್ತಮರು ವೇದಮಂತ್ರ ಹೇಳುತ್ತಿರಲು ಶ್ರೀನಿವಾಸನು ಮುತ್ತಿನಿಂದ ಕೂಡಿದ ಅಕ್ಷತೆಯನ್ನು ವಧು ಪದ್ಮಾವತಿಯ ಶಿರಸ್ಸಿನ ಮೇಲೆ ಸುರಿದನು. ಆಹಾ! ಎಷ್ಟು ಸುಂದರ ಈ ದೃಶ್ಯ! ಆ ಅಕ್ಷತೆಗಳಲ್ಲದೆ ಶ್ರೀಮಾನ್ನಾರಾಯಣನು ತನ್ನ ಪ್ರಿಯಸಖಿ ಶ್ರೀ ಮಹಾಲಕ್ಷ್ಮೀಯ ಮೇಲೆ ಸುರಿಸುತ್ತಿರುವ ಪ್ರೇಮಾನುರಾಗದ ಪ್ರವಾಹವೆಷ್ಟೋ! ಅದಾದ ಮೇಲೆ ವಧುವಿನ ಸರದಿ ಬಂತು....... ಈ ಮನೋಜ್ಞ ಸುಂದರ ದೃಶ್ಯವನ್ನು ನೋಡಿದವರೆಲ್ಲರೂ ಆನಂದ ಪರವಶರಾದರು.

ವಶಿಷ್ಠರು, ಭರದ್ವಾಜ, ಅತ್ರಿ, ಕಶ್ಯಪರು, ವಿಶ್ವಾಮಿತ್ರರು, ಅಲ್ಲದೆ ಮಹರ್ಷಿಯರು ಉಚ್ಚರಿಸುತ್ತಿರುವ ವೇದಮಂತ್ರಗಳಿಂದಲೂ, ಸುಮಂಗಳಿಯರು ಶ್ರಾವ್ಯವಾಗಿ ಹಾಡುತ್ತಿರುವ ರಮಣೀಯ ಕಲ್ಯಾಣ ಹಾಡುಗಳಿಂದಲೂ, ಅದ್ಭುತವಾದ ಮಂಗಳವಾದ್ಯಗಳಿಂದಲೂ, ದಿವ್ಯವಾದ ಸಲಕರಣೆಗಳಿಂದಲೂ, ನಾದಸ್ವರಗಳಿಂದಲೂ ಕೂಡಿದ ಆ ಸಭಾಂಗಣ ದಿವ್ಯಶೋಭೆಯಿಂದ ಮೆರಗುತ್ತಿದೆ. ಆ ಆನಂದದಿಂದ ಅತಿಥಿಯರೆಲ್ಲರೂ ತಮ್ಮನ್ನೇ ಮರೆತು ಕಣ್ಣು ಮುಚ್ಚಿಕೊಂಡರು. ಮತ್ತೆ ಕೂಡಲೇ ಅಹೋ ಈ ದಿವ್ಯ ಕಲ್ಯಾಣವನ್ನು ಒಂದು ಕ್ಷಣಕೂಡಾ ಬಿಡದೆ ನೋಡಬೇಕಲ್ಲವೇ! ಅಂದುಕೊಂಡು ತಿರುಗಿ ಮತ್ತೆ ಕಣ್ಣನ್ನು ಮತ್ತಷ್ಟು ದೊಡ್ಡದು ಮಾಡಿಕೊಂಡು ನೋಡಿದರು. ಹಾಗೆಯೇ ಸ್ವಲ್ಪಹೊತ್ತು ನೋಡಿದಮೇಲೆ ಆನಂದದಿಂದ ತನ್ಮಯರಾಗಿ ಮತ್ತೆ ಕಣ್ಣು ಮುಚ್ಚಿಕೊಂಡರು. ಮತ್ತೆ ಕಣ್ಣು ತೆರೆಯುವುದು, ಹೀಗಿತ್ತು ಅಲ್ಲಿದ್ದವರ ಮನೋಸ್ಥಿತಿ.

ಆಗ ಬೃಹಸ್ಪತಿಯು ಶ್ರೀನಿವಾಸನ ಬಲ ಕೈಯಲ್ಲಿ, ಪದ್ಮಾವತಿಯ ಎಡ ಕೈಯಲ್ಲಿ ರಕ್ಷಾಬಂಧನವನ್ನು ಕಟ್ಟಿದರು. "ಧ್ರುವಂ ತೇ ರಾಜಾ ವರುಣೋ ಧ್ರುವಂ ತೇ ನೋ ಬೃಹಸ್ಪತಿಃ ಧ್ರುವಂತ ಇಂದ್ರಶ್ಚಾಗ್ನಿಶ್ಚ ರಾಷ್ಟ್ರಂ ಧಾರಯತಾಂ ಧ್ರುವಂ" ಎಂದು ಮಂತ್ರವನ್ನು ಪಠಿಸುತ್ತಾ ಶ್ರೀ ಪದ್ಮಾವತಿ ಶ್ರೀನಿವಾಸರ ರಕ್ಷಾಬಂಧನಕ್ಕೆ ಗಂಟು ಹಾಕಿದರು. ಈ ವಿವಾಹದಲ್ಲಿ ಒಂದು ಅದ್ಭುತ ವಿಶೇಷವಿದೆ. ಬಹಳ ವಿವಾಹದಲ್ಲಿ ಮಂತ್ರದಲ್ಲಿ ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ ಎಂದು, ಶ್ರೀ ಲಕ್ಷ್ಮೀನಾರಾಯಣ ರೂಪಶ್ಯ ಎಂದು ಬರುತ್ತದೆ. ಅಂದರೆ ವಧುವರರನ್ನು ಶ್ರೀ ಲಕ್ಷ್ಮೀನಾರಾಯಣರಂತೆ ಭಾವಿಸುವ ಅರ್ಥ ಬರುವ ಮಂತ್ರಗಳು ಇರುತ್ತವೆ. ಈ ವಿವಾಹದಲ್ಲಿ ವಧುವರರು ಸಾಕ್ಷಾತ್ ಶ್ರೀ ಲಕ್ಷ್ಮೀನಾರಾಯಣರೇ ಆಗಿರುವದು ವಿಶೇಷ. ಅಲ್ಲದೆ ವಿವಾಹದಲ್ಲಿ ಪಠಿಸುವ ಮಂತ್ರಗಳಲ್ಲಿ ಬರುವ ಇಂದ್ರ, ಅಗ್ನಿ ಮೊದಲಾದ ದೇವತೆಗಳೆಲ್ಲರೂ ಈ ವಿವಾಹದಲ್ಲಿ ಪ್ರತ್ಯಕ್ಷವಾಗಿ ಇರುವುದು ವಿಶೇಷ. ಈ ವಿಧವಾಗಿ ಶ್ರೀ ಪದ್ಮಾವತಿ ಶ್ರೀನಿವಾಸರ ವಿವಾಹ ಬಹಳ ವಿಶೇಷಗಳಿಂದ ಕೂಡಿದ್ದು ಲೋಕಕಲ್ಯಾಣಕ್ಕೆ ಕಾರಣಭೂತವಾಗಿದೆ.

ಅದಾದಮೇಲೆ ವಶಿಷ್ಠರು ವಧುವರರಿಂದ ಹೋಮ ಮಾಡಿಸಿದರು. ಬ್ರಾಹ್ಮಣೋತ್ತಮರ ವೇದಮಂತ್ರಗಳು, ಮಂಗಳಗೀತೆಗಳ ಮಧ್ಯೆ ವರನಾದ ಶ್ರೀನಿವಾಸ ಹಾಗೂ ವಧುವಾದ ಪದ್ಮಾವತಿಯರ ಪಾಣಿಗ್ರಹಣ ಕಾರ್ಯಕ್ರಮ ನಡೆಯಿತು. ಶ್ರೀ ಲಕ್ಷ್ಮೀನಾರಾಯಣರ ಪಾಣಿಗ್ರಹಣವನ್ನು ನೋಡಿ ದೇವತೆಗಳೆಲ್ಲರೂ ಸಂತೋಷಪಟ್ಟರು. ಸಮಸ್ತ ವಿಶ್ವಕ್ಕೆ ರಕ್ಷಾಕವಚವಾಗಿ ನಿಂತಿರುವ ಶ್ರೀ ಲಕ್ಷ್ಮೀನಾರಾಯಣರ ಹಸ್ತಗಳು ಪಾಣಿಗ್ರಹಣಕಾಲದಲ್ಲಿ ಬಹಳ ಶೋಭೆಯನ್ನು ತಂದಿತು. ಸೃಷ್ಟಿಗೆಲ್ಲಾ ಅಭಯಕೊಡುವ ದಿವ್ಯ ಹಸ್ತ ಶ್ರೀಮಾನ್ನಾರಾಯಣನ ಈ ಹಸ್ತವಲ್ಲವೇ! ಸೃಷ್ಟಿಯಲ್ಲಿರುವ ಐಶ್ವರ್ಯವನ್ನು ಅನುಗ್ರಹಿಸಿದ ಹಸ್ತ ಶ್ರೀ ಮಹಾಲಕ್ಷ್ಮೀ ತಾಯಿಯದಲ್ಲವೇ! ರಾಕ್ಷಸರಾದ ರಾವಣಾದಿಗಳನ್ನು ಸಂಹರಿಸಿದ ಹಸ್ತ ಶ್ರೀಮಾನ್ನಾರಾಯಣನ ಈ ಹಸ್ತವಲ್ಲವೇ! ಶ್ರೀ ಜಗನ್ಮಾತೆಯ ಈ ಹಸ್ತವಲ್ಲವೆ ಸಮಸ್ತ ಸೌಭಾಗ್ಯವನ್ನು ಅನುಗ್ರಹಿಸುವುದು. ಆಹಾ! ಶ್ರೀ ಲಕ್ಷ್ಮೀನಾರಾಯಣರ ಪಾಣಿಗ್ರಹಣವನ್ನು ಕಣ್ಣಾರೆ ನೋಡಿದ ನಾವೆಷ್ಟು ಅದೃಷ್ಟವಂತರಲ್ಲವೇ! ಎಂದು ಅಲ್ಲಿ ನೆರೆದವರೆಲ್ಲರೂ ಅಂದುಕೊಂಡರು.

ಇನ್ನು ಮುಂದೆ ಸಪ್ತಪದಿ ಕಾರ್ಯಕ್ರಮ. ಅಗ್ನಿಹೋತ್ರಕ್ಕೆ ದಕ್ಷಿಣಮುಖವಾಗಿ ಬಲಗಾಲು ಮುಂದೆ ಇಡುತ್ತಾ ಶ್ರೀನಿವಾಸನು 'ಏಕಮೀಷೆ ವಿಷ್ಣುಸ್ತ್ವಾ ಅನ್ವೇತು' (ಒಂದು ಹೆಜ್ಜೆಯಿಂದ ವಿಷ್ಣುವು ನಿನ್ನ ಇಷ್ಟಾರ್ಥವನ್ನು ಪೂರೈಸುತ್ತೆನೆ) ಎಂದು ಮೊದಲ ಹಜ್ಜೆಮುಂದಿಟ್ಟು, 'ದ್ವೇ ಊರ್ಜೆ ವಿಷ್ಣು ಸ್ತ್ವಾ ಅನ್ವೇತು' (ಎರಡನೇ ಹೆಜ್ಜೆಯಿಂದ ವಿಷ್ಣುವು ನಿನ್ನನ್ನು ಅನುಸರಿಸುತೇನೆ) ಎಂದು ಎರಡನೇ ಹಜ್ಜೆಮುಂದಿಟ್ಟು, 'ತ್ರೀಣಿ ವ್ರತಾಯ ವಿಷ್ಣುಸ್ತ್ವಾ ಅನ್ವೇತು' (ಮೂರನೇ ಹೆಜ್ಜೆಯಿಂದ ವಿಷ್ಣುವು ನಿನ್ನ ವ್ರತಾನುಚರಣೆಯಲ್ಲಿ ಅನುಸರಿಸುತ್ತಾನೆ ಎಂದು)... ಹೀಗೆ ಏಳು ಹೆಜ್ಜೆಯನ್ನು ಆಯಾ ಮಂತ್ರಗಳನ್ನು ಪಠಿಸುತ್ತಾ ಸಪ್ತಪದಿ ಪೂರ್ತಿಮಾಡಿದರು. ಈ ಮಂತ್ರಗಳನ್ನು ಪ್ರತಿಯೊಂದು ವಿವಾಹದಲ್ಲಿಯೂ ಮದುಮಗನು ಮದುಮಗಳಲ್ಲಿ ವಿಷ್ಣು ಅವಳನ್ನು ಅನುಸರಿಸುತ್ತಿದ್ದಾನೆ ಎಂಬ ಭಾವನೆಯಿಂದ ಮಾಡಲಾಗುತ್ತದೆ. ಇಲ್ಲಿ ವಿಶೇಷವೇನೆಂದರೆ ಮದುಮಗಳಾದ ಮಹಾಲಕ್ಷ್ಮೀಯ ಹಿಂದೆ ಸಾಕ್ಷಾತ್ ಶ್ರೀ ಮಹಾವಿಷ್ಣುವೇ ವರನಾಗಿ ಏಳು ಹಜ್ಜೆಯನ್ನು ಇಡುವುದು.

ಹೋಮ ಪೂರ್ತಿಯಾದ ಮೇಲೆ ವಧುವರರಿಬ್ಬರೂ ಅಗ್ನಿಹೋತ್ರಕ್ಕೆ ಪ್ರದಕ್ಷಿಣೆ ಬಂದು ಶ್ರೀನಿವಾಸನು ಪದ್ಮಾವತಿಯ ಸೊಂಟಕ್ಕೆ ಕಟ್ಟಿದ ದಾರವನ್ನು ಮಂತ್ರಪೂರ್ವಕವಾಗಿ ಬಿಚ್ಚಿದನು. ವಿವಾಹ ಕಾರ್ಯಕ್ರಮ ಪೂರ್ತಿಯಾದೊಡನೆ ಆಕಾಶರಾಜ ಅತಿಥಿಗಳೆಲ್ಲರಿಗೆ ಅದ್ಭುತವಾದ ಮದುವೆ ಊಟದ ವ್ಯವಸ್ಥೆ ಮಾಡಿದನು. ವಿವಾಹಕ್ಕೆ ಬಂದವರಿಗೆಲ್ಲಾ ಆಕಾಶರಾಜ ದಂಪತಿಯರು ಅನೇಕ ಬಹುಮಾನಗಳನ್ನು ಕೊಟ್ಟರು.

ಬ್ರಹ್ಮ, ರುದ್ರರಿಬ್ಬರೂ ದೇವತೆಗಳೊಂದಿಗೆ ಸೇರಿ ಭೋಜನ ಮಾಡಿದರು. ಆಗ ಪರಮೇಶ್ವರನು ಚತುರ್ಮುಖನೊಡನೆ ಈ ರೀತಿ ಹೇಳಿದನು. 'ಓ ಬ್ರಹ್ಮದೇವ! ಶ್ರೀ ಪದ್ಮಾವತಿ ಶ್ರೀನಿವಾಸರ ವಿವಾಹ ಎಷ್ಟು ಅದ್ಭುತವಾಗಿ ನಡೆಯಿತು! ಇವರ ಕಲ್ಯಾಣವು ಈ ಜಗತ್ತಿನ ಕಲ್ಯಾಣವಲ್ಲವೇ! ಈ ಕಲ್ಯಾಣವನ್ನು ಪ್ರತ್ಯಕ್ಷವಾಗಿ ನೋಡಿದವರೆಲ್ಲರೂ ಧನ್ಯರು. ಪ್ರತ್ಯಕ್ಷವಾಗಿ ನೋಡಲಾಗದಿದ್ದರೂ ಈ ವಿಶೇಷವನ್ನು ಕೇಳಿತಿಳಿದವರಿಗೆ ಅನೇಕ ಭಾಗ್ಯಗಳು ಲಭಿಸುತ್ತವೆ. ಈ ವಿಶೇಷವನ್ನು ಓದಿದ ಸ್ತ್ರೀಯರೆಲ್ಲರೂ ನೂರು ವರ್ಷ ಸೌಭಾಗ್ಯದಿಂದಿರುತ್ತಾರೆ. ವಿವಾಹ ಆಲಸ್ಯವಾಗುತ್ತಿರುವ ಕನ್ಯೆಯರಿಗೆ ಕೂಡಲೇ ವಿವಾಹವಾಗುತ್ತದೆ. ದುರದೃಷ್ಟದಿಂದ ಗಂಡನನ್ನು ಕಳೆದುಕೊಂಡ ಸ್ತ್ರೀಯರು ಓದಿದರೆ ಮರುಜನ್ಮದಲ್ಲಿ ದೀರ್ಘಸುಮಂಗಳಿಯರಾಗಿ ನೂರು ವರ್ಷ ಗಂಡ, ಮಕ್ಕಳೊಂದಿಗೆ ಸುಖವಾಗಿ ಬಾಳುತ್ತಾರೆ. ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ವಿಶೇಷವನ್ನು ಓದಿದವರಿಗೆ ಸಕಲ ಶುಭಗಳಾಗುತ್ತವೆ. ಪ್ರತ್ಯೇಕವಾಗಿ ಈ ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ವಿಶೇಷವನ್ನು ಶುಕ್ರವಾರ ಓದಿದರೆ ಅವರಿಗೆ ಮತ್ತಷ್ಟು ಫಲಗಳು ಸಿದ್ಧಿಸುತ್ತವೆ. ಶ್ರೀ ಪದ್ಮಾವತಿ ಶ್ರೀನಿವಾಸರು ವಾಸಮಾಡುವ ಶೇಷಾಚಲವು ಮುಂದೆ ತುಂಬಾ ಪ್ರಸಿದ್ಧ ಪುಣ್ಯಕ್ಷೇತ್ರವಾಗಿ ವಿರಾಜಿಸುತ್ತದೆ. ನಾನು ಆ ಕ್ಷೇತ್ರಪಾಲಕನಾಗಿ ಇರುವೆನು' ಎಂದು ಹೇಳಲು ಬ್ರಹ್ಮನೊಡನೆ ಕೂಡಿ ಎಲ್ಲಾ ದೇವತೆಗಳೂ ಸಂತೋಷಪಟ್ಟರು.

ಆ ರಾತ್ರಿ ಬೃಹಸ್ಪತಿ ವಧುವರರಿಗೆ ಧ್ರುವ, ಅರುಂಧತಿ ನಕ್ಷತ್ರಗಳನ್ನು ಆಕಾಶದಲ್ಲಿ ತೋರಿಸಿ ನಕ್ಷತ್ರದರ್ಶನ ಮಾಡಿಸಿದರು. ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣ ವೈಭವ ಐದು ದಿನಗಳ ಕಾಲ ನಯನಾನಂದಕರವಾಗಿ ಸಾಗಿತು. ಆ ಐದು ದಿನಗಳು ವಿಶ್ವಕ್ಕೆಲ್ಲಾ ಕಲ್ಯಾಣ ಶೋಭೆಯೆ! ಕೊನೆಯ ದಿನ ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣಕ್ಕೆ ಬಂದವರೆಲ್ಲರಿಗೂ ಆಕಾಶರಾಜನು ಅನೇಕ ಬಹುಮಾನಗಳನ್ನು ಕೊಟ್ಟನು.

ದೇವತೆಗಳೆಲ್ಲರೂ ಆಕಾಶರಾಜ ದಂಪತಿಗಳಿಂದ, ಶ್ರೀ ಪದ್ಮಾವತಿ ಶ್ರೀನಿವಾಸರಿಂದ ಬೀಳ್ಕೊಂಡು ಅವರವರ ಲೋಕಗಳಿಗೆ ಹೊರಟುಹೋದರು. ಬ್ರಹ್ಮ, ರುದ್ರರು ಮತ್ತೆ ಕೆಲವು ಮುಖ್ಯಸ್ಥರು ಮಾತ್ರವೇ ಇದ್ದರು. ಇನ್ನು ಶ್ರೀನಿವಾಸನು ಪದ್ಮಾವತಿಯನ್ನು ಕರೆದುಕೊಂಡು ಶೇಷಾಚಲಕ್ಕೆ ಹೊರಡುವ ಶುಭ ಸಮಯ ಬಂದಿತು. ಆಗ ಆಕಾಶರಾಜ ಶ್ರೀನಿವಾಸನನ್ನು ಆಲಿಂಗಿಸಿ 'ತಂದೇ! ಶ್ರೀನಿವಾಸ! ಸಾಕ್ಷಾತ್ ಶ್ರೀಮಾನ್ನಾರಾಯಣನು ನೀನೇ ಆದರೂ ನಿನ್ನನ್ನು ಅಳಿಯನಾಗಿ ಪಡೆದ ನನ್ನ ಭಾಗ್ಯ ಏನೆಂದು ಹೇಳಲಿ.

ಆ ಶ್ರೀ ಮಹಾಲಕ್ಷ್ಮೀಯೇ ನನ್ನ ಪೂರ್ವಜನ್ಮ ಫಲವಾಗಿ ನನ್ನ ಕುಮಾರಿಯಾಗಿ ಜನಿಸಿದ್ದರಿಂದಲ್ಲವೇ ನನಗೆ ಈ ಭಾಗ್ಯ ಸಿಕ್ಕಿದ್ದು. ನಿಮ್ಮಿಬ್ಬರ ವಿವಾಹವನ್ನು ನೋಡಿದ ನಮ್ಮ ಜನ್ಮ ಧನ್ಯ. ಮನೆಯಲ್ಲಿ ಮುದ್ದಾಗಿ ಬೆಳೆಸಿದ ಪದ್ಮಾವತಿಯನ್ನು ಅತ್ತೆಮನೆಗೆ ಕಳುಹಿಸಿತ್ತಿದ್ದೇನೆ. ಈ ಸಮಸ್ತ ವಿಶ್ವಕ್ಕೆ ರಕ್ಷಾಕವಚನಾದ ನಿನ್ನ ಕೈಹಿಡಿದಿದ್ದಕ್ಕೆ ನನಗೆ ದುಃಖ ಸಂಶಯಗಳಿಲ್ಲ'

ಎಂದು ಹೇಳಿ ಅಳಿಯನಿಗೆ ಅನೇಕ ಉಡುಗೊರೆಯನ್ನು ಕೊಟ್ಟನು. ಮದುಮಗಳನ್ನು ಅತ್ತೆ ಮನೆಗೆ ಕಳುಹಿಸುವ ಹಾಡುಗಳ ಮಧ್ಯೆ ಪದ್ಮಾವತಿಯನ್ನು ಅಳಿಯ, ಅತ್ತೆಯಾದ ವಕುಳದೇವಿಗೆ ಒಪ್ಪಿಸಿದನು.

ಆಕಾಶರಾಜ ದಂಪತಿಗಳು ಕುಮಾರಿ ಪದ್ಮಾವತಿಯನ್ನು ಬಹಳ ಸಂಭ್ರಮದಿಂದ ಅತ್ತೆಮನೆಗೆ ಕಳುಹಿಸಿಕೊಟ್ಟರು. ನೂತನ ದಂಪತಿಗಳಾದ ಶ್ರೀನಿವಾಸ ಪದ್ಮಾವತಿಯರು ಅಲ್ಲಿದ್ದವರೆಲ್ಲರನ್ನೂ ಬೀಳ್ಕೊಂಡು ತಮ್ಮ ಪರಿವಾರದೊಂದಿಗೆ ಶೇಷಾಚಲಕ್ಕೆ ಪ್ರಯಾಣಮಾಡಿದರು. ಮಾರ್ಗಮಧ್ಯೆ ಅಗಸ್ತ್ಯಮುನಿ ಆಶ್ರಮ ಕಂಡಿತು. ಅಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿದರು. ಆಗ ಅಗಸ್ತ್ಯ ಮುನಿಯು ನೂತನ ದಂಪತಿಗಳ ಎದುರು ಬಂದು ಅನೇಕ ನಮಸ್ಕಾರಗಳನ್ನು ಮಾಡಿ 'ನಿಮಗೆ ನನ್ನ ನಮಸ್ಕಾರಗಳು. ನೀವು ಬರುವಿಕೆಯಿಂದ ನನ್ನ ಆಶ್ರಮ ಪಾವನವಾಯಿತು' ಎಂದು ಹೇಳಿ ಆಹ್ವಾನ ಮಾಡಿ ಬಹಳ ಅತಿಥಿ ಮರ್ಯಾದೆಯನ್ನು ಮಾಡಿ ಆ ದಂಪತಿಗಳಿಗೆ ಅನೇಕ ಸುಮಧುರ ಫಲಗಳನ್ನು ಕೊಟ್ಟನು. ಆ ಫಲಗಳಲ್ಲಿ ಸ್ವಲ್ಪ ಆ ದಂಪತಿಗಳು ತಿಂದರು. ಆಗ ಶ್ರೀನಿವಾಸನು ಅಗಸ್ತ್ಯನೊಡನೆ 'ಓ ಮಹರ್ಷಿ! ನಿನ್ನ ಅತಿಥಿ ಮರ್ಯಾದೆಯಿಂದ ನನಗೆ ಬಹಳ ಸಂತೋಷವಾಯಿತು. ಹೊಸ ದಂಪತಿಗಳು ಆರು ತಿಂಗಳಕಾಲ ಬೆಟ್ಟವನ್ನೇರಬಾರದು ಎಂಬ ನಿಯಮವಿರುವುದರಿಂದ ಈ ಆರು ತಿಂಗಳಕಾಲ ನಿನ್ನ ಆಶ್ರಮದಲ್ಲಿ ವಾಸಮಾಡಬೇಕೆಂದು ನಿಶ್ಚಯಿಸಿದ್ದೇನೆ' ಎಂದೊ ಹೇಳಿದನು.

ಆಗ ಅಗಸ್ತ್ಯನು ಶ್ರೀನಿವಾಸನೊಡನೆ 'ಆಹಾ! ಜಗನ್ನಾಥ! ಜಗದ್ರಕ್ಷಕ! ಇದಕ್ಕೆ ಮೇಲಾದ ಭಾಗ್ಯವೇನಿದೆ? ನಿಮಗಾಗಿ ಒಳ್ಳೆಯ ಪರ್ಣಶಾಲೆಯನ್ನು ನಿರ್ಮಿಸುತ್ತೇನೆ. ನೀವು ನನ್ನ ಆಶ್ರಮದಲ್ಲೇ ಈ ಆರುತಿಂಗಳು ಸಂತೋಷದಿಂದ ಕಳೆಯಿರಿ' ಎಂದು ಹೇಳಿ ಶಿಷ್ಯರನ್ನು ಕರೆದು ಈ ಕೆಲಸವನ್ನು ಅವರಿಗೆ ಒಪ್ಪಿಸಿದನು. ಕೂಡಲೇ ಅಗಸ್ತ್ಯರ ಶಿಷ್ಯರೆಲ್ಲರೂ ಸೇರಿ ಆಶ್ರಮದಲ್ಲೇ ಅತಿಸುಂದರವಾಗಿರುವ ಪ್ರದೇಶವನ್ನು ಆರಿಸಿ ಅಲ್ಲಿ ಹೂದೋಟದ ಮಧ್ಯೆ ಚೆಂದದ ಪರ್ಣಶಾಲೆಯನ್ನು ನಿರ್ಮಿಸಿದರು.

ಬೃಹಸ್ಪತಿ ವೇದಮಂತ್ರವನ್ನು ಪಠಿಸುತ್ತಿರಲು ಆಶ್ರಮದಲ್ಲಿ ಮುನೀಶ್ವರರ ಆಶೀರ್ವಚನದೊಂದಿಗೆ ನೂತನ ದಂಪತಿಗಳಾದ ಶ್ರೀ ಪದ್ಮಾವತಿ ಶ್ರೀನಿವಾಸರು ಗೃಹಪ್ರವೇಶ ಮಾಡಿದರು. ಅಲ್ಲಿಯ ಪ್ರಕೃತಿ ಸೌಂದರ್ಯಕ್ಕೆ ಶ್ರೀನಿವಾಸ ಪದ್ಮಾವತಿಯರ ಹೃದಯ ಪುಲಕರಿಸಿತು. ಪಕ್ಷಿಗಳ ಕಲರವ, ಸುಮನೋಹರವಾದ ಹೂಗಳ ಮೊಗ್ಗೆ, ಚೆಂದದ ಸೆಲೆಗಳ ಮಧ್ಯೆ ಈ ಪರ್ಣಶಾಲೆಯ ವಾತಾವರಣ ಆ ದಂಪತಿಗಳಿಗೆ ತುಂಬಾ ಆನಂದ ಕೊಟ್ಟಿತು. ಶ್ರೀ ಪದ್ಮಾವತಿ ಶ್ರೀನಿವಾಸರು ನೆಲೆಸಿದ ಈ ಪ್ರದೇಶವೇ ಈಗಿನ 'ಶ್ರೀನಿವಾಸ ಮಂಗಾಪುರ'.

ಆರು ತಿಂಗಳಕಾಲ ಅಲ್ಲಿ ನಿವಾಸಮಾಡಿದಮೇಲೆ ಶ್ರೀನಿವಾಸ, ಪದ್ಮಾವತಿಯರು ಅಗಸ್ತ್ಯ ಮುನಿಯಿಂದ ಬೀಳ್ಕೊಂಡು ಶೇಷಾಚಲಕ್ಕೆ ಹೊರಟುಹೋದರು. ಆಗ ಶ್ರೀನಿವಾಸ ಪದ್ಮಾವತಿಯೊಡನೆ 'ಓ ಸಖಿ! ಶೇಷಾಚಲದಲ್ಲಿ ಬೇಸೊಪ್ಪು ಸಿಗುವುದಿಲ್ಲ. ಆದುದರಿಂದ ಅದನ್ನು ನಮ್ಮೊಟ್ಟಿಗೆ ತೆಗೆದುಕೊಂಡು ಹೋಗೋಣ' ಎಂದು ಹೇಳಲು ಪದ್ಮಾವತಿ ಹಾಗೆಯೇ ಮಾಡಿದಳು. ಬಂಧುಮಿತ್ರ ಸಪರಿವಾರಸಮೇತ ಶೇಷಾಚಲ ಸೇರಿದ ಮೇಲೆ ಬ್ರಹ್ಮ, ರುದ್ರರು ಮತ್ತು ಇತರ ದೇವತೆಗಳು ಪುಷ್ಪವೃಷ್ಟಿ ಮಾಡುತ್ತಿರಲು ಶ್ರೀನಿವಾಸನು ಹೃದಯಲಕ್ಷ್ಮಿ ಸಮೇತವಾಗಿ ಆನಂದ ನಿಲಯಕ್ಕೆ ಪ್ರವೇಶಿಸಿದರು. ಪದ್ಮಾವತಿಯು ಹೃದಯಲಕ್ಷ್ಮಿಯಾಗಿ

ಶ್ರೀನಿವಾಸನ ಎದೆಯನ್ನಲಂಕರಿಸಿದಳು. ಆಕಾಶದಿಂದ ದೇವತೆಗಳು ಪುಷ್ಪವೃಷ್ಟಿಮಾಡಿದರು. ದೇವದುಂದುಭಿಗಳು ಮೊಳಗಿದವು. ಶ್ರೀನಿವಾಸನ ಆನಂದನಿಲಯದ ಪ್ರವೇಶವನ್ನು ಉದ್ದೇಶಿಸಿ ಬ್ರಹ್ಮ ಉತ್ಸವವನ್ನು ಹತ್ತುದಿನಗಳ ಕಾಲ ದಿವ್ಯವಾಗಿ ನಡೆಸಿದನು. ಇದೇ "ಬ್ರಹ್ಮೋತ್ಸವ"ವೆಂದು ಈಗ ಪ್ರತಿವರ್ಷ ದಿವ್ಯವಾಗಿ ಆಚರಿಸಲಾಗುತ್ತಿದೆ. ಶ್ರೀ ಪದ್ಮಾವತಿ ಶ್ರೀನಿವಾಸರ ಕಲ್ಯಾಣ ವಿಶೇಷವನ್ನು ಕೇಳಿದವರ, ಓದಿ ತಿಳಿದವರ ಜನ್ಮ ಧನ್ಯ. ಇವರೆಲ್ಲರಿಗೆ ಆ ದಿವ್ಯ ದಂಪತಿಗಳ ಅನುಗ್ರಹ ತಪ್ಪದೆ ಸಿಗುತ್ತದೆ. ಶ್ರೀ ಲಕ್ಷ್ಮೀಶ್ರೀನಿವಾಸರ ಕಲ್ಯಾಣ ವಿಶೇಷವನ್ನು ತಿಳಿದವರ ಜೀವನವು ಯಾವ ಸಮಸ್ಯೆಯೂ ಇಲ್ಲದೆ ಕಲ್ಯಾಣಪ್ರದವಾಗಿ ನಡೆಯುತ್ತದೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||

ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇಽರ್ಥಿನಾಮ್ |
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಂ ||

|| ಶ್ರೀ ಲಕ್ಷ್ಮೀ ಶ್ರೀನಿವಾಸ ಕಟಾಕ್ಷ ಸಿದ್ಧಿರಸ್ತು ||

|| ಇತಿ ಶ್ರೀ ಪದ್ಮಾವತಿ ಪರಿಣಯ ಸಂಪೂರ್ಣಮ್ ||



